## ರಂಗೋಲಿ ಮೆಟ್ರೊ ಕಲಾ ಕೇಂದ್ರದಲ್ಲಿ ಕೊಳಲು ವಾದನ


ಉದಯವಾಹಿನಿ ಚಿತ್ರ

• ಉದಯವಾಹಿನಿ ಬೆಂಗಳೂರು

ಮೆಟ್ರೋ ರೈಲ್ ನಿಗಮ ನಿಯಮಿತ ವತಿಯಿಂದ 79ನೇ ಸ್ವಾತಂತ್ರೋತ್ಸವದ ಪ್ರಯುಕ್ತ ಎಂ.ಜಿ. ರಸ್ತೆಯಲ್ಲಿರುವ ರಂಗೋಲಿ ಮೆಟ್ರೊ ಕಲಾ ಕೇಂದ್ರದಲ್ಲಿ ಏರ್ಪಡಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ 'ಕರ್ನಾಟಕ ಕಲಾಶ್ರೀ' ಪ್ರಶಸ್ತಿ ಪುರಸ್ಕೃತ ಶ್ರೀ ಹೆಚ್.ಎಸ್. ವೇಣುಗೋಪಾಲ್ ಅವರ ನಿರ್ದೇಶನದಲ್ಲಿ ಗೋಕುಲ ಧ್ವನಿ ತಂಡದ ಕಲಾವಿದರಾದ ಶ್ರೀ ಪ್ರತೀಕ್ ಆಚಾರ್ಯ, ಶ್ರೀ ಸುಧನ್ವ ಟಿ. ಮಣೂರ್, ಶ್ರೀ ಶರತ್ ಚಂದ್ರ, ಶ್ರೀ ಚಿರಾಗ್ ಎಸ್. ರಾವ್ ಮತ್ತು ಶ್ರೀ ದೀಪಕ್ ನಾರಾಯಣನ್ ಇವರುಗಳು ಕೊಳಲು ವಾದನ ಹಾಗೂ ಶ್ರೀ ಶ್ರೀಹರಿ ಭಟ್ ಮೃದಂಗ ವಾದನದಲ್ಲಿ ಕಾರ್ಯಕ್ರಮ ನಡೆಸಿಕೊಟ್ಟರು.

## ಬಡವರಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಉಚಿತ ಆರೋಗ್ಯ ಶಿಬಿರ


ಉದಯವಾಹಿನಿ ಚಿತ್ರ

• ಉದಯವಾಹಿನಿ ಕೆ.ಆರ್.ಪುರ

ಬಡವರಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಉಚಿತ ಆರೋಗ್ಯ ಶಿಬಿರ ಎಂದು ಅಲ್ಟೋರ್ ಆಸ್ಪತ್ರೆ ವೈದ್ಯ ಡಾ.ಲವೀನ್ ಗೌಡ ತಿಳಿಸಿದರು. ಕ್ಷೇತ್ರದ ಗೋಕುಲ ಬಡಾವಣೆಯ ಅಲ್ಟೋರ್ ಆಸ್ಪತ್ರೆ ವತಿಯಿಂದ ಉಚಿತ ಆರೋಗ್ಯ ಶಿಬಿರ ಹಾಗೂ ರಕ್ತದಾನ ಶಿಬಿರದಲ್ಲಿ ಭಾಗಿಯಾಗಿ ಮಾತನಾಡಿದ ಅವರು, ಬಡವರಿಗೆ ಸೇವೆ ಒದಗಿಸುವ ಕಾರ್ಯ ಮಾಡಿದ್ದೇವೆ. ಮುಂದಿನ ದಿನಗಳಲ್ಲಿ ಅಲ್ಟೋರ್ ಆಸ್ಪತ್ರೆಯಲ್ಲಿ ಉತ್ತಮ ಆರೋಗ್ಯ ಸೇವೆಗಳನ್ನು ನೀಡುವ ಪ್ರಯತ್ನಿಸಲಾಗುವುದು ಎಂದರು. ಸಾಮಾನ್ಯ ರೋಗಗಳ ತಪಾಸಣೆ, ಹೃದಯ ಸಂಬಂಧಿ ಕಾಯಿಲೆ, ಕಿವಿ, ಹಲ್ಲು ಇಸಿಜಿ, ಮೂಳೆ ಸಾಂದ್ರತೆ, ರಕ್ತದೊತ್ತಡ, ಮಧುಮೇಹ ಸೇರಿದಂತೆ ವಿವಿಧ ತಪಾಸಣೆ ನಡೆಸಲಾಯಿತು. ಅಗತ್ಯವಿರುವವರಿಗೆ ಔಷಧಿ ವಿತರಿಸಲಾಯಿತು. ಈ ಸಂಧರ್ಭದಲ್ಲಿ ಬಿಜೆಪಿ ಮುಖಂಡ ಶ್ರೀರಾಮುಲು, ಡಾ.ವಿನಾಯಕ, ಡಾ.ಹರೀಣಿ, ಡಾ.ಲವೀನ್, ಡಾ.ಮೆಲ್ವಿನ್, ಡಾ.ಆಕಾಶ್, ಡಾ.ಅಪೂರ್ವ ಇದ್ದರು.

## ಸಾಮೂಹಿಕ ಗೆಜ್ಜೆಪೂಜೆ- ಕಲಾಂತರಿಕ್ಷಂ ನೃತ್ಯಕ್ಷೇತ್ರ ಅರ್ಪಣೆ


ಉದಯವಾಹಿನಿ ಚಿತ್ರ

• ಉದಯವಾಹಿನಿ ಬೆಂಗಳೂರು

ನೃತ್ಯರಂಗದಲ್ಲಿ ಸದ್ದಿಲ್ಲದೆ ಸಾಧನಾ ಪಥದಲ್ಲಿ ಸಾಗುತ್ತಿರುವ ನೃತ್ಯಸಂಸ್ಥೆ ಕಲಾಂತರಿಕ್ಷಂ ನೃತ್ಯಕ್ಷೇತ್ರ. ಕಳೆದ ಮೂರು ದಶಕಗಳಿಂದ ಅನೇಕ ಖ್ಯಾತ ನೃತ್ಯಜ್ಞರಿಂದ ತರಬೇತಿಗೊಂಡಿರುವ ನೃತ್ಯ ಕಲಾವಿದೆ, ಗುರುವಾಗಿ ನಿರಂತರ ನೃತ್ಯ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಶ್ರೀಮತಿ ಸುನೀತಾ ಅರವಿಂದ್ ಏನಾದರೂ ಹೊಸತನ್ನು ಮಾಡುವ ಅತ್ಯುತ್ಸಾಹಿ. ತಮ್ಮ ನೃತ್ಯಸಂಸ್ಥೆಯ ಮೂಲಕ ಉದಯೋನ್ಮುಖ ಪ್ರತಿಭೆಗಳಿಗೆ ಅಪಾರ ಪ್ರೋತ್ಸಾಹ ನೀಡುವ ಗುರು ಸುನೀತಾ, ಶಿಸ್ತುಬದ್ಧ ನೃತ್ಯ ಶಿಕ್ಷಣ ನೀಡುವುದರೊಂದಿಗೆ ಕಲಾವಿದರಿಗೆ ಸೂಕ್ತ ವೇದಿಕೆಗಳನ್ನು ಕಲ್ಪಿಸಿಕೊಡುತ್ತಿರುವುದು ಅವರ ವಿಶೇಷ.

ಕಲಾಂತರಿಕ್ಷಂ ನೃತ್ಯಕ್ಷೇತ್ರದ ವೈಶಿಷ್ಟ್ಯವೆಂದರೆ ಒಂದೇ ಸೂರಿನಡಿ ಉತ್ತಮ ಭರತನಾಟ್ಯ ಶಿಕ್ಷಣದ ಜೊತೆ ಕರ್ನಾಟಕ ಶಾಸ್ತ್ರೀಯ ಸಂಗೀತವನ್ನೂ ಕಲಿಸುತ್ತ ಸಂಪೂರ್ಣ ಕಲಾವಿದರನ್ನು ರೂಪಿಸುತ್ತ ಬಂದಿರುವುದು. ವಿದ್ಯಾರ್ಥಿಗಳಲ್ಲಿ ಮೂಲಭೂತವಾಗಿರಬೇಕಾದ ನೃತ್ಯಜ್ಞಾನ ಮತ್ತು ಪ್ರಾತ್ಯಕ್ಷಿಕೆಗಳ ಮೂಲಕ ನಮ್ಮ ಕಲಾ ಸಂಸ್ಕೃತಿಯ ಬಗ್ಗೆ ಉತ್ತಮ ಮಾರ್ಗದರ್ಶನ- ಅರಿವು ಮೂಡಿಸುವ ಕಾರ್ಯದಲ್ಲಿ ನಿರತವಾಗಿದೆ. ಬೇರುಮಟ್ಟದಿಂದ ಗಟ್ಟಿಯಾದ ಅಡಿಪಾಯ ಹಾಕುವ ಪ್ರಯತ್ನ ಸುನೀತಾ ಅರವಿಂದ್ ಅವರದಾಗಿದೆ. ಪ್ರಸ್ತುತ ಇದೇ ತಿಂಗಳ 22 ಶುಕ್ರವಾರದಂದು ಸಂಜೆ 4 ಗಂಟೆಯಿಂದ ಜಯನಗರದ ಜೆ.ಎಸ್.ಎಸ್. ಆಡಿಟೋರಿಯಂನಲ್ಲಿ ಉದಯೋನ್ಮುಖ ನೃತ್ಯಾಭ್ಯಾಸಿಗಳ ಜೀವನದ ಪ್ರಮುಖ ಘಟ್ಟವಾದ ಪ್ರದರ್ಶನಾ ರಂಗವನ್ನು ಪ್ರವೇಶಿಸುವ ಪ್ರಥಮ ಹೆಜ್ಜೆ- 'ಸಾಮೂಹಿಕ ಗೆಜ್ಜೆಪೂಜೆ' ಕಾರ್ಯಕ್ರಮವನ್ನು 'ಕಲಾಂತರಿಕ್ಷಂ' ಹಮ್ಮಿಕೊಂಡಿದೆ. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ನೃತ್ಯಗುರು ಡಾ. ಎ. ಚಿತ್ರಾ ಮತ್ತು ಲೇಖಕಿ- ಕಲಾ ವಿಮರ್ಶಕಿ ವೈ.ಕೆ.ಸಂಧ್ಯಾ ಶರ್ಮ ಭಾಗವಹಿಸುವರು. ಈ ಕಲಾಪ್ರಪೂರ್ಣ ವರ್ಣರಂಜಿತ ನೃತ್ಯರಮ್ಯತೆಯನ್ನು ಕಣ್ತುಂಬಿಕೊಳ್ಳಲು ಎಲ್ಲ ಕಲಾರಸಿಕರಿಗೂ ಆದರದ ಸ್ವಾಗತ.

# ನಮ್ಮ ಮೆಟ್ರೋ ಹಳದಿ ಮಾರ್ಗದಲ್ಲಿ ಶೀಘ್ರ 15 ನಿಮಿಷಕ್ಕೊಂದು ರೈಲು

### ಮೂರು ರೈಲು ಓಡುತ್ತಿರುವುದರಿಂದ ಪ್ರತಿ 25 ನಿಮಿಷಕ್ಕೆ ಒಂದು ರೈಲು ಸಂಚಾರ

• ಉದಯವಾಹಿನಿ ಬೆಂಗಳೂರು

ನಮ್ಮ ಮೆಟ್ರೋ ಹಳದಿ ಮಾರ್ಗಕ್ಕೆ ನಾಲ್ಕನೇ ರೈಲು ಆಗಮಿಸಿದ್ದು, ಕೆಲವೇ ದಿನಗಳಲ್ಲಿ ಸಂಚಾರಕ್ಕೆ ಸಿದ್ಧವಾಗಲಿದೆ. ಇದರಿಂದ ರೈಲುಗಳ ಸಂಚಾಧಿರದ ಫ್ರೀಕ್ವೆನ್ಸಿ ಇನ್ನಷ್ಟು ತಗ್ಗುವ ಸಾಧ್ಯತೆಯಿದೆ.

ಪ್ರಸ್ತುತ ನಮ್ಮ ಮೆಟ್ರೋ ಆರ್.ವಿ.ರಸ್ತೆ – ಬೊಮ್ಮಸಂದ್ರ ಮಾರ್ಗದಲ್ಲಿ ಮೂರು ರೈಲುಗಳು ಸಂಚಾರ ನಡೆಸುತ್ತಿದ್ದು, ನಾಲ್ಕನೇ ರೈಲಿನ ಒಂದು ಬೋಗಿ ಬಿಎಂಆರ್‌ಸಿಎಲ್‌ಗೆ ಬಂದು ಸೇರಿದೆ. ಉಳಿದ ಐದು ಬೋಗಿಗಳು ಎರಡು ದಿನಗಳೊಳಗೆ ಬಂದು ಸೇರಲಿವೆ. ಸದ್ಯ ಮೂರು ರೈಲು ಓಡುತ್ತಿರುವುದರಿಂದ ಪ್ರತಿ 25 ನಿಮಿಷಕ್ಕೆ ಒಂದು ರೈಲು ಸಂಚಾರ ನಡೆಸುತ್ತಿದೆ. ಇದರಿಂದ ಮೆಟ್ರೋದಲ್ಲಿ ಕಾಲಿಡುವುದಕ್ಕೂ ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆ. ನಾಲ್ಕನೇ ರೈಲು ಸಂಚಾರಕ್ಕೆ ಸಿದ್ಧವಾದ ನಂತರ ಪ್ರತಿ 15 ನಿಮಿಷಕ್ಕೆ ಒಂದು ರೈಲು ಓಡಿಸಲು ಸಾಧ್ಯವಾಗುತ್ತದೆ. ಹೀಗೆ, ರೈಲುಗಳ ಸಂಖ್ಯೆ ಹೆಚ್ಚಾದಂತೆ ಸಂಚಾರದ ಫ್ರೀಕ್ವೆನ್ಸಿ ಕೂಡ ಕಡಿಮೆಯಾಗಲಿದೆ. ಈ ಮಾರ್ಗಕ್ಕೆ ಒಟ್ಟು 15 ರೈಲುಗಳ ಅಗತ್ಯವಿದೆ. ಅವೆಲ್ಲಾ ಬಂದ ನಂತರ ಪ್ರತಿ 5 ನಿಮಿಷಕ್ಕೊಂದು ರೈಲು ಓಡಿಸಲು ಸಾಧ್ಯವಾಗಲಿದೆ.

ಹೊಸ ರೈಲನ್ನು ಪ್ರಯಾಣಿಕರ ಸೇವೆಗೆ ಸೇರ್ಪಡೆ ಮಾಡುವ ಮೊದಲು ಸುಮಾರು ಮೂರು ವಾರಗಳ ಕಾಲ ಮುಖ್ಯ




ಮಾರ್ಗದಲ್ಲಿ ಪರೀಕ್ಷಿಸಲಾಗುತ್ತದೆ. ಆನಂತರ ವಾಣಿಜ್ಯ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗುವುದು. ಸೆಪ್ಟೆಂಬರ್ ವೇಳೆಗೆ ಇನ್ನೂ ಎರಡು ರೈಲುಗಳು ಪೂರೈಕೆಯಾಗಲಿದ್ದು, 2026ರ ಮಾರ್ಚ್ ವೇಳೆಗೆ ಎಲ್ಲಾ 15 ರೈಲುಗಳು ಈ ಮಾರ್ಗದಲ್ಲಿ ಸಂಚಾರ ನಡೆಸುವ ನಿರೀಕ್ಷೆ ಇಯಿದೆ.

ಸದ್ಯ ಹಳದಿ ಮಾರ್ಗದಲ್ಲಿ 25 ನಿಮಿಷಕ್ಕೊಂದು ರೈಲು ಸಂಚಾರ ನಡೆಸುತ್ತಿರುವುದರಿಂದ ಈ ಮಾರ್ಗಕ್ಕೂ ಮೆಟ್ರೋ ನಿಯಮದಡಿ ದಂಡ ವಿಧಿಸುತ್ತಿರುವುದು ಪ್ರಯಾಣಿಕರ ಕೆಂಗಣ್ಣಿಗೆ ಗುರಿಯಾಗುವಂತೆ ಮಾಡಿದೆ.

ಹಸಿರು, ನೇರಳೆ ಮಾರ್ಗದಲ್ಲಿ ಮೂರು ನಿಮಿಷಕ್ಕೊಂದು ಹಾಗೂ ಉಳಿದೆಡೆ 10 ನಿಮಿಷಕ್ಕೆ ಒಂದರಂತೆ ಮೆಟ್ರೋ ರೈಲು ಸಂಚಾರ ಮಾಡುತ್ತಿವೆ. ಅಂತಹ ನಿಲ್ದಾಣಗಳಲ್ಲಿಹೆಚ್ಚು ಹೊತ್ತು ಕಳೆದರೆ ದಂಡ ವಿಧಿಸುವುದರಲ್ಲಿಒಂದು ಅರ್ಥವಿದೆ. ಆದರೆ, ಹಳದಿ ಮಾರ್ಗದಲ್ಲಿ ಕೇವಲ ಮೂರು ರೈಲು ಸಂಚಾರ ಮಾಡುತ್ತಿವೆ. ಒಂದು ರೈಲು ಹೋಗಿ ಇನ್ನೊಂದು ರೈಲು ಬರುವುದಕ್ಕೆ 25 ನಿಮಿಷ ಬೇಕು. ಒಂದು ವೇಳೆ ರೈಲು ಮಿಸ್ ಮಾಡಿಕೊಂಡರೆ ಮುಂದಿನ ರೈಲು ಬರುವವರೆಗೂ ಪ್ರಯಾಣಿಕ ನಿಲ್ದಾಣದೊಳಗೆ ಕಾಯಬೇಕು. ಹೀಗಾಗಿ, ಸದ್ಯ ಹಳದಿ ಲೈನ್‌ನಲ್ಲಿ ಹೊಸ ರೀತಿಯ ಗೊಂದಲಗಳು ಸೃಷ್ಟಿಯಾಗುತ್ತಿದ್ದು, ಪ್ರಯಾಣಿಕರಿಗೆ ತೊಂದರೆಯುಂಟಾಗಿದೆ.

**ಕಳಿತುಕೊಳ್ಳುವುದಕ್ಕೆ ಕುರ್ಚಿ ಕಲ್ಪಿಸಿ:** ಹಳದಿ ಮಾರ್ಗದ ಹುಸ್ಕೂರು ಮೆಟ್ರೋ ನಿಲ್ದಾಣದಲ್ಲಿ ಕುಳಿತುಕೊಳ್ಳುವುದಕ್ಕೆ ಒಂದೇ ಒಂದು ಕುರ್ಚಿ ವ್ಯವಸ್ಥೆ ಕೂಡ ಇಲ್ಲ. ಮೆಟ್ರೋ ಕಾಯುವಿಕೆ ಅವಧಿ ಹೆಚ್ಚಾಗಿರುವುದರಿಂದ ವಯಸ್ಸಾದವರು, ಗರ್ಭಿಣಿಯರು ನಿಂತೇ ರೈಲು ಕಾಯುವುದಕ್ಕೆ ಕಷ್ಟವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕನಿಷ್ಠ 10 ಆಸನಗಳ ವ್ಯವಸ್ಥೆ ಮಾಡಬೇಕು ಎಂದು ಪ್ರಯಾಣಿಕರು ಒತ್ತಾಯಿಸಿದ್ದಾರೆ.

**ಪ್ರಯಾಣಿಕನಿಗೆ ದಂಡ**

ನಮ್ಮ ಮೆಟ್ರೋ ಹಳದಿ ಮಾರ್ಗದಲ್ಲಿ ಪ್ರಯಾಣಿಕರೊಬ್ಬರು 20 ನಿಮಿಷಕ್ಕಿಂತ ಹೆಚ್ಚು ಸಮಯ ಕಾದಿದ್ದಕ್ಕೆ 50 ರೂ. ದಂಡ ಪಾವತಿಸಿದ್ದಾರೆ. ಸಿಲ್ಕ್ ಬೋರ್ಡ್ ನಿಂದ ಆರ್.ವಿ. ರಸ್ತೆಗೆ ಪ್ರಯಾಣಿಸಬೇಕಿದ್ದ ಅವರು ಟಿಕೆಟ್ ಪಡೆದು ಒಳಗೆ ಹೋಗಿದ್ದಾರೆ. ರೈಲು ಬರುವವರೆಗೂ ಕಾದಿದ್ದಾರೆ. ಆದರೆ, ಪ್ರಯಾಣಿಕರ ದಟ್ಟಣೆ ಇದ್ದುದರಿಂದ ರೈಲು ಹತ್ತಲು ಸಾಧ್ಯವಾಗಿಲ್ಲ. ಬಳಿಕ ಮುಂದಿನ ರೈಲಿಗಾಗಿ 25 ನಿಮಿಷ ಕಾಯಲು ಸಾಧ್ಯವಾಗದ ಹಿನ್ನೆಲೆಯಲ್ಲಿನಿಲ್ದಾಣದಿಂದ ಹೊರ ಬರಲು ತೀರ್ಮಾನಿಸಿದ್ದಾರೆ. ಆದರೆ, ಹೊರಗೆ ಬರುವಾಗ 20 ನಿಮಿಷಕ್ಕಿಂತ ಹೆಚ್ಚು ಸಮಯ ನಿಲ್ದಾಣದಲ್ಲಿ ಉಳಿದುಕೊಂಡ ಹಿನ್ನೆಲೆಯಲ್ಲಿ ಬಿಎಂಆರ್‌ಎಲ್ ಸಿಬ್ಬಂದಿ 50 ರೂ. ದಂಡ ವಿಧಿಸಿದ್ದಾರೆ.

## ಪಶ್ಚಿಮ ಘಟ್ಟಗಳಿಗೆ ಭೇಟಿ ನೀಡಲು ಶೀಘ್ರದಲ್ಲೇ ಇ-ಪಾಸ್ ಜಾರಿ

• ಉದಯವಾಹಿನಿ ಬೆಂಗಳೂರು

ಪ್ರವಾಸೋದ್ಯಮವನ್ನು ಸುಸ್ಥಿರವಾಗಿ ನಿರ್ವಹಿಸುವ ಮತ್ತು ಪಶ್ಚಿಮ ಘಟ್ಟಗಳನ್ನು ರಕ್ಷಿಸುವ ಪ್ರಯತ್ನದ ಭಾಗವಾಗಿ, ಊಟಿ ಮತ್ತು ಕೊಡೈಕೆನಾಲ್ ಸೇರಿದಂತೆ ಹಲವಾರು ಜನಪ್ರಿಯ ಪ್ರವಾಸಿ ತಾಣಗಳು ಈಗ ಹಸಿರು ಪಾಸ್ ಅಥವಾ ಇ-ಪಾಸ್ ಅಳವಡಿಸಿಕೊಳ್ಳುವ ಬಗ್ಗೆ ಯೋಚಿಸುತ್ತಿವೆ.

ಉತ್ತರಾಖಂಡ, ಇತರ ಹಿಮಾಲಯ ಪ್ರದೇಶಗಳಲ್ಲಿ ಜಾರಿಗೊಳಿಸಿದಂತೆಯೇ ಪಶ್ಚಿಮ ಘಟ್ಟಗಳಿಗೂ ಹೆಚ್ಚಿನ ಹಾನಿಯಾಗದಂತೆ ವಿವರವಾದ ಸಾಗಣೆ ಸಾಮರ್ಥ್ಯ ಅಧ್ಯಯನ ಸಹ ಕೈಗೊಳ್ಳಲಾಗುತ್ತಿದೆ. ಘಟ್ಟಗಳ ಸಾಗಣೆ ಸಾಮರ್ಥ್ಯ ಅಧ್ಯಯನವನ್ನು ಕೈಗೊಳ್ಳುವ ಕಾರ್ಯವನ್ನು ಪಶ್ಚಿಮ ಘಟ್ಟಗಳ ಕಾರ್ಯಪಡೆ ಸಮಿತಿ (WGTFC)ಗೆ ವಹಿಸಲಾಗಿದೆ. ಇತ್ತೀಚೆಗೆ ಸಲ್ಲಿಸಲಾದ ಮೌಲ್ಯಮಾಪನ ವರದಿಯಲ್ಲಿ, ಕರ್ನಾಟಕದ 10 ಜಿಲ್ಲೆಗಳಲ್ಲಿ, ಮುಖ್ಯವಾಗಿ ಕೊಡಗು, ಹಾಸನ, ಸಕಲೇಶಪುರ, ಶಿವಮೊಗ್ಗ, ಮಂಗಳೂರು, ಉತ್ತರ ಕನ್ನಡ ಮತ್ತು ಬೆಳಗಾವಿಯ ಜನಪ್ರಿಯ ಪ್ರವಾಸಿ ತಾಣಗಳಿಗೆ ಪಾಸ್ ಜಾರಿಗೊಳಿಸಲು ಸಮಿತಿ ಸೂಚಿಸಿದೆ. ಕೊಡಗಿನ


ಉದಯವಾಹಿನಿ ಚಿತ್ರ

ಉದಾಹರಣೆಯನ್ನು ಉಲ್ಲೇಖಿಸಿದ ಅರಣ್ಯ ಮತ್ತು ಜಿಲ್ಲಾಡಳಿತ ಅಧಿಕಾರಿಗಳು, ಹಲವು ಹೋಂಸ್ಟೇಗಳು ಮತ್ತು ರೆಸಾರ್ಟ್‌ಗಳಿಗಾಗಿಯೇ ಹಲವು ರಸ್ತೆಗಳಿವೆ ಎಂದು ಹೇಳಿದರು. ಎಲ್ಲಾ ರಸ್ತೆಗಳನ್ನು ಬ್ಯಾರಿಕೇಡ್ ಮಾಡಲು. ಪರಿಶೀಲಿಸಲು ಸಾಧ್ಯವಿಲ್ಲ. ಆದರೆ ಊಟಿ ಮತ್ತು ಕೊಡೈಕೆನಾಲ್‌ನಲ್ಲಿ, ಎರಡು ಸ್ಥಳಗಳಿಗೆ ಹೋಗುವ ರಸ್ತೆಗಳನ್ನು ಗುರುತಿಸಿರುವುದರಿಂದ ಇದು ತುಂಬಾ ಸುಲಭವಾಗಿದೆ. ನಿಯಂತ್ರಣ ಅಗತ್ಯವಿದೆ. ಕೊಡಗಿಗೆ ಭೇಟಿ ನೀಡುವವರ ಸಂಖ್ಯೆ ಹೆಚ್ಚುತ್ತಿದೆ ಮತ್ತು ಜನಸಂದಣಿಯನ್ನು ನಿರ್ವಹಿಸುವುದು ಕಷ್ಟಕರವಾಗುತ್ತಿದೆ. ನೋಂದಣಿ ಪ್ರಕ್ರಿಯೆಯನ್ನು ಪರಿಚಯಿಸುವುದರೊಂದಿಗೆ ಚಾರಣ ಮಾರ್ಗಗಳಲ್ಲಿ ನಿರ್ಬಂಧಗಳನ್ನು ಜಾರಿಗೊಳಿಸಲಾಗಿದೆ. ಆದರೆ ಎಲ್ಲಾ ಸ್ಥಳಗಳಿಗೆ ಅಲ್ಲ ಎಂದು ಕೊಡಗು ಜಿಲ್ಲಾಡಳಿತದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

> ವರದಿ ಸರ್ಕಾರದ ಮುಂದೆ ಇದೆ. ಸಂಬಂಧಪಟ್ಟವರ ಅಭಿಪ್ರಾಯ ಪಡೆದು ಇ-ಪಾಸ್ ಪರಿಚಯಿಸಲಾಗುವುದು. ಇದು ಪ್ರವಾಸೋದ್ಯಮವನ್ನು ನಿಯಂತ್ರಿಸುತ್ತದೆ, ಕಾನೂನುಬಾಹಿರ ಚಟುವಟಿಕೆಗಳನ್ನು ನಿಯಂತ್ರಿಸುತ್ತದೆ, ಜನಸಂದಣಿ ನಿರ್ವಹಣೆ ಮತ್ತು ಸುರಕ್ಷತೆಗೆ ಸಹಾಯ ಮಾಡುತ್ತದೆ ಎಂದು WGTFC ಅಧ್ಯಕ್ಷ ಮೊಹಮ್ಮದ್ ತಬ್ರೇಜ್ ಶರೀಫ್ TNIEಗೆ ಹೇಳಿದ್ದಾರೆ.

## ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ ಚಿರತೆ ದಾಳಿ



• ಉದಯವಾಹಿನಿ ಬೆಂಗಳೂರು

ಬೆಂಗಳೂರಿನ ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ ನಡೆದ ಚಿರತೆ ದಾಳಿಗೆ ಸಂಬಂಧಿಸಿದಂತೆ ಅರಣ್ಯ ಸಚಿವ ಈಶ್ವರ್ ಖಂಡ್ರೆ, ಸುರಕ್ಷತೆ ಆದ್ಯತೆ ನೀಡಿ, ವಾಹನಗಳಿಗೆ ಕಬ್ಬಿಣದ ಜಾಲರಿ ಅಳವಡಿಸಿ' ಎಂದು ಸೂಚನೆ ನೀಡಿದ್ದಾರೆ. ಮಧ್ಯಾಹ್ನ ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ ತನ್ನ ಕುಟುಂಬದೊಂದಿಗೆ ಚಿರತೆ ಸಫಾರಿಯಲ್ಲಿದ್ದ 12 ವರ್ಷದ ಬಾಲಕನ ಮೇಲೆ ಚಿರತೆಯೊಂದು ಆಕಸ್ಮಿಕವಾಗಿ ದಾಳಿ ಮಾಡಿತ್ತು.

ಸಫಾರಿ ವಾಹನದ ಕಿಟಕಿಯಲ್ಲಿ ಬಾಲಕ ಕೈ ಹಾಕಿದ್ದಾಗ ಚಿರತೆ ಏಕಾಏಕಿ ದಾಳಿ ಮಾಡಿ ತನ್ನ ಉಗುರುಗಳಿಂದ ಕೈ ಪರಚಿತ್ತು. ಇದರಿಂದ ಬಾಲ್ಕನಿಗೆ ಗಾಯವಾಗಿತ್ತು. ಸಫಾರಿ ಆವರಣದಲ್ಲಿದ್ದ ಚಿರತೆ ಸಫಾರಿ ವಾಹನ ಹತ್ತಲು ಪ್ರಯತ್ನಿಸಿದಾಗ, ಬಾಲಕ ತನ್ನ ಕೈಯನ್ನು ಜಾಲರಿಯಿಂದ ಹೊರಕ್ಕೆ ಹಾಕಿದ್ದ. ಮುಚ್ಚಿದ ಎಸಿ ಅಲ್ಲದ ಸಫಾರಿ ಬಸ್‌ನ ಹೊರಗೆ ಬಾಲಕ ಕೈ ಇಟ್ಟುಕೊಂಡಿದ್ದರಿಂದ ಚಿರತೆ ಆತನ ತೋಳನ್ನು ತನ್ನ ಪಂಜದಿಂದ ಹಿಡಿಯಲೆತ್ನಿಸಿದೆ. ಈ ವೇಳೆ ಉಗುರುಗಳಿಂದ ಬಾಲಕನಿಗೆ ಸಣ್ಣಪುಟ್ಟ ಗಾಯಗಳಾಗಿವೆ ಎಂದು ಬಿಬಿಎಂಪಿ ಸಿಬ್ಬಂದಿ ತಿಳಿಸಿದ್ದಾರೆ. ಚಿರತೆ ಬಾಲಕನ ಮೇಲೆ ದಾಳಿ ಮಾಡಲಿಲ್ಲ, ಚಿರತೆಯ ಚಲನವಲನಗಳ ಬಗ್ಗೆ ಬಾಲಕನಿಗೂ ತಿಳಿದಿರಲಿಲ್ಲ ಎಂದು ಕರ್ತವ್ಯದಲ್ಲಿದ್ದ ಸಿಬ್ಬಂದಿಯೊಬ್ಬರು ಟಿಎನ್‌ಐಇಗೆ ತಿಳಿಸಿದ್ದಾರೆ. ಕೂಡಲೇ ಸಫಾರಿ ವಾಹನವನ್ನು ತಕ್ಷಣವೇ ಮುಖ್ಯ ಕಚೇರಿಗೆ ತರಲಾಯಿತು. ಬಳಿಕ ಗಾಯಾಳು ಬಾಲಕನನ್ನು ಜಿಗಣಿ ಹತ್ತಿರದ ಆಸ್ಪತ್ರೆಗೆ ಕರೆದೊಯ್ದು ತಕ್ಷಣದ ವೈದ್ಯಕೀಯ ಚಿಕಿತ್ಸೆ ನೀಡಲಾಯಿತು.

**ಮುನ್ನೆಚ್ಚರಿಕಾ ಕ್ರಮ**

ಇನ್ನು ಬನ್ನೇರುಘಟ್ಟ ಜೈವಿಕ ಉದ್ಯಾನವನದ ಕಾರ್ಯನಿರ್ವಾಹಕ ನಿರ್ದೇಶಕ ಎವಿ ಸೂರ್ಯ ಸೇನ್ ಮಾತನಾಡಿ, ಸಫಾರಿ ವಾಹನ ಕ್ಯಾಮೆರಾ ಸ್ಲಾಟ್‌ಗಳು ಸೇರಿದಂತೆ ಬಸ್‌ಗಳ ಕಿಟಕಿಗಳನ್ನು ಕಬ್ಬಿಣದ ಜಾಲರಿಯಿಂದ ಮುಚ್ಚಲು ಎಲ್ಲಾ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಎಸಿ ಇಲ್ಲದ ಸಫಾರಿ ಬಸ್‌ಗಳನ್ನು ನಿರ್ವಹಿಸುವ ಚಾಲಕರು ಜಾಗರೂಕರಾಗಿರಲು ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲಾಗಿದೆ. ಈ ವಿಷಯದ ಬಗ್ಗೆ ತನಿಖೆ ನಡೆಸಲಾಗುತ್ತಿದೆ' ಎಂದು ಅವರು ಹೇಳಿದರು.

## ಆರೋಗ್ಯ ಕಾರ್ಯಕರ್ತೆಯರ ವೇತನ ಪಾವತಿ ಗೊಂದಲ ಬಗೆಹರಿಸಲು ಕ್ರಮ

• ಉದಯವಾಹಿನಿ ಬೆಂಗಳೂರು

ಬಿಬಿಎಂಪಿ ಆರೋಗ್ಯ ಕಾರ್ಯಕರ್ತೆಯರ ವೇತನ ಗೊಂದಲವನ್ನು ಅಧಿಕಾರಿಗಳ ಜತೆ ಚರ್ಚಿಸಿ, ಬಗೆಹರಿಸಲಾಗುವುದು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಭರವಸೆ ನೀಡಿದರು.

ಸದಾಶಿವನಗರದ ನಿವಾಸದ ಬಳಿ ಆಗಮಿಸಿದ್ದ ಬಿಬಿಎಂಪಿ ಆರೋಗ್ಯ ಸಂಪರ್ಕ ಕಾರ್ಯಕರ್ತೆಯರ ಅಹವಾಲು ಸ್ವೀಕರಿಸಿ ಮಾತನಾಡಿದರು.

ಆರೋಗ್ಯ ಕಾರ್ಯಕರ್ತೆಯರ ವೇತನ ಪಾವತಿ ಜವಾಬ್ದಾರಿ ಕುರಿತು ಚರ್ಚಿಸಲು ನಿಮ್ಮಲ್ಲಿ ಐದು ಜನರ ನಿಯೋಗದೊಂದಿಗೆ ಇನ್ನೊಮ್ಮೆ ನನ್ನನ್ನು ಭೇಟಿ ಮಾಡಿ. ನಿಮ್ಮ ಸಮಸ್ಯೆಗಳ ಬಗ್ಗೆ ಅಧಿಕಾರಿಗಳ ಜತೆ ಚರ್ಚಿಸಿ ಬಗೆಹರಿಸಲಾಗುವುದು ಎಂದು ಹೇಳಿದರು.

ಡಿಸಿಎಂ ಅವರಿಗೆ ಸಲ್ಲಿಸಿದ್ದ ಮನವಿಯಲ್ಲಿ,


ಉದಯವಾಹಿನಿ ಚಿತ್ರ

2017 ರಲ್ಲಿ ಎನ್ ಎಚ್ ಯುಎಂ ವತಿಯಿಂದ ಆಶಾ ಕಾರ್ಯಕರ್ತೆಯರನ್ನು ನೇಮಕ ಮಾಡಿಕೊಂಡ ಕಾರಣಕ್ಕೆ ಆರೋಗ್ಯ ಸಂಪರ್ಕ ಕಾರ್ಯಕರ್ತೆಯರನ್ನು ಘನತ್ಯಾಜ್ಯ ನಿರ್ವಹಣಾ ವಿಭಾಗಕ್ಕೆ ವರ್ಗವಣೆ ಮಾಡಲಾಯಿತು.

ಈಗ ಬಿ.ಎಸ್.ಡಬ್ಲ್ಯೂ.ಎಂ.ಎನ್ ಕಡೆಯಿಂದ ವೇತನ ಪಾವತಿ ಎಂದು ತಿಳಿಸಿರುತ್ತಾರೆ. ಕಳೆದ 30 ವರ್ಷಗಳಿಂದ ಪಾಲಿಕೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಹಿಳೆಯರಿಗೆ ಬಿಬಿಎಂಪಿಯಿಂದಲೇ ವೇತನ ಪಾವತಿ ವ್ಯವಸ್ಥೆ ಮಾಡಬೇಕು ಎಂದು ಕೋರಲಾಗಿದೆ.

> ಬಿಬಿಎಂಪಿ ಗುತ್ತಿಗೆದಾರರಿಂದ ನಿಮಗೆ ವೇತನ ಪಾವತಿ ಆಗುವುದಿಲ್ಲ. ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಸಂಸ್ಥೆಯನ್ನು (ಬಿಎಸ್ಡಬ್ಲ್ಯೂಎಂಎನ್) ಬೆಂಗಳೂರು ನಗರದ ಕಸ ನಿರ್ವಹಣೆಗೆಂದು ಸ್ಥಾಪಿಸಲಾಗಿದೆ. ಇದನ್ನು ಗುತ್ತಿಗೆದಾರರು ನಿರ್ವಹಣೆ ಮಾಡುವುದಿಲ್ಲ. ಇದರ ಮುಖ್ಯಸ್ಥರಾಗಿ ಐಎಎಸ್ ಅಧಿಕಾರಿಯೇ ಇರುತ್ತಾರೆ ಎಂದು ಹೇಳಿದರು.

## ಪಾದಚಾರಿ ಮಾರ್ಗದಲ್ಲಿ ಕಸದ ರಾಶಿ: ಮೂಗುಮುಚ್ಚಿ ನಡೆದಾಡುವ ದುಃಸ್ಥಿತಿ

• ಉದಯವಾಹಿನಿ ಬೆಂಗಳೂರು

ಪಾದಚಾರಿ ಮಾರ್ಗ ಸ್ವಚ್ಛವಾಗಿರಬೇಕು. ನಾಗರಿಕರು ನಡೆದಾಡಲು ಯಾವುದೇ ಅಡೆತಡೆ ಇರಬಾರದು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಕಟ್ಟಪ್ಪಣೆ ಹೊರಡಿಸಿದ್ದಾರೆ. ಆದರೆ, ಹಲಸೂರಿನ ಮುಖ್ಯರಸ್ತೆಯ ಪಾದಚಾರಿ ಮಾರ್ಗಗಳ ತುಂಬ ಕಸವೇ ತುಂಬಿದೆ.ಹಲಸೂರಿನ ಮುಖ್ಯರಸ್ತೆ ಪಾದಚಾರಿ ಮಾರ್ಗದಲ್ಲಿನಡೆಯಲು ಸಾಧ್ಯವಿಲ್ಲದಷ್ಟು ಕಸ ತುಂಬಿರುತ್ತದೆ. ಪಕ್ಕದಲ್ಲಿ ನಡೆಯಲೂ ಮೂಗುಮುಚ್ಚಿಕೊಳ್ಳಬೇಕಾದ ದುಃಸ್ಥಿತಿ ಇದೆ. ಇದೂ ಸಾಲದು ಎಂಬಂತೆ ಅಕ್ಕ ಪಕ್ಕದಲ್ಲಿರುವ ಖಾಲಿ ನಿವೇಶನಗಳೂ ಕಸದ ತೊಟ್ಟಿಗಳಾಗಿವೆ.

ಹಲಸೂರು ಮುಖ್ಯರಸ್ತೆಯ ಸುತ್ತಮುತ್ತಲಿನ ನಿವಾಸಿಗಳು ಕಸವನ್ನು ಖಾಲಿ ನಿವೇಶನ, ಪಾದಚಾರಿ ಮಾರ್ಗ, ಮುಖ್ಯರಸ್ತೆಯ ಬದಿಯಲ್ಲಿ ಎಸೆಯುತ್ತಿದ್ದಾರೆ. ಈ ಪ್ರದೇಶದಲ್ಲಿ ಎಲ್ಲಿ ನೋಡಿದರೂ ಕಸದ ರಾಶಿಯಿದ್ದು, ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವಂತಾಗಿದೆ.

ಕಸದಿಂದ ಸೊಳ್ಳೆಗಳು, ಕ್ರಿಮಿಕೀಟಗಳು ಉತ್ಪತ್ತಿಯಾಗುತ್ತಿದ್ದು, ಜನರಲ್ಲಿ ಸಾಂಕ್ರಾಮಿಕ ರೋಗ ಹರಡುವ ಭೀತಿ ಉಂಟಾಗಿದೆ. ದನ ಕರುಗಳು ಕಸದ ರಾಶಿಯಲ್ಲಿ ಸಿಗುವ


ಉದಯವಾಹಿನಿ ಚಿತ್ರ

ಪ್ಲಾಸ್ಟಿಕ್ ತಿನ್ನುತ್ತಿವೆ. ಖಾಲಿ ನಿವೇಶನಗಳಲ್ಲಿನ ಕಸವನ್ನು ನಾಯಿಗಳು ರಸ್ತೆಗೆ ತಂದು ಹಾಕುತ್ತಿವೆ. ಇದರಿಂದಾಗಿ ವಾಹನಗಳ ಸಂಚಾರಕ್ಕೂ ಧಕ್ಕೆಯಾಗುತ್ತಿರುವುದರಿಂದ ಟ್ರಾಫಿಕ್‌ನ ಸಮಸ್ಯೆ ಉಂಟಾಗುತ್ತಿದೆ. ಬಿಬಿಎಂಪಿ ಸಿಬ್ಬಂದಿ 15 ದಿನ ಅಥವಾ ತಿಂಗಳಿಗೊಮ್ಮೆ ಮಾತ್ರ ತ್ಯಾಜ್ಯವನ್ನು ವಿಲೇವಾರಿ ಮಾಡುತ್ತಿದ್ದಾರೆ ಎಂದು ಸ್ಥಳೀಯ ನಾಗರಿಕರು ದೂರಿದರು. ಕಸದ ವಾಸನೆಯಿಂದ ಅಂಗಡಿಯಲ್ಲಿ ಕುಳಿತುಕೊಳ್ಳುವುದು ತುಂಬಾ ಕಷ್ಟವಾಗಿದೆ. ದುರ್ವಾಸನೆಯಿಂದ ಗ್ರಾಹಕರ ಸಂಖ್ಯೆಯೂ ಕ್ಷೀಣಿಸುತ್ತಿದೆ.

ಪಾದಚಾರಿಗಳ ಮಾರ್ಗದಲ್ಲಿ ಸಂಚರಿಸುವ ಜನರು ವಾಸನೆ ತಡೆಯಲಾರದೆ, ಕಸ ಏಕೆ ಇಲ್ಲಿದೆ ಎಂದು ನಮ್ಮನ್ನು ಕೇಳುತ್ತಿದ್ದಾರೆ ಎಂದು ಅಂಗಡಿ ಮಾಲೀಕ ಸೈಫುಲ್ಲಾ ಹೇಳಿದರು. ಎಷ್ಟೇ ಸ್ವಚ್ಛಗೊಳಿಸಿದರೂ ಆಗಾಗ ಕಸ ಎಸೆದು ಹೋಗುತ್ತಿದ್ದಾರೆ. ಬಿಬಿಎಂಪಿ ಸಿಬ್ಬಂದಿ ಸರಿಯಾಗಿ ವಿಲೇವಾರಿ ಮಾಡುತ್ತಿಲ್ಲ. ಸುತ್ತಮುತ್ತಲಿನ ವಾತಾವರಣ ದುರ್ವಾಸನೆಯಿಂದ ಕೂಡಿರುವುದರಿಂದ ತಿನ್ನುವ ಪದಾರ್ಥಗಳನ್ನೂ ಮಾರಾಟ ಮಾಡುವುದು ಅತ್ಯಂತ ಕಷ್ಟವಾಗಿದೆ ಎಂದು ವ್ಯಾಪಾರಿಗಳಾದ ಲೆನಿನ್ ಹಾಗೂ ವೆಂಕಟೇಶ್ ಹೇಳಿದ್ದಾರೆ.

**ಹೆಚ್ಚಾದ ಸೊಳ್ಳೆ ಕಾಟ!**

ರಾತ್ರೋರಾತ್ರಿ ಮನೆಯ ತ್ಯಾಜ್ಯವನ್ನು ಪಾದಚಾರಿಗಳ ಮಾರ್ಗದಲ್ಲಿ ಎಸೆದು ಹೋಗುತ್ತಿದ್ದಾರೆ. ಪರಿಸರದ ಜೊತೆಗೆ ಆರೋಗ್ಯಕ್ಕೂ ಸಂಕಷ್ಟ ಎದುರಾಗಿದೆ. ಸುತ್ತಮುತ್ತಲಿನ ಪ್ರದೇಶದಲ್ಲಿ ಸೊಳ್ಳೆ ಕಾಟ ವಿಪರೀತವಾಗಿದೆ. ಸೊಳ್ಳೆಗಳೂ ಹೆಚ್ಚಾಗಿದ್ದು ಸಾಂಕ್ರಾಮಿಕ ರೋಗ ಹರಡುವ ಭೀತಿ ಎದುರಾಗಿದೆ' ಎಂದು ಸ್ಥಳೀಯ ನಿವಾಸಿಗಳಾದ ಪ್ರದಿತ್ ಪ್ರಸನ್ನ ಆತಂಕ ವ್ಯಕ್ತಪಡಿಸಿದರು.

# ಸರ್ಕಾರಕ್ಕೆ ತೆರಿಗೆ ವಂಚನೆ: ತಪ್ಪಿತಸ್ಥರ ಪತ್ತೆಗೆ ಮುಂದಾದ ಸಾರಿಗೆ ಇಲಾಖೆ

### ತಪ್ಪು ಮಾಡಿರುವ ಅಧಿಕಾರಿ ಮತ್ತು ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಬಹುದು ಎಂದು ವರದಿಯಲ್ಲಿ ಸಲಹೆ

• ಉದಯವಾಹಿನಿ ಬೆಂಗಳೂರು

ಅಧಿಕಾರಿಗಳು, ಸಿಬ್ಬಂದಿ ಮತ್ತು ವಾಹನ ಮಾಲೀಕರು ಸೇರಿ ವಾಹನಗಳ ವಿಸ್ತೀರ್ಣವನ್ನು ಕಡಿಮೆ ತೋರಿಸಿ ಸರ್ಕಾರಕ್ಕೆ ತೆರಿಗೆ ವಂಚಿಸಿದ್ದಾರೆ ಎಂದು ತನಿಖಾ ತಂಡ ನೀಡಿದ್ದ ವರದಿ ಆಧರಿಸಿ ತಪ್ಪೆಸಗಿದ ಅಧಿಕಾರಿಗಳನ್ನು ಪತ್ತೆ ಹಚ್ಚಲು ಸಾರಿಗೆ ಇಲಾಖೆ ಮುಂದಾಗಿದೆ. ಎಲೆಕ್ಟ್ರಾನಿಕ್ ಸಿಟಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಯಲ್ಲಿ ಖಾಸಗಿ ಸೇವಾ ವಾಹನಗಳು ಹಾಗೂ ಮ್ಯಾಕ್ಸಿಕ್ಯಾಬ್ ವಾಹನಗಳ ವಿಸ್ತೀರ್ಣವನ್ನು ಸರಿಯಾಗಿ ದಾಖಲಿಸುತ್ತಿಲ್ಲ ಎಂಬ ದೂರುಗಳು ಬಂದಿದ್ದವು. ಇದನ್ನು ಆಧರಿಸಿ ಸಾರಿಗೆ ಆಯುಕ್ತರು ಜಂಟಿ ಆಯುಕ್ತರ ನೇತೃತ್ವದ ತಪಾಸಣಾ ತಂಡವನ್ನು ರಚಿಸಿದ್ದರು. ಕಡತ ಪರಿಶೀಲನೆ, ವಾಹನ ತಪಾಸಣೆಗಳ ಬಳಿಕ ಈ ತಂಡವು ವರದಿಯನ್ನು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತರಿಗೆ 2023ರ ಜೂನ್‌ನಲ್ಲಿ ನೀಡಿತ್ತು. 24 ವಾಹನಗಳ ತಪಾಸಣೆ ನಡೆಸಿದಾಗ ರೂ.21.12 ಲಕ್ಷ ವಂಚನೆ ಆಗಿರುವುದು ಗೊತ್ತಾಗಿದ್ದು, 3,240 ವಾಹನಗಳ ತಪಾಸಣೆ ನಡೆಯ ಬೇಕಿದೆ ಎಂದು ವರದಿಯಲ್ಲಿ ತಿಳಿಸಲಾಗಿತ್ತು.

ವರದಿ ಬಂದ ಬಳಿಕ ಲೆಕ್ಕ ಪರಿಶೋಧನೆ ನಡೆಸಬೇಕಿತ್ತು. ಆದರೆ, ನಮ್ಮಲ್ಲಿ ಲೆಕ್ಕ ಪರಿಶೋಧನಾ ತಂಡ ಇಲ್ಲದ ಕಾರಣ ರಾಜ್ಯ ಲೆಕ್ಕ ಪರಿಶೋಧನಾ ಇಲಾಖೆಗೆ ಒಪ್ಪಿಸಲಾಗಿತ್ತು. ಅವರು ಪರಿಶೋಧನೆ ಮಾಡಿ ವರದಿ ನೀಡಿದ್ದಾರೆ. ಆದರೆ, ತಪ್ಪಿತಸ್ಥ ಅಧಿಕಾರಿಗಳು ಯಾರು ಎಂಬುದು ತನಿಖಾ ತಂಡದ ವರದಿಯಲ್ಲಾಗಲಿ, ಲೆಕ್ಕ ಪರಿಶೋಧನಾ ಇಲಾಖೆಯ ವರದಿಯಲ್ಲಾಗಲಿ ಇಲ್ಲ. ಅದಕ್ಕಾಗಿ ತಪ್ಪಿತಸ್ಥ ಅಧಿಕಾರಿಗಳನ್ನು ಪತ್ತೆ ಮಾಡಲು ಬೆಂಗಳೂರು ನಗರ ಜಂಟಿ ಸಾರಿಗೆ ಆಯುಕ್ತರಿಗೆ ಜುಲೈ 8ರಂದು ಸೂಚಿಸಲಾಗಿದೆ' ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಹೆಚ್ಚುವರಿ ಆಯುಕ್ತ (ಆಡಳಿತ) ಬಿ.ಪಿ. ಉಮಾಶಂಕರ್ ಮಾಹಿತಿ ನೀಡಿದರು. 2005ರಿಂದ ವಂಚನೆ ಮಾಡುತ್ತಾ ಬಂದಿರುವುದು ಗೊತ್ತಾಗಿದೆ. ನಿಖರ ತೆರಿಗೆಯನ್ನು ಲೆಕ್ಕ ಹಾಕಿ ನಷ್ಟವಾಗಿರುವು ದನ್ನು ವಸೂಲಿ ಮಾಡಬಹುದು. ತಪ್ಪು ಮಾಡಿರುವ ಅಧಿಕಾರಿ, ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಬಹುದು ಎಂದು ವರದಿಯಲ್ಲಿ ಸಲಹೆ ನೀಡಲಾಗಿದೆ.

1,345 ಮ್ಯಾಕ್ಸಿಕ್ಯಾಬ್, 1,826 ಖಾಸಗಿ ಸೇವಾ ವಾಹನಗಳು ಸೇರಿ 3,271 ವಾಹನಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಲು ಕಡತಗಳನ್ನು ನೀಡುವಂತೆ ತಪಾಸಣಾ ತಂಡ ಕೇಳಿ ಕೊಂಡಿತ್ತು. ಪ್ರಾದೇಶಿಕ ಅಧಿಕಾರಿಗಳು 628 ಮ್ಯಾಕ್ಸಿಕ್ಯಾಬ್ ಮತ್ತು 983 ಖಾಸಗಿ ಸೇವಾ ವಾಹನಗಳ ಕಡತಗಳನ್ನಷ್ಟೇ ಒದಗಿಸಿದ್ದರು. 1,660 ವಾಹನಗಳ ಕಡತ ಗಳನ್ನು ನೀಡಿಲ್ಲ ಎಂದು ವರದಿಯಲ್ಲಿ ತಿಳಿಸಲಾಗಿದೆ. ಪರಿಶೀಲನೆಗೆ ನೀಡದ ಕಡತಗಳ ಬಗ್ಗೆಯೂ ತನಿಖೆ ಆಗಬೇಕಿದೆ ಎಂದು ತಿಳಿಸಿದರು.

ಕೋಟ್ಯಂತರ ರೂಪಾಯಿ ತೆರಿಗೆ ವಂಚಿಸಿರುವ ಈ ಪ್ರಕರಣದ ಬಗ್ಗೆ ಕ್ರಮ ಕೈಗೊಳ್ಳಲು, ಶೀಘ್ರ ತನಿಖೆ ನಡೆಸಲು ಸಾರಿಗೆ ಇಲಾಖೆಯು ನಿರ್ಲಕ್ಷ್ಯ ವಹಿಸುತ್ತಿದೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.



ಉದಯವಾಹಿನಿ ಚಿತ್ರ

> ಸುಮಾರು 20 ವರ್ಷಗಳಿಂದ ನಡೆದ ವಂಚನೆ ಇದು. ತಪ್ಪಿತಸ್ಥರು ಯಾರು ಎಂದು ಪತ್ತೆ ಹಚ್ಚಲು ಸೂಚನೆ ನೀಡಲಾಗಿದೆ. ತಪ್ಪಿತಸ್ಥರ ವಿವರ ಪಡೆದು ಕ್ರಮ ಕೈಗೊಳ್ಳಲಾಗುವುದು. ವಾಹನ ಮಾಲೀಕರಿಗೂ ನೋಟಿಸ್ ಕಳುಹಿಸಲಾಗುವುದು. ವಂಚಿಸಿರುವ ತೆರಿಗೆಯನ್ನು ವಸೂಲಿ ಮಾಡಲಾಗುವುದು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ.

**ಕೋಟ್ಯಂತರ ರೂಪಾಯಿ ವಂಚನೆ**

ಜಂಟಿ ಆಯುಕ್ತರ ನೇತೃತ್ವದ ತನಿಖಾ ತಂಡವು ಲಭ್ಯವಾದ ವಾಹನಗಳಿಗೆ ಸಂಬಂಧಿಸಿದಂತೆ ಪರಿಶೀಲನೆ ನಡೆಸಿತ್ತು. ಅವುಗಳಿಂದ ರೂ.21.12 ಲಕ್ಷ ತೆರಿಗೆ ವಂಚನೆ ಆಗಿರುವುದನ್ನು ಪತ್ತೆ ಹಚ್ಚಿತ್ತು. ಎಲ್ಲಾ ವಾಹನಗಳ ಕಡತ ಪರಿಶೀಲನೆ ನಡೆಸಿದರೆ ಕೋಟ್ಯಂತರ ರೂ. ತೆರಿಗೆ ವಂಚಿಸಿರುವುದು ಬಯಲಾಗಲಿದೆ ಎಂದು ವರದಿಯಲ್ಲೇ ತಿಳಿಸಲಾಗಿದೆ. 628 ಮ್ಯಾಕ್ಸಿಕ್ಯಾಬ್‌ಗಳಿಗೆ ಸಂಬಂಧಿಸಿದಂತೆ ನಮೂನೆ 20ರಲ್ಲಿ 580 ವಾಹನಗಳ ವಿಸ್ತೀರ್ಣ ನಮೂದಿಸಲಾಗಿದೆ. 48 ವಾಹನಗಳ ವಿಸ್ತೀರ್ಣವೇ ದಾಖಲಾಗಿಲ್ಲ. ಅದೇ ರೀತಿ 981 ಇತರ ವಾಹನಗಳ ಪೈಕಿ 901 ವಾಹನಗಳ ವಿಸ್ತೀರ್ಣ ನಮೂದಿಸಲಾಗಿದೆ. 82 ವಾಹನಗಳ ವಿಸ್ತೀರ್ಣ ಇಲ್ಲ. ನಮೂದಾಗಿರುವ ವಿಸ್ತೀರ್ಣ ಕೂಡ ಒಂದೇ ಮಾದರಿಯ ವಾಹನಗಳಿಗೆ ಭಿನ್ನವಾಗಿರುವುದು ಕಂಡು ಬಂದಿದೆ.

# ಬಡವರಿಗೆ ಆಶ್ರಯ ನಿವೇಶನ ಯೋಜನೆಯಡಿ 258 ಎಕರೆ ಜಮೀನು: ಪರಿಶೀಲನೆ

## ರೈತರಿಂದ ಅಹವಾಲುಗಳನ್ನು ಸ್ವೀಕರಿಸಿ ಸಮಸ್ಯೆ ಬಗೆಹರಿಸುವುದಾಗಿ ಭರವಸೆ

• ಉದಯವಾಹಿನಿ ರಾಮನಗರ

ಬಡವರಿಗೆ ನಿವೇಶನ ನೀಡುವ ವಿಚಾರವಾಗಿ ಆಶ್ರಯ ನಿವೇಶನ ಯೋಜನೆ ಅನುಷ್ಠಾನ ಪ್ರಗತಿ ಕುರಿತು ವಿಕ ಸರಣಿ ವರದಿ ಪ್ರಕಟಿಸಿತ್ತು. ವರದಿ ಬೆನ್ನಲ್ಲೇ ಶಾಸಕ ಇಕ್ಬಾಲ್ ಹುಸೇನ್ ಅವರು ನಿವೇಶನ ಹಂಚಿಕೆ ಯೋಜನೆಗೆ ವೇಗ ನೀಡಲು ಮುಂದಾಗಿದ್ದಾರೆ.

ಬೆಂಗಳೂರು ದಕ್ಷಿಣ ಜಿಲ್ಲೆಯ ಐದು ತಾಲ್ಲೂಕುಗಳಲ್ಲಿ ಬಡವರಿಗೆ ನಿವೇಶನ ನೀಡುವ ಆಶ್ರಯ ನಿವೇಶನ ಯೋಜನೆ ಸಂಬಂಧ ವಿಕ ಸರಣಿ ವರದಿ ಪ್ರಕಟಿಸಿತ್ತು. ಯೋಜನೆ ಯಾವ ಹಂತದಲ್ಲಿದೆ, ಏನೇನು ಕೆಲಸಗಳು ಆಗಿದೆ, ಏನೇನು ಕೆಲಸಗಳು ಬಾಕಿ ಇದೆ ಎಂಬುದನ್ನು ವರದಿ ಬೆಳಕು ಚೆಲ್ಲಿತ್ತು. ಶಾಸಕ ಇಕ್ಬಾಲ್ ಹುಸೇನ್ ಅವರ ನೇತೃತ್ವದಲ್ಲಿ ತಹಶೀಲ್ದಾರ್, ಆಯುಕ್ತರು ಸೇರಿದಂತೆ ಅಧಿಕಾರಿಗಳ ತಂಡ ತಾಲ್ಲೂಕಿನ


ಉದಯವಾಹಿನಿ ಚಿತ್ರ

**ಯೋಜನೆ ಅನುಷ್ಠಾನ ಪ್ರಗತಿಯ ಮಾಹಿತಿ**

ಬಿಳಗುಂಬ, ಬಸವನಪುರ, ದೊಡ್ಡಮಣ್ಣು ಗುಡ್ಡೆ, ಕೊತ್ತಿಪುರ ಸುಗ್ಗನಹಳ್ಳಿ ಸೇರಿದಂತೆ ನಾನಾ ಕಡೆ ಆಶ್ರಯ ನಿವೇಶನ ಬಡಾವಣೆ ನಿರ್ಮಾಣಕ್ಕೆ ಗುರುತಿಸಿರುವ ಜಮೀನು ಸ್ಥಳ ಪರಿಶೀಲಿಸಿದರು. ಯೋಜನೆ ಅನುಷ್ಠಾನ ಪ್ರಗತಿಯ ಮಾಹಿತಿ ಪಡೆದ ಶಾಸಕರು ತ್ವರಿಗತಿಯಲ್ಲಿ ಮುಂದಿನ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಈ ವೇಳೆ ಜಮೀನು ವಿಚಾರವಾಗಿ ಕೆಲ ರೈತರಿಂದ ಅಹವಾಲುಗಳನ್ನು ಸ್ವೀಕರಿಸಿ ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿದರು. ಈ ವೇಳೆ ಮಾತನಾಡಿದ ಇಕ್ಬಾಲ್ ಹುಸೇನ್ ಅವರು, ಬಡವರಿಗೆ ನಿವೇಶನ ನೀಡುವ ವಿಚಾರದಲ್ಲಿ ನಾವು

> **ಈಗಾಗಲೇ ನಗರದ ಸುತ್ತಮುತ್ತಲು ಬಡವರಿಗೆ ನಿವೇಶನ ನೀಡಲು 258 ಎಕರೆ ಜಮೀನನ್ನು ಗುರುತಿಸಿದ್ದೇವೆ. ಈ ಪೈಕಿ 196 ಎಕರೆ ಭೂಮಿಯನ್ನು ತಹಶೀಲ್ದಾರ್ ಅವರು ಆಯಾ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಿದ್ದಾರೆ. ಉಳಿದ ಜಮೀನಿನ ಬಗ್ಗೆ ಸ್ವಲ್ಪ ಸಮಸ್ಯೆಗಳಿಗೆ. ಅವುಗಳನ್ನು ಪರಿಶೀಲಿಸಿ ನಕಲಿ ದಾಖಲೆಗಳು ಕಂಡು ಬಂದರೆ ಸೂಕ್ತ ಕ್ರಮ ಕೈಗೊಂಡು, ಅದನ್ನೂ ಸಹ ಆಶ್ರಯ ನಿವೇಶನ ಯೋಜನೆ ವ್ಯಾಪ್ತಿಗೆ ತನ್ನಿ ಎಂದು ಸೂಚಿಸಿದ್ದೇನೆ ಎಂದರು.**

ಕೊಟ್ಟ ಭರವಸೆಯನ್ನು ಈಡೇರಿಸುತ್ತೇವೆ. ಇದಕ್ಕಾಗಿ ನಾವು, ನಮ್ಮ ಅಧಿಕಾರಿಗಳ ತಂಡ ಬದ್ಧತೆಯಿಂದ ಹಗಲಿರುಳು ಕೆಲಸ ಮಾಡುತ್ತಿದ್ದೇವೆ ಎಂದರು.

ಭರವಸೆ ಕೊಟ್ಟು ಈಡೇರಿಸದ ರಾಜಕಾರಣ ನಮ್ಮದಲ್ಲ.ಕೊಟ್ಟ ಮಾತ್ತನ್ನು ಈಡೇರಿಸಿಯೇ ತೀರುತ್ತೇವೆ. ಕಳೆದ 25 ವರ್ಷಗಳಿಂದ ನಿವೇಶನ ಹಂಚಿಕೆ ಮಾಡಿಲ್ಲ. ಮಾಜಿ ಶಾಸಕರಾದ ಸಿಎಂ ಲಿಂಗಪ್ಪ ಅವರು ಈ ಹಿಂದೆ ಬಡವರಿಗೆ ನಿವೇಶನ ಕೊಟ್ಟಿದ್ದರು ಎಂದರು. ಆಶ್ರಯ ಯೋಜನೆ ವಸತಿ ಬಡಾವಣೆಗಳಲ್ಲಿ ಸುಮಾರು 5000 ಸೈಟ್‌ಗಳನ್ನು ನೀಡಬಹುದು.

ಇದಕ್ಕಾಗಿ ನಿರ್ಮಿತಿ ಕೇಂದ್ರವು ಬಡಾವಣೆಗಳ ಅಭಿವೃದ್ಧಿಗೆ ಬೇಕಾದ ಮೂಲ ಸೌಕರ್ಯ ಬಗ್ಗೆ ಸುಮಾರು 26 ಕೋಟಿ ರೂ. ವೆಚ್ಚದ ಅಂದಾಜು ಪಟ್ಟಿ ಸಿದ್ಧಪಡಿಸಿದ್ದಾರೆ. ವಸತಿ ಇಲಾಖೆಯಿಂದ ಶೀಘ್ರದಲ್ಲೇ ಈ ಅನುದಾನ ದೊರೆಯಲಿದೆ ಎಂದರು.

---

# ವಾಟದಹೊಸಹಳ್ಳಿ ರೈತರ ಮೌನ ಪ್ರತಿಭಟನೆ

• ಉದಯವಾಹಿನಿ ಗೌರಿಬಿದನೂರು

ವಾಟದಹೊಸಹಳ್ಳಿ ಕೆರೆಯಿಂದ ನಗರಕ್ಕೆ ನೀರು ಹರಿಸುವ ಯೋಜನೆಯನ್ನು ವಿರೋಧಿಸಿ ತಾಲ್ಲೂಕು ಕಚೇರಿ ಮುಂದೆ ನಾಟದಹೊಸಹಳ್ಳಿ ರೈತರು ನಡೆಸುತ್ತಿರುವ ಪ್ರತಿಭಟನೆ 10ನೇ ದಿನಕ್ಕೆ ಕಾಲಿಟ್ಟಿದೆ. ನಗರದ ಶನಿಮಹಾತ್ಮ ದೇವಸ್ಥಾನದಿಂದ ಅಂಬೇಡ್ಕರ್ ವೃತ್ತದವರೆಗೆ ರೈತರು ಬಾಯಿಗೆ ಕಪ್ಪುಪಟ್ಟಿ ಕಟ್ಟಿಕೊಂಡು ಮೌನ ಪ್ರತಿಭಟನೆ ನಡೆಸಿದರು.

ರೈತ ಮುಖಂಡ ಮಧು ಸೂರ್ಯನಾರಾಯಣ ರೆಡ್ಡಿ ಮಾತನಾಡಿ, ಹತ್ತು ದಿನಗಳಿಂದ ತಾಲ್ಲೂಕು ಕಚೇರಿ ಮುಂದೆ ಪ್ರತಿಭಟನೆ ನಡೆಸುತ್ತಿದ್ದರು ಸಹ ತಾಲ್ಲೂಕು ಆಡಳಿತ ಈವರೆಗೆ ಯಾವುದೇ ಸ್ಪಂದನೆ ನೀಡಿಲ್ಲ.

ಆದ್ದರಿಂದ ತಾಲ್ಲೂಕು ಕಚೇರಿ ಮುಂದೆ ತಮಟೆ ಚಳವಳಿ ಹಮ್ಮಿಕೊಳ್ಳಲಾಗುವುದು. ನಂತರ ಅರೆ ಬೆತ್ತಲೆ ಮೆರವಣಿಗೆ, ಮತ್ತೊಂದು ದಿನ ಜಾನುವಾರುಗಳನ್ನು ತಾಲ್ಲೂಕು ಕಚೇರಿ ಮುಂದೆ ತಂದು ಕಟ್ಟಿ ಹಾಕಲಾಗುವುದು ಹೀಗೆ ವಾರ ಪೂರ್ತಿ ವಿವಿಧ ರೀತಿಯಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದರು.

ಮುಖಂಡ ಕೋಡಿರ್ಲಪ್ಪ ಮಾತನಾಡಿ, ರೈತರ ಪ್ರತಿಭಟನೆ ಹತ್ತನೇ ದಿನಕ್ಕೆ ಕಾಲಿಟ್ಟಿದೆ. ಸರ್ಕಾರಕ್ಕಾಗಲಿ, ಸರ್ಕಾರಿ ಅಧಿಕಾರಿಗಳಿಗಾಗಲಿ ಕಾಣುತ್ತಿಲ್ಲ. ರೈತರನ್ನು ಕೇವಲವಾಗಿ ಕಾಣುತ್ತಿದ್ದಾರೆ. ಶನಿವಾರದಿಂದ ವಿಭಿನ್ನ ರೀತಿಯಲ್ಲಿ ಪ್ರತಿಭಟಿಸಲಾಗುವುದು ಎಂದರು.


ಉದಯವಾಹಿನಿ ಚಿತ್ರ

> **ರೈತರು ಹತ್ತು ದಿನಗಳಿಂದ ತಾಲ್ಲೂಕು ಕಚೇರಿ ಮುಂದೆ ರೈತರು ಪ್ರತಿಭಟನೆ ನಡೆಸುತ್ತಿದ್ದರು ಸಹ ಯಾವುದೇ ಅಧಿಕಾರಿ ಈವರೆಗೂ ಬಂದು ಬೇಡಿಕೆ ಈಡೇರಿಸುವ ಬಗ್ಗೆ ಮಾತನಾಡಿಲ್ಲ. ಶಾಸಕ, ಸಚಿವರು ಮತ್ತು ಸಂಭಂಧಪಟ್ಟ ಅಧಿಕಾರಿಗಳು ಬಂದು ಬೇಡಿಕೆ ಈಡೇರಿಸುವ ಭರವಸೆ ನೀಡದೆ ಇದ್ದರೆ ಉಗ್ರ ಪ್ರತಿಭಟನೆ ಮಾಡಲಾಗುವುದು ಎಂದು ತಿಳಿಸಿದರು.**
>
> **ಅಖಿಲ ಕರ್ನಾಟಕ ರೈತ ಸಂಘದ ಅಧ್ಯಕ್ಷ ರವಿಚಂದ್ರ ರೆಡ್ಡಿ**

ವಾಟದಹೊಸಹಳ್ಳಿ ಭಾಗದ ರೈತರು ಹಾಗೂ ರೈತ ಮುಖಂಡರು ಪಾಲ್ಗೊಂಡಿದ್ದರು.

---

# ಸಂಸದ ಡಾ.ಕೆ.ಸುಧಾಕರ್ ವಿರುದ್ಧ ಸಚಿವ ಸುಧಾಕರ್ ವಾಗ್ದಾಳಿ

• ಉದಯವಾಹಿನಿ ಚಿಕ್ಕಬಳ್ಳಾಪುರ

ಅಧಿಕಾರಿಗಳನ್ನು ಗುಲಾಮರನ್ನಾಗಿ ಅವರು ಜಿಲ್ಲಾ ಮಂತ್ರಿಯಾಗಿದ್ದ ವೇಳೆಯಲ್ಲಿ ಮಾಡಿ ಕೊಂಡಿರಬಹುದು. ಆದರೆ ನಾವು ಹಾಗೆಲ್ಲ ಮಾಡಿ ಕೊಂಡಿಲ್ಲ. ಜಿಲ್ಲಾಧಿಕಾರಿ ಕಚೇರಿಯಲ್ಲಿ ಏಜೆಂಟರನ್ನು ಬಿಟ್ಟವರು ಅವರೇ' ಎಂದು ಸಂಸದ ಸುಧಾಕರ್ ಅವರ ಆರೋಪಕ್ಕೆ ಸಚಿವ ಡಾ.ಎಂ.ಸಿ.ಸುಧಾಕರ್ ತಿರುಗೇಟು ನೀಡಿದರು.ಸುದ್ದಿಗಾರರೊಂದಿಗೆ ಮಾತನಾಡಿ, 'ಅವರ ಅನುಮತಿ ಇಲ್ಲದೆ ಯಾವುದೇ ಕೆಲಸ ಆಗುತ್ತಿರಲಿಲ್ಲ, ಅಧಿಕಾರಿಗಳು ಕಾನೂನು ವ್ಯಾಪ್ತಿಯಲ್ಲಿ ಕೆಲಸ ಮಾಡಲು ನಮ್ಮ ಅವಧಿಯಲ್ಲಿ ಬಿಟ್ಟಿದ್ದೇವೆ. ಯಾರನ್ನೂ ಗುಲಾಮರನ್ನಾಗಿ ಮಾಡಿಕೊಂಡಿಲ್ಲ' ಎಂದು ಸ್ಪಷ್ಟಪಡಿಸಿದರು.

'ಯಾವುದೇ ಸರ್ಕಾರ ಇದ್ದರೂ ಕಾನೂನು ಚೌಕಟ್ಟಿನ ನಿಯಮಗಳಡಿ ಅಧಿಕಾರಿಗಳು ಕೆಲಸ ಮಾಡುತ್ತಾರೆ. ಹಾಗೆ ಅವರು ಭಾವಿಸಿದರೆ ಅದು ಅಧಿಕಾರಿಗಳಿಗೆ ಅವರು ಮಾಡಿದ ಅವಮಾನ. ನಮ್ಮ ಶೈಲಿಯೇ ಬೇರೆ, ಶಾಸಕರು ಮತ್ತು ಸಂಸದರ ಶೈಲಿಗಳೇ ಬೇರೆ. ಅವರ ಶೈಲಿ ನಮಗೆ ಬರಲ್ಲ, ಯಾಕೆಂದರೆ 22 ವರ್ಷದ ರಾಜಕೀಯ ಅನುಭವ ನಮಗಿದೆ' ಎಂದರು. 'ಬಾಬು ಅವರು ನಮಗೆ ತೊಂದರೆ


ಉದಯವಾಹಿನಿ ಚಿತ್ರ

ಆಗಿದೆ ಎಂದು ದೂರು ಕೊಟ್ಟಿಲ್ಲ. ಅಂದು ಬೆಳಗ್ಗೆ ಆದ ಘಟನೆಯ ಬಗ್ಗೆ ಮಾಹಿತಿಯನ್ನು ಜಿಲ್ಲಾಡಳಿತ ನೀಡಿತು. ನಮಗೆ ಆಘಾತ ಆಯಿತು. ಡೆತ್‌ನೋಟ್ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದು, ಆತನ ಪತ್ನಿ ಬುದ್ಧಿವಾದ ಹೇಳಿದ ಬಗ್ಗೆಯೂ ಮಾಹಿತಿ ಇದೆ. ಇವರು ಮತ್ತು ಇವರ ಅನುಯಾಯಿಗಳ ನಡುವೆ ಏನು ನಡೆದಿದೆ ಎಂದು ಬಾಬು ಮತ್ತು ಅವರಿಗೆ ಮಾತ್ರ ಗೊತ್ತು' ಎಂದು ನುಡಿದರು. 'ಬಾಬು ಸಾಯಬೇಕು ಎಂದು ತೀರ್ಮಾನ ಮಾಡಿದವರು ಇವರ ಹೆಸರು ಯಾಕೆ ಬರೆದಿದ್ದಾರೆ ಅನ್ನೋದು ಅವರೊಬ್ಬರಿಗೇ ಗೊತ್ತಿದೆ. ದೂರು ಕೊಟ್ಟಂತೆ ಎಫ್‌ಐಆರ್ ಆಗುತ್ತದೆ. ನಾನು ದೂರು ಕೊಟ್ಟಿಲ್ಲ. ಬದಲಿಗೆ ಬಾಬು ಅವರ ಪತ್ನಿ ನೀಡಿದ

> **'ಮುಖ್ಯಮಂತ್ರಿಗೆ ಕಾಂಗ್ರೆಸ್ ಹೈಕಮಾಂಡ್ ಸುಧಾಕರ್ ಅವರನ್ನು ಸಂಪುಟದಿಂದ ಕೈಬಿಡಿ ಎಂದರೆ ಅವರು ಕೈ ಬಿಡಲಿದ್ದಾರೆ. ಅದನ್ನು ಪ್ರಶ್ನೆ ಮಾಡುವ ವಿಚಾರ ಸಾರ್ವಜನಿಕವಾಗಿ ಮಾಡುವುದಿಲ್ಲ. ಪಕ್ಷದ ತೀರ್ಮಾನಕ್ಕೆ ತಲೆ ಬಾಗುತ್ತೇವೆ. ಪಕ್ಷದ ಸಿದ್ಧಾಂತ, ತೀರ್ಮಾನಕ್ಕೆ ತಲೆಬಾಗಬೇಕು. ರಾಜಣ್ಣ ಅವರು, ರಾಹುಲ್ ಗಾಂಧಿ ಅವರ ತೀರ್ಮಾನಕ್ಕೆ ಬದ್ಧರಾಗಿದ್ದೇವೆ ಎಂದು ಹೇಳಿದ್ದಾರೆ. ಪಕ್ಷದ ಶಿಸ್ತು, ತೀರ್ಮಾನಕ್ಕೆ ನಾವೆಲ್ಲ ಬದ್ಧರಾಗಿದ್ದೇವೆ' ಎಂದರು.**

ದೂರಿನಂತೆ ಎಫ್‌ಐಆರ್ ಆಗುತ್ತದೆ. ಸಚಿವರೋ, ಶಾಸಕರೋ ಹೇಳಿದಂತಲ್ಲ' ಎಂದರು. 'ಅಧಿಕಾರ ಶಾಶ್ವತವಲ್ಲ, ಜನರ ಆಶೀರ್ವಾದ ಇರುವವರೆಗೂ ಅಧಿಕಾರದಲ್ಲಿರುತ್ತೇವೆ. ನಾನು 10 ವರ್ಷ ಅಧಿಕಾರದಿಂದ ದೂರ ಇದ್ದೆ, ಆದರೆ ಅವರು 10 ತಿಂಗಳಿಗೆ ಅಧಿಕಾರ ಇಲ್ಲದೆ ಒದ್ದಾಡಿದರು. ನನ್ನ ಅಧಿಕಾರದ ಜವಾಬ್ದಾರಿಯನ್ನು ಜನರ ಒಳಿತಿಗಾಗಿ ಉಪಯೋಗಿಸುತ್ತೇನೆ' ಎಂದರು.


---

# ಪಂಚ ಗ್ಯಾರಂಟಿ ಜತೆಗೆ ಆರೋಗ್ಯ ಶಿಕ್ಷಣಕ್ಕೂ ಒತ್ತು: ಎಚ್.ಸಿ.ಬಾಲಕೃಷ್ಣ

• ಉದಯವಾಹಿನಿ ಮಾಗಡಿ

ಪಂಚ ಗ್ಯಾರಂಟಿಗಳ ಜತೆಗೆ ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ಕೊಡಲಾಗುವುದು ಎಂದು ಶಾಸಕ ಎಚ್.ಸಿ.ಬಾಲಕೃಷ್ಣ ಹೇಳಿದರು.ಪಟ್ಟಣದ ಕೋಟೆ ಮೈದಾನದಲ್ಲಿ ತಾಲ್ಲೂಕು ಆಡಳಿತ ವತಿಯಿಂದ ಸ್ವಾತಂತ್ರ್ಯ ದಿನಾಚರಣೆ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಒತ್ತುವನ್ನು ನೀಡಲಾಗಿದೆ. ಮಾಗಡಿಯಲ್ಲಿ ಸುಸಜ್ಜಿತ ಹೊಸ ಆಸ್ಪತ್ರೆ ನಿರ್ಮಾಣ ಮಾಡಲಾಗುವುದು. ಇದರ ಜತೆಗೆ ತಾಯಿ-ಮಗು ಆಸ್ಪತ್ರೆ ಕೂಡ ನಿರ್ಮಾಣ ಮಾಡಲು ಅನುಮತಿ ಪಡೆಯಲಾಗುವುದು. ಕುದೂರು ಮತ್ತು ತಿಪ್ಪಸಂದ್ರದಲ್ಲಿ ಆರೋಗ್ಯ ಸೌಧ ನಿರ್ಮಾಣ ಮಾಡಿ ಸಾರ್ವಜನಿಕರಿಗೆ ಗುಣಮಟ್ಟದ


ಉದಯವಾಹಿನಿ ಚಿತ್ರ

ಚಿಕಿತ್ಸೆ ಸರ್ಕಾರಿ ಆಸ್ಪತ್ರೆಯಲ್ಲಿ ಸಿಗುವ ಕೆಲಸ ಮಾಡಲಾಗುವುದು ಎಂದರು. ಎಸ್‌ಎಸ್‌ಎಲ್‌ಸಿ ಮತ್ತು ಪಿಯು ಫಲಿತಾಂಶದಲ್ಲಿ ಜಿಲ್ಲೆಯಲ್ಲಿ ಪ್ರಥಮ ಸ್ಥಾನ ಗಳಿಸಿದ ಕೆಪಿಎಸ್ ಶಾಲೆಗೆ ಆದ್ಯತೆ ನೀಡಲಾಗುವುದು ಎಂದರು. ಪಟ್ಟಣದ ಜೂನಿಯರ್ ಕಾಲೇಜು ಕ್ರೀಡಾಂಗಣ 7ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲಾಗುತ್ತಿದೆ. ಕುದೂರಿನಲ್ಲೂ 4 ಕೋಟಿ ವೆಚ್ಚದಲ್ಲಿ ಕ್ರೀಡಾಂಗಣ ಅಭಿವೃದ್ಧಿ ಮಾಡಲಾಗುವುದು ಎಂದರು. 16 ಕೋಟಿ ವೆಚ್ಚದಲ್ಲಿ ಜೂನಿಯರ್ ಕಾಲೇಜು ಬಳಿ ಅಡಿಟೋರಿಯಂ ನಿರ್ಮಾಣಗೊಳ್ಳಲಿದೆ. ರೂ.5 ಕೋಟಿ ವೆಚ್ಚದಲ್ಲಿ ಶಿಕ್ಷಕರ ಭವನ, ಹೊಸ ಬಿಇಒ ಕಚೇರಿ, ಅಂಬೇಡ್ಕರ್ ಭವನ, ಕೆಎಎಸ್, ಐಎಎಸ್ ಉಚಿತ ತರಬೇತಿ ಕೋರ್ಸ್ ಆರಂಭಮಾಡಲಾಗುವುದು. ಮುಂದಿನ ತಿಂಗಳು ಶ್ರೀರಂಗ ಏತ ನೀರಾವರಿ ಯೋಜನೆಗೆ ಚಾಲನೆ, ಸತ್ತೇಗಾಲದಿಂದ ವೈಜಿಗುಡ್ಡ ಮತ್ತು ಮಂಚನಬೆಲೆ ಜಲಾಶಯಕ್ಕೆ ಕಾವೇರಿ ನೀರು ತುಂಬಿಸುವ ಯೋಜನೆ ಅನುಷ್ಠಾನದಲ್ಲಿ ಇದ್ದು ಎತ್ತಿನಹೊಳೆ ಮೂಲಕ

> **ಧ್ವಜಾರೋಹಣ ನೆರವೇರಿಸಿ ಮಾತನಾಡಿದ ತಹಶೀಲ್ದಾರ್ ಶರತ್ ಕುಮಾರ್, ತ್ಯಾಗ-ಬಲಿದಾನ ಮೂಲಕ ಸ್ವಾತಂತ್ರ್ಯ ತಂದುಕೊಡಲು ಸಾಕಷ್ಟು ಮಹನೀಯರು ಹೋರಾಟದ ಫಲವಾಗಿ ಸ್ವಾತಂತ್ರ್ಯ ಲಭಿಸಿದೆ ಎಂದರು. ಶಾಲಾ ಮಕ್ಕಳು ನಡೆಸಿಕೊಟ್ಟ ಪಥ ಸಂಚಲನ, ದೇಶಭಕ್ತಿ ನೃತ್ಯ ಗಮನ ಸೆಳೆಯಿತು. ಎಸ್‌ಎಸ್‌ಎಲ್‌ಸಿಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ಮೂವರು ವಿದ್ಯಾರ್ಥಿಗಳಿಗೆ ಮೊಬೈಲ್ ಬಿಡಿ ಪುಸ್ತಕ ಹಿಡಿ ಕಾರ್ಯಕ್ರಮದ ರೂವಾರಿ ಶಿಕ್ಷಕ ಚಿಕ್ಕವೀರಯ್ಯ ಅವರಿಗೆ ತಾಲ್ಲೂಕು ಆಡಳಿತ ವತಿಯಿಂದ ಸ್ವಾತಂತ್ರ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಯಿತು.**

ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ನೀರು ತುಂಬಿಸಿ ಮಂಚನಬೆಲೆ ಜಲಾಶಯಕ್ಕೂ ನೀರು ತರುವ ಕೆಲಸ ಮಾಡಲಾಗುವುದು ಎಂದರು.

---

# ಖರೀದಿಸುವ ನೆಪದಲ್ಲಿ 400 ಗ್ರಾಂ ಚಿನ್ನ ದೋಚಿ ಪರಾರಿಯಾದ ಕಳ್ಳರು!

• ಉದಯವಾಹಿನಿ ಬಂಗಾರಪೇಟೆ

ಚಿನ್ನ ಖರೀದಿಸುವ ನೆಪದಲ್ಲಿ ಬಂದ ನಾಲ್ವರು ಅಂಗಡಿ ಮಾಲೀಕನ ಗಮನ ಬೇರೆಡೆ ಸೆಳೆದು ರೂ.40 ಲಕ್ಷ ಮೌಲ್ಯದ 400 ಗ್ರಾಂ ಚಿನ್ನವನ್ನು ಕದ್ದು ಪರಾರಿಯಾಗಿರುವ ಘಟನೆ ಗುರುವಾರ ಬಂಗಾರಪೇಟೆಯಲ್ಲಿ ನಡೆದಿದೆ. ಪಟ್ಟಣದ ಗೀತಾಮಂದಿರ ರಸ್ತೆಯಲ್ಲಿರುವ ಶ್ರೀನಿವಾಸಗುಪ್ತ ಎಂಬುವರ ಅಂಗಡಿಯಲ್ಲಿ ಮಧ್ಯಾಹ್ನ 1 ಗಂಟೆಗೆ ನಾಲ್ಕು ಚಕ್ರದ ವಾಹನದಲ್ಲಿ ಬಂದ ನಾಲ್ವರು ಚಿನ್ನ ಖರೀದಿಸುವ ನೆಪದಲ್ಲಿ ಅದು ತೋರಿಸಿ, ಇದು ತೋರಿಸಿ ಎಂದು ಹೇಳುತ್ತಾ ಅಂಗಡಿ ಮಾಲೀಕನ ಗಮನ ಬೇರೆಡೆ ಸೆಳೆದು 400 ಗ್ರಾಂ ಚಿನ್ನಾಭರಣಗಳನ್ನು ಕದ್ದು ಪರಾರಿಯಾಗಿದ್ದಾರೆ.

ಅಂಗಡಿ ಮಾಲೀಕ ಆಭರಣಗಳನ್ನು ಪರಿಶೀಲಿಸಿದಾಗ 400 ಗ್ರಾಂ ತೂಕದ ಆಭರಣಗಳು ಕಾಣೆಯಾಗಿದ್ದು, ಈ ಸಂಬಂಧ ಬಂಗಾರಪೇಟೆ ಪೊಲೀಸರಿಗೆ ದೂರು ನೀಡಿದ್ದಾರೆ.

ಕೆಜಿಎಫ್ ಪೊಲೀಸ್ ವರಿಷ್ಠಾಧಿಕಾರಿ ಶಿವಾಂಶು ರಜಪೂತ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

---

# ಫುಡ್ ಕೋರ್ಟ್ ವಿಚಾರ: ಷಟ್ ಅಪ್ ಎಂದ ಸಚಿವ ಬೈರತಿ ಸುರೇಶ್!

• ಉದಯವಾಹಿನಿ ಕೋಲಾರ

ಕೆಲ ದಿನಗಳ ಬಿಡುವಿನ ಬಳಿಕ ಘಟಬಂಧನ್ ಹಾಗೂ ಕೆ.ಎಚ್. ಮುನಿಯಪ್ಪ ಬಣಗಳ ನಡುವೆ ಮತ್ತೆ ಘರ್ಷಣೆ ನಡೆದಿದೆ. ಶಾಸಕ ಕೊತ್ತೂರು ಮಂಜುನಾಥ್, ವಿಧಾನ ಪರಿಷತ್ ಸದಸ್ಯ ಎಂ.ಎಲ್.ಅನಿಲ್ ಕುಮಾರ್ ಹಾಗೂ ಅವರ ಬೆಂಬಲಿಗರ ವಿರುದ್ಧ ನಗರಸಭೆ ಮಾಜಿ ಸದಸ್ಯ ಸೋಮಶೇಖರ್ ಹಾಗೂ ಹಾಲಿ ಸದಸ್ಯ ಪ್ರಸಾದ್ ಬಾಬು ಮುಗಿಬಿದ್ದರು.ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ನಗರಕ್ಕೆ ಬಂದಿದ್ದ ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಸುರೇಶ್ ಸಮ್ಮುಖದಲ್ಲೇ ಮಾತಿನ ಚಕಮಕಿ ನಡೆದಿದ್ದು, ನೂಕಾಟ ತಳ್ಳಾಟದಿಂದ ಗೊಂದಲದ ವಾತಾವರಣ ನಿರ್ಮಾಣವಾಯಿತು. ಕೈ ಕೈ ಮಿಲಾಯಿಸಿಕೊಳ್ಳುವ ಹಂತಕ್ಕೂ ತಲುಪಿತ್ತು. ಸ್ವಾತಂತ್ರ್ಯ ಕಾರ್ಯಕ್ರಮದ ಬಳಿಕ ನಗರದ ಕಾಲೇಜು ವೃತ್ತದಲ್ಲಿ ನಗರಸಭೆ ನಿರ್ಮಿಸಿರುವ ಫುಡ್ ಕೋರ್ಟ್ ಅನ್ನು ಬೈರತಿ ಸುರೇಶ್ ಉದ್ಘಾಟಿಸಿದರು. ಕಾಲೇಜಿನ ಮುಂದೆ ಇರುವ ಕುಟೀರಗಳ ನಿರ್ಮಾಣ ವಿಚಾರ ಪ್ರಸ್ತಾಪವಾಗಿ ವಾಗ್ವಾದ ಆರಂಭವಾಯಿತು.

ಉಸ್ತುವಾರಿ ಸಚಿವರ ಮುಂದೆಯೇ ಎರಡೂ ಬಣದವರು


ಉದಯವಾಹಿನಿ ಚಿತ್ರ

ಏಕವಚನದಲ್ಲಿ ಮಾತನಾಡಲು ಆರಂಭಿಸಿದರು. ಇದು ಸಿಎಸ್ ಆರ್ ನಿಧಿಯಿಂದ ಮಾಡಿರುವುದು, ಹೋಂಡಾ ಕಂಪನಿಯವರು ಎಂದು ಕೊತ್ತೂರು ಮಂಜುನಾಥ್ ಉತ್ತರಿಸುತ್ತಿದ್ದಂತೆ ಕೆ.ಎಚ್ ಮುನಿಯಪ್ಪ ಬಣದವರು ತಕರಾರು ತೆಗೆದರು. ಇಲ್ಲಿ ಸೌಲಭ್ಯ ಬರಲು ಹಿಂದಿನ ಎಸ್‌ಪಿ (ದೇವರಾಜ್) ಕಾರಣ: ಇವರಲ್ಲ ಎಂದು ಸೋಮಶೇಖರ್ ಹೇಳುತ್ತಿದ್ದಂತೆ ಶಾಸಕರ ಬೆಂಬಲಿಗರು ಗರಂ ಆದರು. ನೂಕಾಟ ನಡೆಯುತ್ತಿದ್ದಂತೆ ಪೊಲೀಸರು ಮಧ್ಯ ಪ್ರವೇಶ ಮಾಡಿ ಎರಡೂ ಬಣದವರನ್ನು ತಳ್ಳಿದರು. ಫುಡ್ ಕೋರ್ಟ್ ಪಕ್ಕದಲ್ಲಿರುವ ಕುಟೀರ ನಿರ್ಮಿಸಿದ್ದು ಹಿಂದಿನ

> **'ನೀನ್ಯಾವನು ಶಾಸಕರ ಬಗ್ಗೆ ಮಾತನಾಡಲು, ಏಕವಚನದಲ್ಲಿ ಮಾತನಾಡಿಸುತ್ತೀಯಾ, ಶಾಸಕರಿಗೆ ಗೌರವ ಕೊಡುವುದು ಬೇಡವೇ' ಎಂದು ಘಟಬಂದನ್ ಮುಖಂಡರು ಕೈ ಕೈ ಮಿಲಾಯಿಸಲು ಮುಂದಾದರು. ಮುನಿಯಪ್ಪ ಬಣದ ಕೆ.ಜಯದೇವ್ ಕೂಡ ಮತ್ತೊಂದು ಬಣದವರೊಂದಿಗೆ ಜಗಳಕ್ಕಿಳಿದರು. ಪೊಲೀಸರು ದೂರ ಸರಿಸಿದರು. ಆಗ ಬೈರತಿ ಸುರೇಶ್ ಗರಂ ಆಗಿ ಮಧ್ಯಪ್ರವೇಶ ಮಾಡಿ, 'ಷಟ್ ಅಪ್, ನೀನು (ಸೋಮಶೇಖರ್) ನಗರಸಭೆ ಮಾಜಿ ಸದಸ್ಯ. ಶಾಸಕರ ಮಾತು ಕೇಳು. ಮಕ್ಕಳಾಟ ಆಡುತ್ತಿದ್ದೀರಾ' ಎಂದು ಆಕ್ರೋಶ ವ್ಯಕ್ತಪಡಿಸಿದರು. ನಾವೆಲ್ಲ ಕಾಂಗ್ರೆಸ್ ನವರು ಎಲ್ಲರೂ ಒಂದೇ. ಸುಮ್ಮನಿರಬೇಕು' ಎಂದು ಬುದ್ಧಿವಾದ ಹೇಳಿದರು.**

ಎಸ್‌ಪಿ ಎಂದು ಸೋಮು ಸಿಎಸ್‌ಆರ್ ಹಣ ಎಂದ ಕೊತ್ತೂರು ಮಂಜುನಾಥ್ ಸಚಿವರ ಎದುರೇ ಕಿತ್ತಾಟ

---

# ಡ್ರಗ್ಸ್ ಪ್ರಕರಣ: ಎನ್‌ಐಎಗೆ ವಹಿಸಲು ಬಿಜೆಪಿ ಆಗ್ರಹ

## ನಗರದಲ್ಲಿ ಮಾದಕವಸ್ತು ತಯಾರಿಕಾ ಘಟಕ ಕಾರ್ಯನಿರ್ವಹಿಸುತ್ತಿದ್ದ ಪ್ರಕರಣ

• ಉದಯವಾಹಿನಿ ಮೈಸೂರು

ನಗರದಲ್ಲಿ ಮಾದಕವಸ್ತು ತಯಾರಿಕಾ ಘಟಕ ಕಾರ್ಯನಿರ್ವಹಿಸುತ್ತಿದ್ದ ಪ್ರಕರಣವನ್ನು ರಾಷ್ಟ್ರೀಯ ತನಿಖಾ ದಳ (ಎನ್‌ಐಎ)ಕ್ಕೆ ವಹಿಸಬೇಕು' ಎಂದು ಬಿಜೆಪಿ ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ಆರ್.ರಘು ಸರ್ಕಾರವನ್ನು ಒತ್ತಾಯಿಸಿದರು.

ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಇದೊಂದು ಬಹಳ ಗಂಭೀರವಾದ ಪ್ರಕರಣವಾಗಿದ್ದು, ಯಾವುದೇ ಕಾರಣಕ್ಕೂ ಹಳ್ಳ ಹಿಡಿಯದಂತೆ ನೋಡಿಕೊಳ್ಳಬೇಕು' ಎಂದು ಆಗ್ರಹಿಸಿದರು. ಮೈಸೂರು ನಗರವು ನಾಡಹಬ್ಬ ದಸರೆಯಿಂದಾಗಿ ಹೆಸರುಗಳಿಸಿತ್ತು. ಈಗ ಡ್ರಗ್ಸ್ ನಗರ ಎಂಬ ಕುಖ್ಯಾತಿಗೆ ಒಳಗಾಗಿರುವುದು ನೋವಿನ ಸಂಗತಿ. ಇಲ್ಲಿ ರೂ.390 ಕೋಟಿ ಮೌಲ್ಯದ ಮಾದಕವಸ್ತು ಪತ್ತೆಯಾಗಿರುವುದು, ಅದನ್ನು ತಯಾರಿಸುವ ಕಾರ್ಖಾನೆಯೇ ಇತ್ತು ಎನ್ನುವುದು ಬಹಳ ಆತಂಕದ ಸಂಗತಿ. ಅದು ಮೈಸೂರಿನ ಪೊಲೀಸರಿಗೆ ತಿಳಿದೇ ಇರಲಿಲ್ಲದಿರುವುದು ಹಾಗೂ ಮತ್ತು ಮಹಾರಾಷ್ಟ್ರ ಪೊಲೀಸರು ಬಂದು ಪತ್ತೆ ಮಾಡಿರುವುದು ರಾಜ್ಯ ಸರ್ಕಾರ ಹಾಗೂ ಇಲ್ಲಿನ ಪೊಲೀಸ್ ವ್ಯವಸ್ಥೆ ತಲೆತಗ್ಗಿಸಬೇಕಾದ ವಿಚಾರ' ಎಂದು ದೂರಿದರು.

**ವಾಪಸ್ ಪಡೆದುಕೊಂಡಿದ್ದೇಕೆ:** ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್‌ಸ್ಪೆಕ್ಟರ್ ಲಕ್ಷ್ಮೀಕಾಂತ ತಳವಾರ ಅವರನ್ನು ಅಮಾನತುಗೊಳಿಸಲಾಗಿತ್ತು. ಆದರೆ, ಕೆಲವೇ ಗಂಟೆಗಳಲ್ಲಿ ವಾಪಸ್ ಪಡೆದುಕೊಳ್ಳಲಾಯಿತು. ಹೀಗೆ ಮಾಡಿದ್ದೇಕೆ ಎಂಬುದನ್ನು ನಗರ ಪೊಲೀಸ್ ಕಮಿಷನರ್ ಸಾರ್ವಜನಿಕವಾಗಿ ತಿಳಿಸಬೇಕು' ಎಂದು ಒತ್ತಾಯಿಸಿದರು.


ಉದಯವಾಹಿನಿ ಚಿತ್ರ

> **ಈ ಪ್ರಕರಣ ಪತ್ತೆ ಹಚ್ಚುವಲ್ಲಿ ನಗರ ಪೊಲೀಸ್ ಆಯುಕ್ತರು ಪ್ರಾಮಾಣಿಕ ಪ್ರಯತ್ನ ಮಾಡುತ್ತಿರಬಹುದು. ಆದರೆ, ಅವರ ಕೈಕಟ್ಟಿ ಹಾಕಿರಲೂಬಹುದು.**
>
> **ಆರ್.ರಘು ಅಧ್ಯಕ್ಷ, ಬಿಜೆಪಿ ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾ**

**ತೆರಿಗೆ ವಸೂಲಿಗೆ ಕ್ರಮ**

ಆ ಪ್ರಕರಣದ ತನಿಖೆ ಹಳ್ಳ ಹಿಡಿಸಲಾಗಿದೆ. ತನಿಖೆಯ ಪ್ರಗತಿ ಏನಾಯಿತು ಎಂಬುದು ಗೊತ್ತಾಗುತ್ತಿಲ್ಲ. ಹೀಗಾಗಿ, ಸರ್ಕಾರವೇ ಸ್ವಯಂಪ್ರೇರಿತವಾಗಿ ಎನ್‌ಐಗೆ ವಹಿಸಬೇಕು. ಇಲ್ಲದಿದ್ದರೆ, ಮಧ್ಯಪ್ರವೇಶಿಸುವಂತೆ ಪಕ್ಷದಿಂದ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಗುವುದು ಎಂದು ತಿಳಿಸಿದರು.

'ವಿದ್ಯಾರ್ಥಿ-ಯುವಜನರ ಬದುಕನ್ನು ಹಾಳು ಮಾಡುವಂತಹ

### ಪ್ರಭಾವಿ ಶಕ್ತಿಯೊಂದರ ಕೈವಾಡ

**ಜಾಲದ ಹಿಂದೆ ಪ್ರಭಾವಿ ಶಕ್ತಿಯೊಂದರ ಕೈವಾಡವಿದೆ. ಇದನ್ನು ಹೊರತೆಗೆಯುವುದು ನಮ್ಮ ಪೊಲೀಸರಿಂದ ಸಾಧ್ಯವಾಗುತ್ತಿಲ್ಲ. ಈ ಜಾಲದ ಹಿಂದೆ ಇರುವ ಕಠೋರ, ಕೆಟ್ಟ ಶಕ್ತಿ ಯಾವುದು ಎಂಬುದನ್ನು ಈ ವೇಳೆಗಾಗಲೇ ಪತ್ತೆ ಹಚ್ಚಬೇಕಿತ್ತು. ಆದರೆ, ಪ್ರಕರಣದಲ್ಲಿ ಯಾವುದೇ ಪ್ರಗತಿ ಕಾಣದಿರುವುದು ಅಸಮಾಧಾನ ತಂದಿದೆ' ಎಂದು ರಘು ಹೇಳಿದರು. ಮೈಸೂರಿನ ಪ್ರತಿ ಮನೆ, ಕುಟುಂಬದ, ಶಿಕ್ಷಣ ಸಂಸ್ಥೆಯ ಆತಂಕದ ಪ್ರಶ್ನೆ ಇದಾಗಿದೆ ಎಂಬುದನ್ನು ಪೊಲೀಸರು ತಿಳಿಯಬೇಕು ಎಂದು ಹೇಳಿದರು.**

ಡ್ರಗ್ಸ್ ಮಾಫಿಯಾ ಇದಾಗಿದ್ದು, ರಾಜ್ಯದಲ್ಲಿ ಸಕ್ರಿಯವಾಗಿ ಕೆಲಸ ಮಾಡುತ್ತಿದೆ. ದೇಶವನ್ನು ವಿಧ್ವಂಸಗೊಳಿಸುವಂತಹ ವ್ಯವಸ್ಥಿತ ಪಿತೂರಿಯನ್ನು ವಿದೇಶಿ ಜಾಲ ಮಾಡುತ್ತಿದೆ ಎಂದು ಆರೋಪಿಸಿದರು. ಮುಖ್ಯಮಂತ್ರಿ ತವರು ಜಿಲ್ಲೆಯಲ್ಲೇ ಈ ಜಾಲ ಪತ್ತೆಯಾಗಿದೆ. ಆದರೆ, ರಾಜ್ಯ ಸರ್ಕಾರದಿಂದ ಯಾವುದೇ ಸ್ಪಷ್ಟನೆಯನ್ನೂ ಕೊಡಲಿಲ್ಲ. ಇದರ ಅರ್ಥವೇನು ಡ್ರಗ್ ಮಾಫಿಯಾವನ್ನು ಬೇರುಸಮೇತ ಕಿತ್ತು ಹಾಕಲು ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಬೇಕು' ಎಂದು ಒತ್ತಾಯಿಸಿದರು.

ಪಕ್ಷದ ಮಹಾನಗರ ಮಾಧ್ಯಮ ಸಂಚಾಲಕ ಮಹೇಶ್ ರಾಜೇ ಅರಸ್, ಕಾರ್ಯಾಲಯ ಕಾರ್ಯದರ್ಶಿ ನಂದಕುಮಾರ್ ಎಸ್. ಇದ್ದರು.

---

# ನನ್ನ ವಿರುದ್ಧ ಮೂವರು ಷಡ್ಯಂತ್ರ! ಶೀಘ್ರವೇ ಸಿಹಿ ಸುದ್ದಿ ನೀಡುವೆ: ಕೆಎನ್ ರಾಜಣ್ಣ

• ಉದಯವಾಹಿನಿ ತುಮಕೂರು

ನನ್ನ ವಿರುದ್ಧ ದೆಹಲಿಯಲ್ಲಿ ಮೂವರು ವ್ಯವಸ್ಥಿತವಾಗಿ ಷಡ್ಯಂತ್ರ ಮಾಡಿದ್ದಾರೆ. ನನಗೂ ಷಡ್ಯಂತ್ರ ಮಾಡೋದು ಗೊತ್ತಿದೆ. ಆದರೆ, ಅದಕ್ಕೆ ಸಮಯ ವ್ಯಯಿಸುವ ಬದಲು ಜನರ ಅಭಿವೃದ್ಧಿಗಾಗಿ ಬಳಸಿಕೊಳ್ಳುತ್ತೇನೆ' ಎಂದು ಮಾಜಿ ಸಚಿವ ಕೆಎನ್ ರಾಜಣ್ಣ ಹೇಳಿದರು. ಮಧುಗಿರಿ ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಿಸಿಎಂ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಸೇರಿದಂತೆ ಈ ರೀತಿಯ ಸಾಕಷ್ಟು ಹೇಳಿಕೆಗಳಿವೆ.



ನಾವು ಹೇಳಿದ್ದನ್ನು ದಿಲ್ಲಿಗೆ ತೆಗೆದುಕೊಂಡು ಹೋಗುತ್ತಾರೆ. ಅಧಿವೇಶನ ಮುಗಿದ ಮೇಲೆ ದಿಲ್ಲಿಗೆ ಹೋಗಿ ಎಲ್ಲರನ್ನೂ ಭೇಟಿ ಮಾಡಿ ಕಾರಣ ತಿಳಿದುಕೊಂಡು, ಅವರಿಗೆ ಮನವರಿಕೆ ಮಾಡಿಕೊಡುತ್ತೇನೆ ಎಂದರು. ಅಧಿಕಾರ ಹೋಗಿದ್ದಕ್ಕೆ ನನಗೆ ಬೇಸರ ಇಲ್ಲ. ಸಿದ್ದರಾಮಯ್ಯ ಬಡವರ ಪರ ಕೆಲಸ ಮಾಡುತ್ತಾರೆ. ಹಾಗಾಗಿ ಖುಷಿಯಿದೆ. ಆದರೆ, ಮೂವರು ದಿಲ್ಲಿಯಲ್ಲಿ ನನ್ನ ವಿರುದ್ಧ ವ್ಯವಸ್ಥಿತವಾಗಿ ಪಿತೂರಿ ಮಾಡಿದ್ದಾರೆ. ನಮಗೂ ವ್ಯವಸ್ಥಿತವಾಗಿ ಮುಗಿಸಲು ಬರಲ್ವಾ? ಅದು ಗೊತ್ತಿಲ್ವಾ? ಆದರೆ ಅದನ್ನೆಲ್ಲಾ ಮಾಡಲ್ಲ, ಎಂದರು. ದೆಹಲಿಗೆ ಹೋಗಿ ಬಂದು ಸಿಹಿ ಸುದ್ದಿ ಕೊಡುತ್ತೇನೆ ನನ್ನನ್ನು ಸಚಿವ ಸ್ಥಾನದಿಂದ ತೆಗೆಯೋದು ಮುಖ್ಯಮಂತ್ರಿಯವರಿಗೇ ಗೊತ್ತಿರಲಿಲ್ಲ. ಅವರು ಹೈಕಮಾಂಡ್ ಮನವೊಲಿಸಲು ಪ್ರಯತ್ನಿಸಿದ್ದಾರೆ, ಆದರೆ ಆಗಿಲ್ಲ. ಅಧಿವೇಶನ ಮುಗಿದ ಮೇಲೆ ದಿಲ್ಲಿಗೆ ಹೋಗಿ ಬಂದು ಸಿಹಿ ಸುದ್ದಿ ಕೊಡುತ್ತೇನೆ, ಎಂದು ಹೇಳಿದರು.

ರಾಹುಲ್ ಗಾಂಧಿ ಅವರು ವೋಟ್ ಚೋರಿ ವಿಚಾರ

> **ಶ್ರೀರಾಮುಲು ಅವರನ್ನು ನಾನೇ ಕಾಂಗ್ರೆಸ್‌ಗೆ ಕರೆತರುತ್ತೇನೆ. ಕಾಂಗ್ರೆಸ್‌ನಲ್ಲಿ ಹಿರಿತನವಿದೆ. ಅವರು ಪ್ರೀತಿ, ವಿಶ್ವಾಸಕ್ಕೆ ಹಾಗೆ ಹೇಳಿರಬಹುದು. ಅವರು ಹೇಳಿದರೆಂದು ನಾನು ಬಿಜೆಪಿಗೆ ಹೋಗಲಿಕ್ಕೆ ಆಗುತ್ತದೆಯೇ? ಕಾಂಗ್ರೆಸ್ ನನಗೇನು ಕಡಿಮೆ ಮಾಡಿದೆ. ರಾಜಕೀಯದಲ್ಲಿಯಾವ ಸಂದರ್ಭದಲ್ಲಿ ಏನಾಗುತ್ತದೆ ಅಂತ ಹೇಳಲು ಬರಲ್ಲ ಎಂದು ಕೆಎನ್ ರಾಜಣ್ಣ ಹೇಳಿದರು.**

ತೆಗೆದುಕೊಂಡು ಜಾಗೃತಿ ಮೂಡಿಸುತ್ತಿರುವುದು ಒಳ್ಳೆಯ ಕೆಲಸ. ನಗರಗಳಲ್ಲೇ ಇದು ಜಾಸ್ತಿಯಾಗಿದ್ದು, ಹಳ್ಳಿಗಳಲ್ಲಿ ಮಾಡುವುದಿಲ್ಲ. ರಾಷ್ಟ್ರಮಟ್ಟದಲ್ಲಿ ಇನ್ನೊಂದು 20 ಸ್ಥಾನಗಳು ಬಂದಿದ್ದರೆ, ರಾಹುಲ್ ಗಾಂಧಿ ಪ್ರಧಾನಿ ಆಗುತ್ತಿದ್ದರು. ಆಗ ಮೋದಿ ಪ್ರಧಾನಿ ಆಗೋದು ಕಷ್ಟ ಆಗುತ್ತಿತ್ತು. ರಾಜಕೀಯದಲ್ಲಿ ಮೋಸ ಜಾಸ್ತಿ ದಿನ ನಡೆಯುವುದಿಲ್ಲ ಎಂದು ತಿಳಿಸಿದರು.

**ನಾನು ಒಳಮೀಸಲು ಪರ:** ದಲಿತ – ಹಿಂದುಳಿದವರು ಹಾಗೂ ಎಲ್ಲಾ ಜಾತಿಯಲ್ಲಿಇರುವ ಬಡವರ ಪರ. ಇವತ್ತು ಒಪ್ಪತ್ತಿನ ಊಟ ಮಾಡುವ ಬ್ರಾಹ್ಮಣ ಮನೆಗಳಿವೆ. ಬಡತನ ತುಂಬಾ ಕ್ರೂರವಾಗಿ ಇರುತ್ತದೆ ಎಂದು ಹೇಳಿದ್ದಾರೆ. ಮಾಜಿ ಸಚಿವ ಕೆ.ಎನ್.ರಾಜಣ್ಣ ಅವರನ್ನು ಸಂಪುಟದಿಂದ ಕೈಬಿಟ್ಟ ವಿಷಯ ಪಕ್ಷದ ಹೈಕಮಾಂಡ್ ತೀರ್ಮಾನ. ರಾಜಣ್ಣ ನನ್ನ ಆಪ್ತರು, ಮಾರ್ಗದರ್ಶಕರು. ಷಡ್ಯಂತ್ರದ ಬಗ್ಗೆ ನಮಗೇನೂ ತಿಳಿದಿಲ್ಲ.

---



## ಮಿನಿ ನ್ಯೂಸ್

### ಸಂಗೊಳ್ಳಿ ರಾಯಣ್ಣ ಜಯಂತಿ

• ಉದಯವಾಹಿನಿ ಚನ್ನಪಟ್ಟಣ

ಕರ್ನಾಟಕ ರಾಜ್ಯ ಪ್ರಾದೇಶಿಕ ಕುರುಬರ ಸಂಘ, ಚನ್ನಪಟ್ಟಣ ತಾಲ್ಲೂಕು ಶಾಖೆ ವತಿಯಿಂದ ನಗರದ ಸಂಘದ ಕಚೇರಿ ಆವರಣದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಜಯಂತಿ ಆಚರಿಸಲಾಯಿತು. ಸಂಗೊಳ್ಳಿ ರಾಯಣ್ಣ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ರಾಷ್ಟ್ರಗೀತೆ ಹಾಡುವುದರ ಮೂಲಕ ಗೌರವಾರ್ಪಣೆ ಸಲ್ಲಿಸಲಾಯಿತು. ಶಿಕ್ಷಕರ ಅಮ್ಮಳ್ಳಿದೊಡ್ಡಿ ನಾಗೇಂದ್ರ ಮಾತನಾಡಿ, ಸಂಗೊಳ್ಳಿ ರಾಯಣ್ಣ ಅವರು ಕಿತ್ತೂರುರಾಣಿ ಚನ್ನಮ್ಮ ಅವರ ಮಾನಸ ಪುತ್ರನಾಗಿದ್ದ. ಬ್ರಿಟೀಷರ ವಿರುದ್ಧ ಇವರ ಹೋರಾಟದ ವೀರಾವೇಶ ಬ್ರಿಟಿಷರ ನಿದ್ದೆ ಕೆಡಿಸಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂಗೊಳ್ಳಿ ರಾಯಣ್ಣನ ಸಮಾಧಿ, ಸೈನಿಕ ಶಾಲೆ ಮತ್ತು ವಸ್ತು ಪ್ರದರ್ಶನಾಲಯವನ್ನು ಗ್ರಾಮದಲ್ಲಿ ಸ್ಥಾಪಿಸಿ ಗೌರವ ಸಲ್ಲಿಸಿದ್ದಾರೆ. ಜತೆಗೆ ರಾಜ್ಯದಲ್ಲಿ ಶೌರ್ಯ ಪ್ರಶಸ್ತಿಗೆ ಪಾತ್ರರಾದವರಿಗೆ ಸಂಗೊಳ್ಳಿರಾಯಣ್ಣ ಹೆಸರಲ್ಲಿ ಪ್ರಶಸ್ತಿ ನೀಡಲಾಗುತ್ತಿದೆ. ಇದು ಹೆಮ್ಮೆಯ ವಿಷಯ ಎಂದರು. ಸಮುದಾಯದ ಹಿರಿಯ ಮುಖಂಡ ಹನಿಯೂರು ಶಿವಬೀರಯ್ಯ ಮಾತನಾಡಿ, ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿ ಮಡಿದ ಸಂಗೊಳ್ಳಿ ರಾಯಣ್ಣ ಹೋರಾಟವೇ ಸ್ಫೂರ್ತಿ ಎಂದರು.

### ಮತಗಳ್ಳತನ ವಿರುದ್ಧ ಕಾಂಗ್ರೆಸ್ ಮುಖಂಡರು ಪ್ರತಿಭಟನೆ

• ಉದಯವಾಹಿನಿ ತುಮಕೂರು

ಕಳೆದ ಲೋಕಸಭಾ ಚುನಾವಣೆ, ವಿವಿಧ ರಾಜ್ಯಗಳ ವಿಧಾನಸಭಾ ಚುನಾವಣೆ ವೇಳೆ ಮತಗಳ್ಳತನ ಮಾಡಲಾಗಿದೆ ಎಂದು ಆರೋಪಿಸಿ ಕಾಂಗ್ರೆಸ್ ಮುಖಂಡರು ನಗರದ ಟೌನ್ ಹಾಲ್ ವೃತ್ತದಲ್ಲಿ ರಾತ್ರಿ ಮೇಣದ ಬತ್ತಿ ಹಿಡಿದು ಪ್ರತಿಭಟನೆ ನಡೆಸಿದರು. ಕೇಂದ್ರ ಸರ್ಕಾರ, ಚುನಾವಣಾ ಆಯೋಗದ ಕ್ರಮ ಖಂಡಿಸಿದರು.'ಬೆಂಗಳೂರಿನ ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಮತಗಳ್ಳತನ ಆಗಿದೆ. ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ಸಾಕ್ಷಿ ಸಮೇತ ತೋರಿಸಿಕೊಟ್ಟಿದ್ದಾರೆ. ಮಹಾರಾಷ್ಟ್ರ, ಇತರೆ ರಾಜ್ಯಗಳ ವಿಧಾನಸಭೆ ಚುನಾವಣೆ ವೇಳೆಯೂ ಮತಗಳ್ಳತನ ಆಗಿರುವುದು ಬಹಿರಂಗಗೊಳಿಸಿದ್ದಾರೆ ಎಂದು ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಜಿ.ಚಂದ್ರಶೇಖರ್‌ಗೌಡ ಹೇಳಿದರು.

ಮುಖಂಡರಾದ ಇಟ್ಬಾಲ್ ಅಹ್ಮದ್, ಗೀತಾ ರಾಜಣ್ಣ, ಮಹೇಶ್, ಫಯಾಜ್, ಷಣ್ಮುಖಪ್ಪ, ಅಸ್ಲಾಂಪಾಷ, ಸುಜಾತಾ, ವಸುಂದರ, ಕವಿತಾ, ನಾಗಮಣಿ, ಮಾರುತಿ, ಕೆಂಪರಾಜು, ಕೊಡಿಯಾಲ ಮಹದೇವ್, ಸೌಭಾಗ್ಯ, ಲೋಕೇಶ್ ಸ್ವಾಮಿ, ಪಿ.ಶಿವಾಜಿ. ರೇವಣಸಿದ್ದಯ್ಯ, ಫರ್ಹಾನಾ ಬೇಗಂ, ವಿಜಯಲಕ್ಷ್ಮಿ, ಪ್ರೇಮಾ, ಯಶೋದ, ಸಾಹೇರಾ ಮೊದಲಾದವರು ಭಾಗವಹಿಸಿದ್ದರು.

### ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆ ಸಂಭ್ರಮ



• ಉದಯವಾಹಿನಿ ಬೇತಮಂಗಲ

ಸಮೀಪದ ಟಿ.ಗೊಲ್ಲಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆ ಸಂಭ್ರಮದಿಂದ ನಡೆಯಿತು. ವಿವಿಧ ವೇಷಭೂಷಣ ತೊಟ್ಟಿದ್ದ ವಿದ್ಯಾರ್ಥಿಗಳು ದೇಶಭಕ್ತಿ ಗೀತೆ ಹಾಗೂ ನೃತ್ಯ ಪ್ರದರ್ಶನ ಮಾಡಿದರು. ಕಾರ್ಯಕ್ರಮದಲ್ಲಿ ಹೋಬಳಿ ಮಟ್ಟದ ಕ್ರೀಡಾಕೂಟದಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಗಣ್ಯರು ಬಹುಮಾನ ವಿತರಿಸಿದರು. ಮಂಜುನಾಥ್, ರುಕ್ಕಿಣಿಯಮ್ಮ, ನಾರಾಯಣಸ್ವಾಮಿ, ಅಣ್ಣಯ್ಯ, ಯಲ್ಲಪ್ಪ, ಕುಮಾರ್, ಮುರಳಿ, ವೆಂಕಟಸ್ವಾಮಿ, ಪುಟ್ಟಣ್ಣ, ಪಾಪಣ್ಣ, ನೀಲಕಂಠ, ನಾಗೇಶ್, ರಮೇಶ್ ಸೇರಿದಂತೆ ಇತರರು ಇದ್ದರು.

ಅಂತರಾಳದಿಂದ...
EDITORIAL

# ಆರೋಪಿಗಳಿಗೆ ಜಾಮೀನು ರದ್ದು: ನ್ಯಾಯಾಂಗದ ವಿಶ್ವಾಸಾರ್ಹತೆ ಹೆಚ್ಚಳ

ರೇಣುಕಸ್ವಾಮಿ ಕೊಲೆ ಆರೋಪಿಗಳಿಗೆ ಜಾಮೀನು ರದ್ದುಪಡಿಸಿರುವ ಸುಪ್ರೀಂ ಕೋರ್ಟ್ ತೀರ್ಪು, ನ್ಯಾಯದ ಎದುರು ಎಲ್ಲರೂ ಸಮಾನರು ಎನ್ನುವ ನಂಬಿಕೆಯನ್ನು ಬಲಪಡಿಸುವಂತಿದೆ. ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಚಲನಚಿತ್ರ ನಟ ದರ್ಶನ್ ತೂಗುದೀಪ, ಪವಿತ್ರಾ ಗೌಡ ಸೇರಿದಂತೆ ಏಳು ಆರೋಪಿಗಳಿಗೆ ಕರ್ನಾಟಕ ಹೈಕೋರ್ಟ್ ಮಂಜೂರು ಮಾಡಿದ್ದ ಜಾಮೀನು ಆದೇಶವನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿದೆ. ಹೈಕೋರ್ಟ್ ನೀಡಿದ್ದ ಜಾಮೀನನ್ನು ರದ್ದುಗೊಳಿಸಿರುವ ನ್ಯಾಯಪೀಠದ ಆದೇಶಕ್ಕೆ ನಿರ್ದಿಷ್ಟ ಘಟನೆಯನ್ನು ಮೀರಿದ ಮಹತ್ವವಿದೆ. ಅಧಿಕಾರ, ಹಣ ಅಥವಾ ಜನಪ್ರಿಯತೆ ಸೇರಿದಂತೆ ಕಾನೂನಿನ ಎದುರು ಯಾವುದೂ ದೊಡ್ಡದಲ್ಲ ಎನ್ನುವುದನ್ನು ಈ ನಿರ್ದೇಶನ ದೃಢೀಕರಿಸುವಂತಿದೆ ಹಾಗೂ ಕಾನೂನಿನ ಮುಂದೆ ಎಲ್ಲರೂ ಸಮಾನರು ಎನ್ನುವ ನ್ಯಾಯಾಂಗದ ಮೂಲಭೂತ ತತ್ತ್ವವನ್ನು ಎತ್ತಿಹಿಡಿಯುವಂತಿದೆ. ಪವಿತ್ರಾ ಗೌಡ ಅವರಿಗೆ ಅವಹೇಳನಕಾರಿ ಸಂದೇಶಗಳನ್ನು ಕಳುಹಿಸುತ್ತಿದ್ದ ಎನ್ನುವ ಕಾರಣಕ್ಕೆ ರೇಣುಕಸ್ವಾಮಿಯನ್ನು ಅಪಹರಿಸಿ, ಶೆಡ್ ಒಂದರಲ್ಲಿ ಬಂಧನದಲ್ಲಿರಿಸಿ,



> **ಹೈಕೋರ್ಟ್‌ನಿಂದ ಜಾಮೀನು ದೊರೆಯುವ ಮೊದಲು ಜೈಲಿನಲ್ಲಿದ್ದಾಗ ದರ್ಶನ್ ಧೂಮಪಾನ ಮಾಡಿದ್ದನ್ನು ಉಲ್ಲೇಖಿಸಿರುವ ಕೋರ್ಟ್, ರಾಜಾತಿಥ್ಯ ಮುಂದುವರಿದಲ್ಲಿ ಬಂದೀಖಾನೆಯ ಅಧಿಕಾರಿಗಳನ್ನು ಅಮಾನತುಗೊಳಿಸುವುದಾಗಿ ಎಚ್ಚರಿಕೆ ನೀಡಿದೆ. ಕಾನೂನು ಎಲ್ಲರೂ ಪಾಲಿಸಬೇಕಾದ ಕರ್ತವ್ಯವಾಗಿದೆಯೇ ಹೊರತು. ಆಯ್ದ ಕೆಲವರಿಗೆ ಅನುಕೂಲ ದೊರಕಿಸಿಕೊಡುವ ಸವಲತ್ತು ಅಲ್ಲ ಎನ್ನುವುದನ್ನು ಕೋರ್ಟ್‌ನ ಎಚ್ಚರಿಕೆ ಧ್ವನಿಸುವಂತಿದೆ. ಕರ್ನಾಟಕ ಹೈಕೋರ್ಟ್ ಆದೇಶದ ಬಗ್ಗೆ ನ್ಯಾಯಪೀಠ ಅತ್ಯಂತ ಕಠಿಣವಾಗಿ ಪ್ರತಿಕ್ರಿಯಿಸಿದ್ದು, ಜಾಮೀನು ನೀಡಿರುವ ಆದೇಶವು ವಿವೇಚನಾ ಅಧಿಕಾರವನ್ನು ಯಾಂತ್ರಿಕವಾಗಿ ಬಳಸಿರುವುದರ ಫಲವಾಗಿದೆ ಎಂದು ಹೇಳಿದೆ. ಜಾಮೀನು ನೀಡುವ ಸಂದರ್ಭದಲ್ಲಿ ಸಾಕ್ಷಿಗಳ ಹೇಳಿಕೆಗಳನ್ನು ಸಮರ್ಪಕವಾಗಿ ಪರಿಗಣಿಸದಿರುವುದನ್ನೂ ನ್ಯಾಯಪೀಠ ಗುರ್ತಿಸಿದೆ.**

**ಚಿತ್ರಹಿಂಸೆ ನೀಡಿ ಕೊಲ್ಲಲಾಗಿದೆ:** ಕೊಲೆಗೀಡಾದ ವ್ಯಕ್ತಿಯ ದೇಹವನ್ನು ಚರಂಡಿಗೆ ಎಸೆಯಲಾಗಿದೆ ಎನ್ನುವ ಗುರುತರ ಆರೋಪವನ್ನು ದರ್ಶನ್ ಹಾಗೂ ಆತನ ಸಹವರ್ತಿಗಳು ಎದುರಿಸುತ್ತಿದ್ದಾರೆ. ಮನೆಗೆಲಸದ ಮಹಿಳೆಯ ಮೇಲೆ ಅತ್ಯಾಚಾರ ಎಸಗಿದ್ದ ಪ್ರಕರಣದಲ್ಲಿ ಹಾಸನ ಲೋಕಸಭಾ ಕ್ಷೇತ್ರದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಇತ್ತೀಚೆಗಷ್ಟೇ ಅಜೀವ ಜೈಲು ಶಿಕ್ಷೆಗೆ ಗುರಿಯಾಗಿದ್ದಾರೆ. ಆ ಪ್ರಕರಣದ ನಂತರ, ಪೊಲೀಸ್ ತನಿಖೆ ಹಾಗೂ ಪ್ರಾಸಿಕ್ಯೂಷನ್ ವಾದಕ್ಕೆ ನ್ಯಾಯಾಂಗದ ಅನುಮೋದನೆ ದೊರೆತಿರುವ ಎರಡನೇ ಪ್ರಮುಖ ಪ್ರಕರಣ ಇದಾಗಿದೆ. ಜನರ ಗಮನಸೆಳೆದಿರುವ ಈ ಪ್ರಕರಣದಲ್ಲಿ ಆರೋಪಿಗಳಿಗೆ ಹೈಕೋರ್ಟ್ ನೀಡಿದ್ದ ಜಾಮೀನನ್ನು ರದ್ದು ಮಾಡಿರುವ ಸುಪ್ರೀಂ ಕೋರ್ಟ್ ತೀರ್ಮಾನ ನ್ಯಾಯಾಂಗದ ವಿವೇಚನೆಯ ಬಗ್ಗೆ ಜನಸಾಮಾನ್ಯರಲ್ಲಿ ಗೌರವ ಮೂಡಿಸುವಂತಹದ್ದಾಗಿದೆ. ನ್ಯಾಯಾಂಗ ಯಾರೊಬ್ಬರ ಪಕ್ಷಪಾತಿಯೂ ಆಗಿರದೆ ವಿಶೇಷವಾಗಿ ಪ್ರಭಾವಿಗಳ ಒತ್ತಡಕ್ಕೆ ಮಣಿಯದೆ ಕಾನೂನು ನಿಯಮಗಳನ್ನು ಎತ್ತಿಹಿಡಿಯಲು ನೀಡಿರುವ ಕರೆಯ ರೂಪದಲ್ಲಿಯೂ ಪ್ರಸಕ್ತ ತೀರ್ಪಿಗೆ ಮಹತ್ವವಿದೆ.

ಆರೋಪಕ್ಕೆ ಗುರಿಯಾದ ವ್ಯಕ್ತಿ ಯಾರೇ ಆಗಿರಲಿ, ಎಷ್ಟೇ ಉನ್ನತ ಸ್ಥಾನದಲ್ಲಿರಲಿ, ಅವರು ಕಾನೂನಿನ ಚೌಕಟ್ಟಿಗಿಂತಲೂ ದೊಡ್ಡವರಲ್ಲ ಎನ್ನುವ ಸಂಗತಿಯನ್ನು ಸುಪ್ರೀಂ ಕೋರ್ಟ್ ನಿರ್ದೇಶನ ಅನುಮಾನಕ್ಕೆ ಆಸ್ಪದವಿಲ್ಲದಂತೆ ಸ್ಪಷ್ಟಪಡಿಸಿದೆ.

ಸೆಲೆಬ್ರಿಟಿ ಸ್ಥಾನಮಾನ ಅಥವಾ ರಾಜಕೀಯ ಅಧಿಕಾರವು ನ್ಯಾಯಾಂಗ ಪ್ರಕ್ರಿಯೆಯ ಮೇಲೆ ಪ್ರಭಾವ ಬೀರಬಲ್ಲದು ಎನ್ನುವ ಸಾರ್ವಜನಿಕ ಆತಂಕಕ್ಕೆ ನೀಡಿರುವ ಪ್ರತಿಕ್ರಿಯೆಯ ರೂಪದಲ್ಲೂ ಈ ತೀರ್ಪನ್ನು ಗಮನಿಸಬಹುದು. ರೇಣುಕಸ್ವಾಮಿ ಕೊಲೆ ಆರೋಪಿಗಳಿಗೆ ಜಾಮೀನು ರದ್ದುಪಡಿಸಿರುವ ಸುಪ್ರೀಂ ಕೋರ್ಟ್ ಆದೇಶವು, ನ್ಯಾಯಾಂಗದ ಪ್ರಕ್ರಿಯೆಯಲ್ಲಿ ಆಗಿರುವ ಲೋಪವೊಂದರ ತಿದ್ದುಪಡಿಯಷ್ಟೇ ಆಗಿಲ್ಲ; ಅದು, ನ್ಯಾಯಾಂಗದ ಶಿಸ್ತಿನ ಬಲವರ್ಧನೆಯ ಪ್ರಯತ್ನವೂ ಆಗಿದೆ. ಫೊರೆನ್ಸಿಕ್ ಸಾಕ್ಷ್ಯಗಳ ಪ್ರಬಲ ಒತ್ತಾಸೆಯಿರುವುದನ್ನು ಪ್ರಕರಣದ ಸಂಕೀರ್ಣತೆಯ ಸೂಚನೆಯಾಗಿ ಪರಿಗಣಿಸಿರುವ ನ್ಯಾಯಪೀಠ ಹೈಕೋರ್ಟ್ ಮಂಜೂರು ಮಾಡಿದ್ದ ಜಾಮೀನನ್ನು ರದ್ದುಗೊಳಿಸಿದೆ.

**ನ್ಯಾಯದಾನದ ಪ್ರಕ್ರಿಯೆಯಲ್ಲಿ ಯಾಂತ್ರಿಕ ತೀರ್ಮಾನಗಳಿಗೆ ಅವಕಾಶವಿಲ್ಲ:** ತಪ್ಪಾದ ದಯೆ ಅನುಕಂಪ ಅಥವಾ ಯಾವುದೇ ರೀತಿಯ ಪ್ರಭಾವಗಳಿಗೂ ಅವಕಾಶವಿಲ್ಲ ಎನ್ನುವ ಪ್ರಬಲ ಸಂದೇಶವನ್ನೂ ಸುಪ್ರೀಂ ಕೋರ್ಟ್ ತೀರ್ಪು ನೀಡುವಂತಿದೆ. ಸಾರ್ವಜನಿಕ ಜೀವನದ ಮೇಲೆ ಪ್ರಭಾವ ಬೀರುವ ಸಂಸ್ಥೆಗಳ ಕಾರ್ಯಾಚರಣೆಯ ಬಗ್ಗೆ ನಾಗರಿಕರು ವಿಶ್ವಾಸ ಕಳೆದುಕೊಳ್ಳುತ್ತಿರುವ ಸಂದರ್ಭದಲ್ಲಿ, ನ್ಯಾಯಾಂಗದ ವಿಶ್ವಾಸಾರ್ಹತೆಯನ್ನು ಹೆಚ್ಚಿಸುವಂತಹ ತೀರ್ಪನ್ನು ನ್ಯಾಯಪೀಠ ನೀಡಿದೆ.

---

# ರಾಮಾಯಣ



## ಶ್ರೀ ರಾಮನು ಆ ಶ್ರೀ ಮುನಿಯ ಆಶ್ರಮದಿಂದ ದಂಡಕಾರಣ್ಯಕ್ಕೆ ಹೊರಟದ್ದು

• ಹಿಂದಿನ ಸಂಚಿಕೆಯಿಂದ

### 116 ನೆಯ ಅಧ್ಯಾಯ

ಆಮೇಲೆ ಅನಸೂಯಾದೇವಿಯು ಶ್ರೀರಾಮನ ಸ್ವಯಂವರ ವೃತ್ತಾಂತವನ್ನು ಕೇಳಿ ಹರ್ಷದಿಂದ ಸೀತಾದೇವಿಯನ್ನು ಆಲಿಂಗಿಸಿ ಆ ದೇವಿಯ ಶಿರಸ್ಸನ್ನಾಘ್ರಾಣಿಸಿ ಹೀಗೆಂದಳು: ಸೀತಾದೇವಿ, ನೀನು ಹೇಳಿದ ಕಥೆಯು ಅತ್ಯಾಶ್ಚರ್ಯಕರವಾಗಿ ಕಿವಿಗಿಂಪಾಗಿದೆ. ನಿನ್ನ ಸ್ವಯಂವರವೃತ್ತಾಂತವನ್ನು ಕೇಳಿ ಮನಸ್ಸಿಗೆ ಹರ್ಷವಾಯಿತು. ನೀನು ಇಲ್ಲಿಗೆ ಬಂದು ಬಹಳ ಹೊತ್ತಾಯಿತು. ಸೂರ್ಯನು ಅಸ್ತಾದ್ರಿಗೆ ಹೋಗುವುದರಲ್ಲಿರುವನು. ಆಹಾರನಿಮಿತ್ತವಾಗಿ ಹೋದ ಪಕ್ಷಿಗಳು ಸಾಯಂಕಾಲವಾಗಲು ತಮ್ಮ ತಮ್ಮ ಗೂಡುಗಳನ್ನು ಸೇರಿ ಮನೋಹರವಾಗಿ ಸ್ವರಗೈಯುತ್ತಿವೆ. ಸಮಸ್ತ ಋಷಿಗಳೂ ಸಾಯಂಕಾಲ ಸ್ನಾನವನ್ನು ಮಾಡಿ ನಾರುಬಟ್ಟೆಗಳನ್ನುಟ್ಟುಕೊಂಡು ಕಲಶಗಳಲ್ಲಿ ತೀರ್ಥಗಳನ್ನು ಹೊತ್ತುಕೊಂಡು ಬರುತ್ತಿರುವರು. ದೀಕ್ಷಿತರು ಆಶ್ರಮಗಳಲ್ಲಿ ಅಗ್ನಿಹೋತ್ರಗಳನ್ನು ಮಾಡಿಕೊಂಡಿರಲು ಹೋಮ ಧೂಮಗಂಧವು ಪಸರಿಸುತ್ತಿದೆ. ಸಮೀಪದಲ್ಲಿರುವ ವಸ್ತುಗಳೂ ಚೆನ್ನಾಗಿ ಕಾಣುವುದಿಲ್ಲ. ತಪೋವನದಲ್ಲಿರುವ ಮೃಗಗಳು ಆಶ್ರಮಗಳ ಮುಂದಿರುವ ಜಗುಲಿಗಳಲ್ಲಿ ಮಲಗುತ್ತಿವೆ. ನಕ್ಷತ್ರ ಮಂಡಲದಿಂದ ಅಲಂಕರಿಸಲ್ಪಟ್ಟ ರಾತ್ರಿಯು ಸಮೀಪವಾಯಿತು. ಚಂದ್ರನು ತನ್ನ ಕಿರಣಗಳಿಂದ ಮನೋಹರವಾಗಿ ತೋರುತ್ತಿದ್ದಾನೆ. ಇನ್ನು ನೀನು ನಿನ್ನ ಪತಿಯಾದ ಶ್ರೀರಾಮನ ಸಮೀಪಕ್ಕೆ ಹೋಗು. ನಾನು ಕೊಟ್ಟಿರುವ ದಿಗಂಧವನ್ನು ಮೈಗೆ ಅನುಲೇಪನಮಾಡಿಕೊಂಡು ದಿವ್ಯವಾದ ಪುಷ್ಪಗಳನ್ನು ಮುಡಿದುಕೊ. ನಾನು ಕೊಟ್ಟಿರುವ ದಿವ್ಯಾಭರಣಗಳನ್ನು ಧರಿಸಿಕೊ. ನಾನು ನನ್ನ ಕಣ್ಣುಗಳು ದಣಿಯುವ ಹಾಗೆ ನೋಡಿ ಸಂತೋಷ ಪಡುತ್ತೇನೆ. ದಿವ್ಯಾಭರಣಭೂಷಿತಳಾಗಿ ನೀನು ನಿನ್ನ ಪ್ರಾಣಕಾಂತನ ಸಮೀಪಕ್ಕೆ ಹೋಗು ಎಂದು ನುಡಿದಳು. ಸೀತಾದೇವಿಯು ಆ ದಿವ್ಯಗಂಧ ಪುಷ್ಪಮಾಲೆ ದಿವ್ಯಾಭರಣಗಳನ್ನು ತೊಟ್ಟುಕೊಳ್ಳಲು ಅನಸೂಯಾದೇವಿಯು ಅತ್ಯಂತ ಪ್ರೀತಿಯಿಂದ ಆಶೀರ್ವಾದವನ್ನು ಮಾಡಿ ಕಳುಹಿಸಿದಳು. ಸೀತಾದೇವಿಯು ಅನಸೂಯಾದೇವಿಗೆ ನಮಸ್ಕಾರವನ್ನು ಮಾಡಿ ಶ್ರೀರಾಮನ ಬಳಿಗೆ ಹೋಗಲು ಆತನು ಸರ್ವಾಭರಣಭೂಷಿತೆಯಾಗಿ ಪುಷ್ಪಗಳನ್ನು ಮುಡಿದುಕೊಂಡು ಅಂಗರಾಗಾನು ಲೇಪನ ಮಾಡಿಕೊಂಡು ಬಂದ ಆ ದೇವಿಯನ್ನು ಕಂಡು ಆನಂದಿಸಿದನು. ಸೀತಾದೇವಿಯು ತನಗೆ ಅನಸೂಯಾದೇವಿಯು ಉಚಿತವಾಗಿ ಉಡುಗೊರೆಗಳನ್ನು ಕೊಟ್ಟು ಸತ್ಕಾರಮಾಡಿದ ವೃತ್ತಾಂತವನ್ನು ಹೇಳಿದಳು.

ಅದನ್ನು ಕೇಳಿ ರಾಮಲಕ್ಷ್ಮಣರು ಹರ್ಷಿತರಾಗಿ ಅಲ್ಲಿದ್ದ ಋಷಿಗಳು ಮಾಡಿದ ಸತ್ಕಾರವನ್ನು ಕೈಕೊಂಡು ಆ ರಾತ್ರಿಯನ್ನು ಕಳೆದು ಮಾರನೆಯ ದಿನ ಪ್ರಾತಃಕಾಲದಲ್ಲೆದ್ದು ಸ್ನಾನಾದಿಗಳನ್ನು ತೀರಿಸಿಕೊಂಡು ಆ ವನದಲ್ಲಿ ಸಂಚರಿಸುತ್ತಿದ್ದ ಧರ್ಮಾತ್ಮರಾದ ತಪಸ್ವಿಗಳನ್ನು ಆ ವನದಲ್ಲಿ ಯಾವ ಮಾರ್ಗದಿಂದ ಸಂಚರಿಸಬೇಕೆಂದೂ ಕಂದಮೂಲಫಲಗಳು ಯಾವ ದಿಕ್ಕಿನಲ್ಲಿರುವುವೆಂದೂ ಕೇಳಿದರು. ಆ ಋಷಿಗಳು ಶ್ರೀರಾಮನನ್ನು ನೋಡಿ ''ಶ್ರೀರಾಮ, ಈ ವನದಲ್ಲಿ ಸಂಚರಿಸುವುದು ಮಹಾ ದುರ್ಘಟವು.

ಮುಂದುವರಿಯುವುದು...

---

# ನೇತಾಜಿ ಸುಭಾಷ್ ಚಂದ್ರ ಬೋಸ್ ರವರ 80ನೇ ವರ್ಷದ ಪುಣ್ಯಸ್ಮರಣೆ



ಕಲಾ ಸಾಹಿತ್ಯ
ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

ನೇತಾಜಿ ಸುಭಾಷ್ ಚಂದ್ರ ಬೋಸರು 1897 ಜನವರಿ 23 ರಂದು ಒರಿಸ್ಸಾದ ಕಟಕ್‌ನಲ್ಲಿ ಜನಿಸಿದರು. ತಂದೆ ಜಾನಕಿನಾಥ ಬೋಸ್, ತಾಯಿ ಪ್ರಭಾವತಿ. ಬೋಸರ ಪ್ರಾಥಮಿಕ ವಿದ್ಯಾಭ್ಯಾಸ ಕಟಕ್‌ನಲ್ಲಿಯೇ ನಡೆಯಿತು. ಆ ಬಳಿಕ ಕಲ್ಕತ್ತೆಗೆ ತೆರಳಿ ಪ್ರೆಸಿಡೆನ್ಸಿ ಕಾಲೇಜು ಸೇರಿದರು.

ಆ ಕಾಲೇಜಿನಿಂದ ಎಂ.ಎ. ಪದವಿ ಪಡೆದ ಮೇಲೆ ಇಂಡಿಯನ್ ಸಿವಿಲ್ ಸರ್ವಿಸ್ ಪರೀಕ್ಷೆಗೆ ಪ್ರವೇಶ ಪಡೆಯಲು ಇಂಗ್ಲೆಂಡಿಗೆ ಹೊರಟರು. ಪ್ರತಿಭಾವಂತರಾಗಿದ್ದ ಬೋಸ್ ಅವರು ಐಸಿಎಸ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಆಯ್ಕೆಯಾದರು. ಆದರೆ ಸರ್ಕಾರಕ್ಕೆ ಸೇವೆ ಸಲ್ಲಿಸ ಬಾರದೆಂದು ನಿರ್ಧರಿಸಿದ ಅವರು ಐಸಿಎಸ್ ಹುದ್ದೆಯನ್ನು ತ್ಯಜಿಸಿ ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡರು.

ನನಗೆ ರಕ್ತ ಕೊಡಿ ನಾನು ನಿಮಗೆ ಸ್ವಾತಂತ್ರ್ಯ ತಂದು ಕೊಡುತ್ತೇನೆ ಎಂದು ಘೋಷಿಸಿದರು. ಇವರು ಮಹಾನ್ ದೇಶಭಕ್ತರಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿದ್ದರುಸ್ವಾಮಿ ವಿವೇಕಾನಂದರು ಮತ್ತು ಅರವಿಂದ್ ಘೋಷ್ ರಿಂದ ಪ್ರೇರಣೆ ಪಡೆದಿದ್ದರು. ರಾಜಕೀಯದಲ್ಲಿ ದೇಶಬಂಧು ಚಿತ್ತರಂಜನ ದಾಸರು ಅವರಿಗೆ ಮಾರ್ಗದರ್ಶಕರಾಗಿದ್ದರು. 1921 ರಲ್ಲಿ ಪ್ರಿನ್ಸ್ ಆಫ್ ವೇಲ್ಸ್ ಭಾರತಕ್ಕೆ ಬಂದಿದ್ದಾಗ ಅವರ ಭೇಟಿಯನ್ನು ವಿರೋಧಿಸಿ ಕಲ್ಕತ್ತೆಯಲ್ಲಿ ಭಾರಿ ಮೆರವಣಿಗೆಯನ್ನು ಏರ್ಪಡಿಸಲಾಗಿತ್ತು. ಸುಭಾಷರು ಅದರಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಬ್ರಿಟಿಷ್ ಸರ್ಕಾರ ಅವರನ್ನು ಬಂಧಿಸಿ ಆರು ವರ್ಷದವರೆಗೆ ಸೆರೆಮನೆ ಶಿಕ್ಷೆ ವಿಧಿಸಿತು. ಬರ್ಮಾದಲ್ಲಿನ ಮಂಡಾಲ ಜೈಲಿಗೆ ಕಳಿಸಿದ್ದರು.

ವಿಶ್ವಕವಿ ರವೀಂದ್ರನಾಥ ಠಾಗೂರ್ ಅವರು ಸುಭಾಷ್ ಚಂದ್ರ ಬೋಸ್ ಅವರ ನಿಲುವನ್ನು ಬೆಂಬಲಿಸಿದರಲ್ಲದೆ, ಅವರನ್ನು ಪ್ರಶಂಸಿಸಿ ಅವರ ನಾಯಕತ್ವದಲ್ಲಿ ತಾವು ಪೂರ್ಣ ಭರವಸೆ ಹೊಂದಿರುವುದಾಗಿ ತಿಳಿಸಿದರು. 1939 ರಲ್ಲಿ ಬೋಸರು ಕಾಂಗ್ರೆಸ್ ಪಕ್ಷದಲ್ಲಿಯೇ ಫಾರ್ವರ್ಡ್ ಬ್ಲಾಕ್ ಕಟ್ಟಿದರು. ಭಾರತದಲ್ಲಿ ಬ್ರಿಟಿಷರ ಆಳ್ವಿಕೆ ವಿರುದ್ಧ ಪೂರ್ಣ ಸ್ವರೂಪದ ಆಂದೋಲನವನ್ನು ಅವರು ಪ್ರಾರಂಭಿಸಿದರು. 1940 ರಲ್ಲಿ ಸರ್ಕಾರ ಅವರನ್ನು ಬಂಧಿಸಿ ಸೆರೆಮನೆಗೆ ಕಳುಹಿಸಿತು. ಅವರಿಗೆ ನೀಡಿದ ಶಿಕ್ಷೆ ನ್ಯಾಯಬದ್ಧವಾಗಿ ಇರಲಿಲ್ಲ. ಸೆರೆಮನೆಯಲ್ಲಿ ಅವರ ಆರೋಗ್ಯ ಹದಗೆಟ್ಟಿತು. ಸರ್ಕಾರ ಅವರನ್ನು ಬಿಡುಗಡೆಗೊಳಿಸಿದರೂ ಗೃಹಬಂಧನದಲ್ಲಿರಿಸಿತು. ಇದೇ ವೇಳೆಯಲ್ಲಿ ಬೋಸರು ಪಠಾಣರ ವೇಷತೊಟ್ಟು ಕಾಬೂಲಿನ ಮೂಲಕವಾಗಿ ರಷ್ಯಾಕ್ಕೆ ಹೋದರು. ಅಲ್ಲಿಂದ ಅವರು ಜರ್ಮನಿ ದೇಶದ ಬರ್ಲಿನ್ನಗೆ ಹೋಗಿ ಅಲ್ಲಿ ಹಿಟ್ಲರ್ ಅವರನ್ನು ಭೇಟಿ ಮಾಡಿದರು. ಬ್ರಿಟಿಷರಿಂದ ಭಾರತವನ್ನು

> **1927 ರಲ್ಲಿ ಸುಭಾಷರ ಬಿಡುಗಡೆಯಾಯಿತು. 1938 ರಲ್ಲಿ ಸುಭಾಷ್ ಚಂದ್ರ ಬೋಸರು ಭಾರತೀಯ ಕಾಂಗ್ರೆಸ್ಸಿನ ಅಧ್ಯಕ್ಷರಾದರು. ಎರಡನೇ ಬಾರಿಯೂ ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದರು. 1939 ಏಪ್ರಿಲ್‌ನಲ್ಲಿ ಪಕ್ಷದ ಸಿದ್ಧಾಂತಗಳ ಬಗ್ಗೆ ಗಾಂಧೀಜಿಯವರೊಡನೆ ಭಿನ್ನಾಭಿಪ್ರಾಯಗಳು ಉಂಟಾದಾಗ ಬೋಸರು ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದರು.**



ಮುಕ್ತಗೊಳಿಸಲು ನೆರವು ನೀಡುವುದಾಗಿ ಹಿಟ್ಲರ್ ಬೋಸರಿಗೆ ಭರವಸೆ ನೀಡಿದರು. ಬೋಸರು ಜರ್ಮನಿಯಲ್ಲಿ ಆಜಾದ್ ಹಿಂದ್ ಸೇನೆಯನ್ನು ಕಟ್ಟಿದರು. ಭಾರತೀಯ ಯುದ್ಧ ಕೈದಿಗಳನ್ನು ಸೇನಾಪಡೆಗೆ ಸೇರಿಸಿಕೊಳ್ಳಲಾಯಿತು.

ಸುಭಾಷ್ ಚಂದ್ರ ಬೋಸರು ಜಪಾನ್ಗೆ ತೆರಳಿ ಅಲ್ಲಿನ ಪ್ರಧಾನ ಮಂತ್ರಿಗಳಾಗಿದ್ದ ಟೋಜೋ ಅವರನ್ನು ಭೇಟಿ ಮಾಡಿ ಭಾರತದ ಬಿಡುಗಡೆಗೆ ನೆರವು ಕೇಳಿದರು.

ಟೋಜೋ ಅವರು ಬೋಸರ ವಿಶಿಷ್ಟ ವ್ಯಕ್ತಿತ್ವ, ಧೈರ್ಯ, ದೇಶಪ್ರೇಮವನ್ನು ಕಂಡು ಮೆಚ್ಚಿ ಬೋಸರಿಗೆ ಎಲ್ಲಾ ರೀತಿಯ ನೆರವು ನೀಡುವುದಾಗಿ ಆಶ್ವಾಸನೆ ನೀಡಿದರು. 1943 ಅಕ್ಟೋಬರ್‌ನಲ್ಲಿ ಬೋಸರು ಸಿಂಗಪುರದಲ್ಲಿ ಆಜಾದ್ ಹಿಂದ್ ಸೇನೆಯ ನಾಯಕತ್ವವನ್ನು ವಹಿಸಿಕೊಂಡರು. ಅಲ್ಲಿಯೇ ಸ್ವಾತಂತ್ರ್ಯ ಭಾರತದ ತಾತ್ಕಾಲಿಕ ಸರ್ಕಾರವನ್ನು ಸ್ಥಾಪಿಸಿದರು. ಸುಭಾಷರು ತಮ್ಮ ಸೇನಾಪಡೆಯೊಂದಿಗೆ ಬರ್ಮಾ ಮುಖಾಂತರವಾಗಿ ಭಾರತದತ್ತ ಹೊರಟರು. ಇಂಡೋ ಜಪಾನಿ ಸೈನಿಕರ ನೆರವಿನಿಂದ ಅಂಡಮಾನ್-ನಿಕೋಬಾರ್ ದ್ವೀಪಗಳನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡರು. 1943 ರಲ್ಲಿ ಅಸಾಧಾರಣ ಶೌರ್ಯ ಪರಾಕ್ರಮಗಳ ಪ್ರದರ್ಶನದಿಂದ ಅಜಾದ್ ಹಿಂದ್ ಸೇನಾಪಡೆ ಬರ್ಮಾವನ್ನು ವಶಪಡಿಸಿಕೊಂಡಿತು.

1945 ರಲ್ಲಿ ಅಮೇರಿಕ ದೇಶ ಜಪಾನಿನ ಹಿರೋಷಿಮಾ ಮತ್ತು ನಾಗಸಾಕಿ ಪಟ್ಟಣಗಳ ಮೇಲೆ ಅಣುಬಾಂಬ್ ದಾಳಿ ನಡೆಸಿತು. ಲಕ್ಷಾಂತರ ಜನರು ಸತ್ತರು. 1945 ಆಗಸ್ಟ್ 14 ರಂದು ಜಪಾನ್ ದೇಶ ಯಾವ ನಿಬಂಧನೆಗಳಿಲ್ಲದೇ ಬ್ರಿಟನ್ ನೇತೃತ್ವದ ಒಕ್ಕೂಟಕ್ಕೆ ಶರಣಾಯಿತು. ವಿಧಿಯಿಲ್ಲದೆ ಬೋಸರು ಯುದ್ಧವನ್ನು ನಿಲ್ಲಿಸಬೇಕಾಯಿತು. ಬೋಸರು 1945 ಆಗಸ್ಟ್ 17 ರಂದು ಸಿಂಗಪುರದಿಂದ ಟೋಕಿಯೋಗೆ ಹೊರಟರು.

ಅವರು ಪ್ರಯಾಣಿಸಿದ ವಿಮಾನ ಬಾಂಬರ್ ವಿಮಾನವಾಗಿದ್ದು, ಕರ್ನಲ್ ರಹಮಾನ್ ಅವರೊಂದಿಗೆ ಹೊರಟರು. ಬೋಸರು ಪ್ರಯಾಣಿಸುತ್ತಿದ್ದ ವಿಮಾನ ಅಪಘಾತಕ್ಕೀಡಾಗಿ ಬೋಸರು ಮರಣಿಸಿದರೆಂಬ ಧಾರುಣ ವಾರ್ತೆಯನ್ನು ಟೋಕಿಯೋ ಆಕಾಶವಾಣಿ ಪ್ರಸಾರ ಮಾಡಿತು. ಇಂತಹ ದೇಶಭಕ್ತ ಸ್ವಾತಂತ್ರ್ಯ ಹೋರಾಟಗಾರ, ದೇಶದ ಸ್ವಾತಂತ್ರ್ಯಕ್ಕಾಗಿ ಸತತ ಹೋರಾಡಿದ, ರಾಷ್ಟ್ರಭಕ್ತ ಹಾಗೂ ಯುವಕರಿಗೆ ಚೈತನ್ಯ ಸ್ಫೂರ್ತಿಯಾಗಿದ್ದ ಸುಭಾಷ್ ಚಂದ್ರ ಬೋಸರು ಹುತಾತ್ಮರಾಗಿ ಅಮರರಾದರು. ಇವರ ಮರಣ ಇನ್ನೂ ನಿಗೂಢವಾಗಿದೆ. ರಾಷ್ಟ್ರದ ಕೆಲವು ನಾಗರೀಕರು ಅವರ ಸಾವಿನ ಸ್ಪಷ್ಟತೆಯನ್ನು ತಿಳಿಯಲು ಬಯಸುತ್ತಿದ್ದಾರೆ. 1992 ರಲ್ಲಿ ಭಾರತ ಸರ್ಕಾರ ಸುಭಾಷ್ಚಂದ್ರಬೋಸ್ ರವರಿಗೆ ಮರಣೋತ್ತರವಾಗಿ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಿತು. ಆದರೆ ಅವರ ಕುಟುಂಬದವರು ಪ್ರಶಸ್ತಿಯನ್ನು ನಿರಾಕರಿಸಿದರು.

ಇಂತಹ ಮಹಾನ್ ಸ್ವಾತಂತ್ರ್ಯ ಹೋರಾಟಗಾರ, ಚೈತನ್ಯ ಪುರುಷ ಹಾಗೂ ಯುವಕರಿಗೆ ಸ್ಫೂರ್ತಿದಾಯಕರಾಗಿದ್ದ ಸುಭಾಷ್ ಚಂದ್ರ ಬೋಸ್ ಅವರ 80ನೇ ವರ್ಷದ ಪುಣ್ಯ ದಿನವಾದ ಇಂದು ಸ್ಮರಿಸಿ ನೆನೆಯುವುದು ಭಾರತೀಯರಾದ ನಮ್ಮೆಲ್ಲರ ಆದ್ಯ ಕರ್ತವ್ಯ, ಹೊಣೆಗಾರಿಕೆ, ಜವಾಬ್ದಾರಿ ಎಂದು ತಿಳಿದು ಅವರ ಆದರ್ಶ, ಧೈರ್ಯ, ಸ್ಥೈರ್ಯ, ಭರವಸೆ ಹಾಗೂ ಸಾಧನೆಯನ್ನು ಪಾಲಿಸುವ ಸಂಕಲ್ಪಮಾಡೋಣ.

**ಸತ್ಯಂ ಶಿವಂ ಸುಂದರಂ**

---



• ಉದಯವಾಹಿನಿ ಬೆಂಗಳೂರು

ಶ್ರೀಕೃಷ್ಣನ ಅವತಾರದಲ್ಲಿ ಲಿಶಾನ್ ಡಿ ಜೈನ್ ರಾಧಾ-ರುಕ್ಮಿಣಿಯಾಗಿ ಅದ್ವಿಕಾ ಹಾಗೂ ಭುವಿಕಾ

## ಶ್ರೀ ಕೃಷ್ಣ ಜನ್ಮಾಷ್ಟಮಿಯ ಪ್ರಯುಕ್ತ



• ಉದಯವಾಹಿನಿ ಬೆಂಗಳೂರು

ಇಂದಿರಾ ನಗರ ನಿವಾಸಿ ರವಿ ಹಾಗೂ ನೀಲಮ್ಮ ತೆಲಂಗಿ ಅವರ 2 ವರೆ ವರ್ಷದ ಪುತ್ರ ಪ್ರೀತಮ್ ತೇಲಂಗಿ ಶ್ರೀಕೃಷ್ಣನಾಗಿ ಮಿಂಚಿದ್ದು ಹೀಗೆ



■ ಉದಯವಾಹಿನಿ ಬೆಂಗಳೂರು

■ ಅದ್ವೈತಿ ರುಚಿತ್ ಮಾಗೋಡ್ ಬೆಂಗಳೂರು

---

# ಶ್ರೀಕೃಷ್ಣ ಪರಮಾತ್ಮನ 50 ಹೆಸರು, ಅರ್ಥಗಳು..



ವಿಶ್ವಾಸ್.ಡಿ.ಗೌಡ

1. ಕೃಷ್ಣ : ಎಲ್ಲರನ್ನೂ ತನ್ನ ಕಡೆ ಆರ್ಕಷಿತ ಮಾಡಿಕೊಳ್ಳುವವನು.
2. ಗಿರಿಧರ: ಪರ್ವತವನ್ನು ಎತ್ತಿ ಹಿಡಿದವನು.
3. ಮುರಳಿಧರ : ಮುರಳಿಯನ್ನು ನುಡಿಸುವವನು.
4. ಪಿತಾಂಬರಧಾರಿ : ಹಳದಿ ವಸ್ತ್ರವನ್ನು ಧರಿಸಿದವನು.
5. ಮಧುಸೂದನ : ಮಧು ಎಂಬ ದೈತ್ಯನನ್ನು ಸಂಹಾರ ಮಾಡಿದವನು.
6. ಯಶೋದ ದೇವಕಿ ನಂದನ : ಯಶೋದ ಹಾಗೂ ದೇವಕಿಯರಿಗೆ ಸಂತೋಷವನ್ನು ನೀಡುವ ಪ್ರಿಯ ಪುತ್ರ.
7. ಗೋಪಾಲ : ಗೋವುಗಳು ಅಥವಾ ಪೃಥ್ವಿಯ ಪಾಲನೆ ಮಾಡುವವನು.
8. ಗೋವಿಂದ : ಹಸುಗಳ ರಕ್ಷಕ.
9. ಶ್ರೀನಾಥ : ಲಕ್ಷ್ಮಿಗೆ ಆನಂದ ಕೊಡುವವನು.
10. ಕುಂಜ ವಿಹಾರಿ : ಕುಂಜ ಎಂಬ ಹೂದೋಟದಲ್ಲಿ ವಿಹಾರ ಮಾಡುವವನು.
11. ಚಕ್ರಧಾರಿ: ಸುದರ್ಶನ ಚಕ್ರ, ಜ್ಞಾನ ಚಕ್ರ, ಶಕ್ತಿ ಚಕ್ರ ಧರಿಸುವವನು.
12. ಶ್ಯಾಮ : ಕಪ್ಪು ವರ್ಣದವನು.
13. ಮಾಧವ : ಮಾಯಾಪತಿ.
14. ಮುರಾರಿ : ಮುರ ಎಂಬ ದೈತ್ಯನನ್ನು ಸೋಲಿಸಿದವನು.
15. ಅಸುರಾರಿ : ಅಸುರರನ್ನು ಸೋಲಿಸಿದವನು.
16. ಬನವಾರಿ : ಹೂದೋಟಗಳಲ್ಲಿ ವಿಹರಿಸುವವನು.
17. ಮುಕುಂದ : ನಿಧಿಗಳನ್ನು ಇಟ್ಟುಕೊಂಡಿರವವನು.
18. ಯೋಗೀಶ್ವರ : ಯೋಗಿಗಳ ಈಶ್ವರ.
19. ಗೋಪೇಶ : ಗೋಪಿಗಳ ಈಶ.
20. ಹರಿ : ದು:ಖವನ್ನು ದೂರಮಾಡುವವನು
21. ಮದನ : ಸುಂದರ.
22. ಮನೋಹರ : ಮನಸ್ಸನ್ನು ಆಕರ್ಷಿಸುವವನು.
23. ಮೋಹನ : ಸಮ್ಮೋಹನ ಮಾಡುವವನು.
24. ಜಗದೀಶ : ಜಗತ್ತಿನ ಮಾಲೀಕ.
25. ಪಾಲನಹಾರ : ಸರ್ವರ ಲಾಲನೆ ಪಾಲನೆ ಮಾಡುವವನು.
26. ಕಂಸಾರಿ : ಕಂಸನನ್ನು ಸಂಹರಿಸಿದವನು.
27. ರುಕ್ಮಿಣಿ ವಲ್ಲಭ : ರುಕ್ಮಿಣಿಯ ಪತಿ.
28. ಕೇಶವ : ಕೇಶ ಎಂಬ ದೈತ್ಯನ ಸಂಹಾರ ಮಾಡಿದವನು. ನೀರಿನ ಮೇಲೆ ವಾಸ ಮಾಡುವವನು.
29. ವಾಸುದೇವ : ವಸುದೇವನ ಪುತ್ರ.
30. ರಣಛೋರ : ರುದ್ರಭೂಮಿಯಲ್ಲಿ ಇರುವವನು.
31. ಗುಢಾಕೇಶ : ನಿದ್ರೆಯ ಮೇಲೆ ವಿಜಯಿಯಾದವನು.
32. ಋಷಿಕೇಶ : ಇಂದ್ರಿಯಗಳನ್ನು ಜಯಿಸಿದವನು.
33. ಸಾರಥಿ : ಅರ್ಜುನನ ರಥದ ಸಾರಥಿ.
34. ಪೂರ್ಣಪ್ರರಬ್ರಹ್ಮ : ದೇವತೆಗಳಿಗೂ ಮಾಲೀಕ.
35. ದೇವೇಶ : ದೇವಗಳ ಈಶ.
36. ನಾಗ ನಥಿಯ : ಕಲಿನಾಗವನ್ನು ಕೊಂದವನು.
37. ವೃಷ್ಣಿಪತಿ : ಆ ಕುಲದಲ್ಲಿ ಹುಟ್ಟಿದವನು.
38. ಯದುಪತಿ : ಯಾದವರ ಮಾಲೀಕ.
39. ಯದುವಂಶಿ : ಯದು ವಂಶದ ಅವತಾರ.
40. ದ್ವಾರಕಾಧೀಶ : ದ್ವಾರಕೆಯ ಮಾಲೀಕ.
41. ನಾಗರ : ಸುಂದರ.
42. ಛಲೀಯ : ಛಲ (ಹಠ) ಮಾಡುವವನು.
43. ಮಥುರಾ ಗೋಕುಲವಾಸಿ : ಈ ಸ್ಥಳಗಳ ನಿವಾಸಿ.
44. ವಲ್ಲಭ : ಸದಾ ಆನಂದದಲ್ಲಿ ಇರುವವನು.
45. ದಾಮೋದರ : ಹೊಟ್ಟೆಗೆ ಹಗ್ಗ ಕಟ್ಟಿಸಿಕೊಂಡವವನು.
46. ಅಘಹಾರಿ : ಪಾಪಗಳನ್ನು ಹರಿಸುವವನು.
47. ಸಖ : ಅರ್ಜುನ ಮತ್ತು ಸುದಾಮನ ಮಿತ್ರ.
48. ರಾಸರಚಯ್ಯ : ರಾಸ(ಒಂದು ಪ್ರಕಾರದ ನೃತ್ಯ) ರಚಿಸಿದವನು.
49. ಅಚ್ಯುತ : ಅವನ ಧಾಮದಿಂದ ಮರಳಿ ಹೋಗಲು ಸಾಧ್ಯವಿಲ್ಲ.
50. ನಂದಲಾಲ : ನಂದನ ಪುತ್ರ.



---

# ಬಸವ ಸಂಸ್ಕೃತಿಯಾನ: ಮಾನವೀತೆಯ ದಾರಿದೀಪ

ಬಿಂದು ಆರ್. ಡಿ. ರಾಂಪುರ



ಭಾರತದ ಸಾಮಾಜಿಕ ಮತ್ತು ಧಾರ್ಮಿಕ ಚರಿತ್ರೆಯಲ್ಲಿ ಅಮಿತ ಪ್ರಭಾವ ಬೀರಿದ ಮಹಾನ್ ಚಿಂತಕರು ಬಹುರೂಪ. ಅವರಲ್ಲಿ ಬಸವೇಶ್ವರ, ಅಥವಾ ಬಸವಣ್ಣ, 12ನೇ ಶತಮಾನದಲ್ಲಿ ಕಾಣಿಸಿಕೊಂಡ ಧರ್ಮಸಂಸ್ಕೃತಿಯ ಹೊಸ ಅಧ್ಯಾಯದ ಪ್ರಾರಂಭಕರ್ತ. ಅವರು ಸ್ಥಾಪಿಸಿದ ಶರಣ ಸಂಸ್ಕೃತಿ ಹಾಗೂ ವಚನ ಸಾಹಿತ್ಯ, ಕೇವಲ ಧಾರ್ಮಿಕ ಅಭಿವ್ಯಕ್ತಿಗೆ ಮಾತ್ರ ಸೀಮಿತವಾಗದೆ, ಸಾಮಾಜಿಕ ನ್ಯಾಯ, ಸಮಾನತೆ, ಶ್ರಮದ ಮೌಲ್ಯ ಲಿಂಗಸಮಾನತೆಗಳ ಅಭಿಯಾನವಾಗಿ



ತ್ತು. ಈ ಎಲ್ಲವನ್ನು ಸಮಗ್ರವಾಗಿ ಗುರುತಿಸಲು 'ಬಸವ ಸಂಸ್ಕೃತಿಯಾನ' ಎನ್ನಬಹುದಾಗಿದೆ. ಬಸವಣ್ಣ 12ನೇ ಶತಮಾನದಲ್ಲಿ ಇಂದಿನ ಕರ್ನಾಟಕದ ಬಾಗಲಕೋಟೆ ಜಿಲ್ಲೆಯಲ್ಲಿ ಬಸವನ ಬಾಗೇವಾಡಿಯ ಇಂಗಳೇಶ್ವರದಲ್ಲಿ ಜನಿಸಿದರು. ಅವರು ಬ್ರಾಹ್ಮಣ ಧರ್ಮದಲ್ಲಿ ಹುಟ್ಟಿದರೂ, ಸಾಂಪ್ರದಾಯಿಕ ಪೂಜಾಪದ್ಧತಿಯ ವಿರುದ್ಧವಾಗಿ, ನವ ಚಿಂತನೆಯೊಂದಿಗೆ ಲಿಂಗೈಕ್ಯದ ಆಧಾರದ ಮೇಲೆ ಹೊಸ ಸಮುದಾಯವೊಂದನ್ನು ನಿರ್ಮಿಸಿದರು. ಇವರು ಬಸವಕಲ್ಯಾಣದ (ಇಂದಿನ ಬಿದರ್ ಜಿಲ್ಲೆಯ) ಬಿಜ್ಜಳನ ಆಸ್ಥಾನದಲ್ಲಿ ಪ್ರಧಾನಮಂತ್ರಿಯಾಗಿ ಸೇವೆ ಸಲ್ಲಿಸಿದರು. ಆದರೆ ಧರ್ಮ ಮತ್ತು ನೈತಿಕತೆಯನ್ನು ಆದರ್ಶವಾಗಿ ಬಾಳಿದ ಅವರು, ಸಮಾಜದ ಎಲ್ಲಾ ವರ್ಗದ ಜನರ ಸಮಾನತೆಯ ಅಭಿಯಾನಕ್ಕೆ ಭದ್ರ ಬುನಾದಿ ಹಾಕಿದರು.

**ಶರಣ ಸಂಸ್ಕೃತಿಯ ಮೂಳೆ:** ಬಸವಣ್ಣನು ರೂಪಿಸಿದ ಶರಣ ಸಂಸ್ಕೃತಿ ಯಾವುದೇ ಜಾತಿ, ವರ್ಣ, ಲಿಂಗ ಭೇದವಿಲ್ಲದೇ ಎಲ್ಲರನ್ನು ಒಳಗೊಂಡ ಚಲನೆಯಾಗಿದೆ. ಈ ಚಳವಳಿಯಲ್ಲಿ ಶರಣ ಎಂದರೆ ದೇವರ ನಿಜಸೇವಕ, ತನ್ನ ಜೀವನವನ್ನೆ ದೇವರಿಗೆ ಸಮರ್ಪಿಸಿಕೊಂಡವನು. .

**ಶರಣರ ಜೀವನದ ಮುಖ್ಯ ತತ್ವಗಳು :** ಕಾಯಕ ವೃತ್ತಿ ಶ್ರಮದ ಮಹತ್ವ. ಜೀವನಕ್ಕಾಗಿ ಕೈ ಕೆಲಸ ಮಾಡುವುದು ಪವಿತ್ರ ಎಂದು ಪರಿಗಣಿಸಿದರು. ಲಿಂಗ ಧಾರಣೆ ಇಡೀ ವ್ಯಕ್ತಿಯ ಜೀವನವನ್ನೇ ಶಿವನ ಆರಾಧನೆಗೆ ಸಮರ್ಪಿಸುವ ಸಂಕೇತ. ಸಮಾನತೆಯ ತತ್ವ ಜಾತಿ, ಲಿಂಗ, ಆಸ್ತಿ ಎನ್ನುವ ಎಲ್ಲಾ ಭೇದಗಳ ವಿರೋಧ. ಮಾನವತೆಯ ಮೌಲ್ಯಗಳು ಸೇವೆ, ಪ್ರೀತಿ, ಸಹಾನುಭೂತಿ, ಸಹವಾಸ.

**ವಚನ ಸಾಹಿತ್ಯ ಬಸವ ಸಂಸ್ಕೃತಿಯಾನ:** ಬಸವಣ್ಣ ಮತ್ತು ಶರಣರು ತಮ್ಮ ಧರ್ಮ, ತತ್ವಗಳನ್ನು ಜನಮಾನಸ ತಲುಪಿಸಲು ಬಳಸಿದ ಮುಖ್ಯ ಮಾಧ್ಯಮವೇ ವಚನ ಸಾಹಿತ್ಯ. ವಚನಗಳು ಸರಳ ಕನ್ನಡದಲ್ಲಿರುವ ಚುಟುಕು ಗದ್ಯಪದ್ಯಗಳಾಗಿ, ತಾತ್ವಿಕತೆ, ಭಕ್ತಿ, ನೈತಿಕತೆ, ಸಾಮಾಜಿಕ ಚಿಂತನೆಗಳನ್ನು ಸಮರ್ಪಕವಾಗಿ ವ್ಯಕ್ತಪಡಿಸುತ್ತವೆ. ಇದರಿಂದಾಗಿ ಬಸವಣ್ಣನು ಧರ್ಮವನ್ನು ಆಚರಣೆಗಳಲ್ಲಿ ಮಾತ್ರ ಸೀಮಿತಗೊಳಿಸದೆ, ಜೀವನದ ಪ್ರತಿಯೊಂದು ಕ್ಷಣದಲ್ಲಿ ಧರ್ಮಸ್ಫೂರ್ತಿ ಕಂಡುಹಿಡಿಯಬೇಕೆಂದು ಬೋಧಿಸಿದರು.

**ಬಸವ ಸಂಸ್ಕೃತಿಯಲ್ಲಿ ಮಹಿಳೆಯರ ಪಾತ್ರ:** ಬಸವ ಸಂಸ್ಕೃತಿಯ ಮತ್ತೊಂದು ವಿಶಿಷ್ಟ ಲಕ್ಷಣವೆಂದರೆ ಮಹಿಳಾ ಸಮಾನತೆಯ ಪ್ರಬಲ ಒತ್ತಾಯ. 12ನೇ ಶತಮಾನದಲ್ಲಿ ಮಹಿಳೆಯರು ಸಾಹಿತ್ಯ ಮತ್ತು ಧಾರ್ಮಿಕ ಚಟುವಟಿಕೆಯಲ್ಲಿ ಭಾಗವಹಿಸುವುದು ಅಪರೂಪವಾಗಿದ್ದ ಕಾಲದಲ್ಲಿ, ಅಕ್ಕ ಮಹಾದೇವಿ, ನೀಲಂಬಿಕೆ, ಸಂಗನಕುಂಟಲಾ ಮುಂತಾದ ಶರಣೆಯರು ತಾವು ಸ್ತ್ರೀಯರಾಗಿ ಹೆಮ್ಮೆಪಟ್ಟು, ತತ್ತ್ವಚಿಂತನೆ ನಡೆಸಿದರು. ಅಕ್ಕ ಮಹಾದೇವಿಯ ವಚನಗಳು ಮಹಿಳಾ ಸ್ವಾತಂತ್ರ್ಯ ಮತ್ತು ಆಧ್ಯಾತ್ಮಿಕ ಸಾಗಣೆಯ ಪರಮ ಉದಾಹರಣೆಗಳು. ಅವರು ತಮ್ಮ ಶರೀರವನ್ನು ಮಾತ್ರವಲ್ಲದೆ, ಮನಸ್ಸನ್ನೂ ದೇವರಿಗೆ ಅರ್ಪಿಸಿದ್ದೆನ್ನುವ ಅವರು, ನನ್ನ ಸಂಗಾತನೂ ಶಿವನೇ ಎಂಬ ಘೋಷವಾಕ್ಯದೊಂದಿಗೆ ಪತಿರಹಿತ ಮಹಿಳೆಯ ಧರ್ಮವನ್ನು ಸಾರಿದವರು.

ಬಸವ ಸಂಸ್ಕೃತಿಯ ಸಾಮಾಜಿಕ ಪ್ರಭಾವ

**ಜಾತಿಹೀನ ಸಮಾಜದ ನಿರ್ಮಾಣ:** ಈ ಚಳವಳಿಯು ಶೂದ್ರರಿಂದ ಬ್ರಾಹ್ಮಣರ ತನಕ ಎಲ್ಲರನ್ನು ಸಮಾನವಾಗಿ ಕಂಡು, ಮಾದರಿಯಾಗಿತ್ತು.

**ಅಂತರ್ದರ್ಶನವನ್ನು ಉತ್ತೇಜನೆ:** ವ್ಯಕ್ತಿಯ ವ್ಯಕ್ತಿತ್ವ, ನಡತೆ, ಶ್ರಮ, ಹಾಗೂ ನಿಷ್ಠೆಯ ಆಧಾರದಲ್ಲಿ ಅವನ ಮೌಲ್ಯವನ್ನು ನಿರ್ಧರಿಸಬೇಕೆಂಬ ಭಾವನೆ.

**ಶ್ರಮವಂತರಿಗೆ ಗೌರವ:** ಕಾಯಕವನ್ನು ಕೈಲಾಸ ಎಂದು ಗುರುತಿಸಿ, ಶ್ರಮದ ಮಹಿಮೆ ಸಾರಿದವರು.

**ಆಧ್ಯಾತ್ಮ ಮಾನವತೆಯ ಸೇತುಬಂಧ:** ಈ ಚಳವಳಿಯು ಭಕ್ತಿಯ ಜೊತೆಗೆ ಬೌದ್ಧಿಕ ಚಿಂತನೆ, ನೀತಿಶಾಸ್ತ್ರ, ಮತ್ತು ಸಾಮಾಜಿಕ ಆಳವಿರುವ ಪ್ರಕ್ರಿಯೆಯನ್ನೂ ರೂಪಿಸಿತು.

**ಇಂದು ಬಸವ ಸಂಸ್ಕೃತಿಯ ಸಾರ್ಥಕತೆ:** ಇಂದು 21ನೇ ಶತಮಾನದಲ್ಲೂ ಬಸವ ಸಂಸ್ಕೃತಿ ಮಾತ್ರವಲ್ಲದೇ ಅವರ ತತ್ವಗಳು ಕೂಡ ಅತ್ಯಂತ ಪ್ರಸ್ತುತ. ಜಾತೀಯತೆಯ ವಿರುದ್ಧದ ಧ್ವನಿ, ಮಹಿಳಾ ಸಮಾನತೆಗಾಗಿ ನಡೆದ ಹೋರಾಟ,



ಶ್ರಮದ ಗೌರವ, ಭ್ರಷ್ಟಾಚಾರದ ವಿರೋಧall these resonate today.

ಬೆಂಗಳೂರು ನಗರದಲ್ಲಿ ಬಸವಣ್ಣನ ಪ್ರತಿಮೆ, ವಿಶ್ವದ ಅತಿದೊಡ್ಡ ಮೂರ್ತಿಗಳಲ್ಲೊಂದು, ಮಾತ್ರವಲ್ಲದೆ ವಿಶ್ವದ ಅನೇಕ ಕಡೆಗಳಲ್ಲಿ ಬಸವ ತತ್ವದ ಅಧ್ಯಯನ ನಡೆಯುತ್ತಿರುವುದು ಈ ಇಲ್ಲ ಸಂಸ್ಕೃತಿ ಪ್ರಭಾವವನ್ನು ಸೂಚಿಸುತ್ತದೆ.

ರಾಜ್ಯಾದ್ಯಂತ ಸೆಪ್ಟೆಂಬರ್ 1 ರಿಂದ 30 ರವರೆಗೆ ಲಿಂಗಾಯತ ಮಠಾಧೀಶರು ಒಕ್ಕೂಟ, ಹಲವು ಬಸವ ಪರ ಸಂಘಟನೆಗಳು ಮೂಲಕ ನಡೆಯುತ್ತಿರುವ ಈ ಬಸವ ಸಂಸ್ಕೃತಿಯಾನದ ಮೂಲ ಗುರಿ ವ್ಯಕ್ತಿಗತ ಶುದ್ಧತೆ, ಸಮಾಜದ ಸಮಾನತೆ, ಶ್ರಮದ ಪಾವಿತ್ರ್ಯ ಮತ್ತು ಕಾಯಕದ ಮಹತ್ವ, ಬಸವಾದಿ ಶಿವಶರಣರ ತತ್ವಗಳು ಇವತ್ತಿಗೂ ಪ್ರಸ್ತುತವಾಗಿವೆ. ಈ ತತ್ವಗಳು ಯಾವುದೇ ಧರ್ಮ, ಭಾಷೆ ಅಥವಾ ಜಾತಿಗೆ ಸೀಮಿತವಲ್ಲ. ಇವು ಸಾಮಾನ್ಯ ಮಾನವೀಯ ಮೌಲ್ಯಗಳು. ಇಂತಹ ಮಹಾನ್ ಸಂಸ್ಕೃತಿಯ ಅಧ್ಯಯನ ಮತ್ತು ಅನುಸರಣ ನಮ್ಮ ಸಮಾಜಕ್ಕೆ ನಿಜವಾದ ಬೆಳಕನ್ನು ನೀಡಬಲ್ಲದು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಸಾಯಂಕಾಲ | 04:30 ರಿಂದ 06:00 |
| ಗುಳಿಕ ಕಾಲ | ಮಧ್ಯಾಹ್ನ | 03:00 ರಿಂದ 04:30 |
| ಯಮಗಂಡ ಕಾಲ | ಮಧ್ಯಾಹ್ನ | 12:00 ರಿಂದ 01:30 |

**ಮೇಷ** ನೀವು ವಿರಾಮದ ಸಂತೋಷವನ್ನು ಅನುಭವಿಸಲಿದ್ದೀರಿ. ಹಣದ ಚಲನೆ ದಿನವಿಡೀ ಮುಂದುವರಿಯುತ್ತದೆ ಮತ್ತು ದಿನದ ಅಂತ್ಯದ ನಂತರ ನೀವು ಉಳಿಸಲು ಸಾಧ್ಯವಾಗುತ್ತದೆ.

**ವೃಷಭ** ನಿಮ್ಮ ಸಂಗಾತಿಯೊಡನೆ ಒಂದು ಉತ್ತಮ ತಿಳುವಳಿಕೆ ಮನೆಯಲ್ಲಿ ಸಂತೋಷ–ಶಾಂತಿ ಮತ್ತು ಸಮೃದ್ಧಿಯನ್ನು ತರುತ್ತದೆ. ನಿಮ್ಮ ಧೈರ್ಯ ಪ್ರೀತಿಯನ್ನು ಗೆಲ್ಲಬಹುದು.

**ಮಿಥುನ** ಜೀವನ ಸಂಗಾತಿ ಹಿಂದೆಂದೂ ಇಂದಿಗಿಂತ ಹೆಚ್ಚು ಅದ್ಭುತವಾಗಿರಲಿಲ್ಲ. ನೀವು ಟಿವಿ ನೋಡುವುದರಲ್ಲಿ ನಿಮ್ಮ ದಿನವನ್ನು ಕಳೆಯಬಹುದು ಎಂದು ನಕ್ಷತ್ರಗಳು ಸೂಚಿಸುತ್ತಿದ್ದವೆ.

**ಕರ್ಕಾಟಕ** ನೀವು ಚೈತನ್ಯದಿಂದ ತುಂಬಿರುತ್ತೀರಿ ಮತ್ತು ಅಸಾಮಾನ್ಯವಾದದ್ದೇನಾದರೂ ಸಾಧಿಸುತ್ತೀರಿ. ಅನಿರೀಕ್ಷಿತ ಬಿಲ್‌ಗಳು ಹಣಕಾಸಿನ ಹೊರೆಯನ್ನು ಹೆಚ್ಚಿಸುತ್ತದೆ. ಕುಟುಂಬದ ಸದಸ್ಯರ ಅಗತ್ಯಗಳಿಗೆ ಆದ್ಯತೆ ನೀಡಿ.

**ಸಿಂಹ** ಮಾನಸಿಕ ಶಾಂತಿಗಾಗಿ ನಿಮ್ಮ ಒತ್ತಡವನ್ನು ಪರಿಹರಿಸಿ. ಹಣ ನಿಮ್ಮ ಕೈಗಳ ಮೂಲಕ ಸುಲಭವಾಗಿ ಜಾರಿಹೋದರೂ – ನಿಮ್ಮ ಅದೃಷ್ಟದ ತಾರೆಗಳು ನಿಮಗೆ ಹಣಕಾಸು ಸುಲಭವಾಗಿ ದೊರಕುವಂತೆ ಮಾಡುತ್ತದೆ.

**ಕನ್ಯಾ** ನಿಮ್ಮ ಸಂಪೂರ್ಣ ಹಾಗೂ ಪ್ರಶ್ನಾತೀತ ಪ್ರೀತಿ ಒಂದು ಜಾದುವಿನಂಥ ಸೃಜನಶೀಲ ಶಕ್ತಿಯನ್ನು ಹೊಂದಿದೆ. ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಗಳಿಗೆ ಅತ್ಯುತ್ತಮ ದಿನ.

**ತುಲಾ** ನಿಮ್ಮ ಸಂಪೂರ್ಣ ಹಾಗೂ ಪ್ರಶ್ನಾತೀತ ಪ್ರೀತಿ ಒಂದು ಜಾದುವಿನಂಥ ಸೃಜನಶೀಲ ಶಕ್ತಿಯನ್ನು ಹೊಂದಿದೆ. ಧಾರ್ಮಿಕ ಕಾರ್ಯಗಳಿಗೆ ಅತ್ಯುತ್ತಮ ದಿನ. ನಿಮ್ಮ ಸಂಗಾತಿಯಿಂದ ನೀವು ವಿಶೇಷ ಗಮನ ಪಡೆಯುತ್ತೀರಿ.

**ವೃಶ್ಚಿಕ** ನಿಮ್ಮಲ್ಲಿ ಇಂದು ಚುರುಕುತನವನ್ನು ನೋಡಬಹುದು. ನಿಮ್ಮ ಆರೋಗ್ಯವು ನಿಮ್ಮನ್ನು ಸಂಪೂರ್ಣವಾಗಿ ಬೆಂಬಲಿಸುತ್ತದೆ. ಹೂಡಿಕೆ ಶಿಫಾರಸು ಮಾಡಲಾಗಿದ್ದರೂ ಸರಿಯಾದ ಸಲಹೆ ಪಡೆಯಬೇಕು.

**ಧನಸ್ಸು** ಸಮಯ ಮತ್ತು ಹಣದ ಕಾತರ ನೀವು ಮಾಡಬೇಕು ಇಲ್ಲದಿದ್ದರೆ ಮುಂಬರುವ ಸಮಯ ತೊಂದರೆಗಳಿಂದ ತುಂಬಿರಬಹುದು ನಿಮ್ಮ ಹೆತ್ತವರ ಆರೋಗ್ಯ ಚಿಂತೆ ಮತ್ತು ಆತಂಕಕ್ಕೆ ಕಾರಣವಾಗುತ್ತದೆ.

**ಮಕರ** ಸಂತೋಷದ ದಿನಕ್ಕಾಗಿ ಮಾನಸಿಕ ಒತ್ತಡವನ್ನು ತಪ್ಪಿಸಿ. ಯಾವುದೇ ಅನುಭವದ ವ್ಯಕ್ತಿಯ ಸಲಹೆ ಇಲ್ಲದೆ, ನಿಮಗೆ ಆರ್ಥಿಕ ನಷ್ಟವಾಗುವ ಯಾವುದೇ ಕೆಲಸವನ್ನು ಮಾಡಬೇಡಿ.

**ಕುಂಭ** ವಿಶ್ರಾಂತಿ ಪ್ರಮುಖವಾದ ಒಂದು ದಿನ ಇತ್ತೀಚೆಗೆ ನೀವು ಬಹಳಷ್ಟು ಮಾನಸಿಕ ಒತ್ತಡ ಎದುರಿಸುತ್ತಿದ್ದೀರಿ. ಮನೋಲ್ಲಾಸ ಮತ್ತು ಮನೋರಂಜನೆ ನಿಮಗೆ ವಿಶ್ರಾಂತಿ ಪಡೆಯಲು ಸಹಾಯ ಮಾಡುತ್ತದೆ.

**ಮೀನ** ದೇಹದ ನೋವಿನಿಂದ ಬಳಲುವ ಸಾಧ್ಯತೆ ಹೆಚ್ಚಿದೆ. ನಿಮ್ಮ ದೇಹದ ಮೇಲೆ ಹೆಚ್ಚು ಒತ್ತಡ ಹಾಕುವ ಯಾವುದೇ ದೈಹಿಕ ಪರಿಶ್ರಮವನ್ನು ತಪ್ಪಿಸಲು ಪ್ರಯತ್ನಿಸಿ. ಸಾಕಷ್ಟು ವಿಶ್ರಾಂತಿ ತೆಗೆದುಕೊಳ್ಳಿ.

---

• ಮುಖ್ಯಮಂತ್ರಿ, ಸಚಿವರು ರಸ್ತೆ ಮೇಲೆ ಓಡಾಡಲು ಬಿಡುವುದಿಲ್ಲ: ಕಾರಜೋಳ

# ಒಳಮೀಸಲಾತಿ ಜಾರಿಗೊಳಿಸದಿದ್ದರೆ ರಾಜ್ಯದಲ್ಲಿ ರಕ್ತಪಾತ

• ಉದಯವಾಹಿನಿ ವಿಜಯಪುರ

ಒಳ ಮೀಸಲಾತಿ ಜಾರಿಗೊಳಿಸದೇ ಇದ್ದರೇ ಕಾಂಗ್ರೆಸ್ ಸರ್ಕಾರಕ್ಕೆ ಆಡಳಿತ ನಡೆಸಲು ಬಿಡುವುದಿಲ್ಲ, ಮುಖ್ಯಮಂತ್ರಿ, ಸಚಿವರು ರಸ್ತೆ ಮೇಲೆ ಓಡಾಡಲು ಬಿಡುವುದಿಲ್ಲ, ರಾಜ್ಯದಲ್ಲಿ ರಕ್ತಪಾತವಾಗಲಿದೆ' ಎಂದು ಸಂಸದ ಗೋವಿಂದ ಕಾರಜೋಳ ಎಚ್ಚರಿಕೆ ನೀಡಿದರು. ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಆಗಸ್ಟ್ 19ರ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಒಳಮೀಸಲಾತಿ ಜಾರಿಗೆ ಅಂತಿಮ ತೀರ್ಮಾನ ಸರ್ಕಾರ ಕೈಗೊಳ್ಳಲೇಬೇಕು. ಇಲ್ಲವಾದರೆ ರಾಜ್ಯದ 29 ಸಾವಿರ ಹಳ್ಳಿಗಳಲ್ಲಿರುವ ಅಸ್ಪೃಶ್ಯ ಸಮಾಜದವರು ಬೀದಿಗಳಿದು ಮಾಡು ಇಲ್ಲವೇ ಮಡಿ ಹೋರಾಟ ನಡೆಸಲಿದ್ದಾರೆ ಎಂದು ತಿಳಿಸಿದರು.

**ಮಾಡು ಇಲ್ಲವೇ ಮಡಿ ಹೋರಾಟ**

ಒಳ ಮೀಸಲಾತಿಗೆ ಸಂಬಂಧಿಸಿದಂತೆ ಕಾಂಗ್ರೆಸ್ ಸರ್ಕಾರವೇ ಈ ಹಿಂದೆ ರಚಿಸಿದ ಹಾವನೂರು ಆಯೋಗ, ಎ.ಜೆ. ಸದಾಶಿವ ಆಯೋಗ, ಕಾಂತರಾಜ ಆಯೋಗ ಮತ್ತು ನಾಗಮೋಹನ್ ದಾಸ್ ಆಯೋಗಗಳು ಸಲ್ಲಿಸಿರುವ ವರದಿಗಳಿವೆ. ಜೊತೆಗೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ರಚನೆಯಾದ ಮಾಧುಸ್ವಾಮಿ ವರದಿ ಇದೆ. ಈ ಐದು ವರದಿಯಲ್ಲಿ ಯಾವುದಾದರು ಒಂದು ವರದಿಯನ್ನು ಸರ್ಕಾರ ಒಪ್ಪಿಕೊಳ್ಳಲೇಬೇಕು. ಅಗತ್ಯವಿದ್ದರೆ ವರದಿಯಲ್ಲಿ ತಿದ್ದುಪಡಿ ಮಾಡಿಯಾದರೂ ಜಾರಿಗೊಳಿಸಲೇಬೇಕು' ಎಂದು ಆಗ್ರಹಿಸಿದರು.

ಒಳ ಮೀಸಲಾತಿ ವಿಷಯವಾಗಿ ಅಸ್ಪೃಶ್ಯ ಸಮಾಜದವರಿಗೆ ಇತರೆ ಯಾರೊಂದಿಗೂ ತಕರಾರು ಇಲ್ಲ. ಯಾರಿಗೂ ಅನ್ಯಾಯ ಮಾಡಿ ಎಂದು ಹೇಳುವುದಿಲ್ಲ, ಯಾರನ್ನೂ ಕೈಬಿಡಿ ಎಂದು ಹೇಳುವುದಿಲ್ಲ, ಯಾರನ್ನೂ ಹೊರಹಾಕಿ ಎಂದು ಹೇಳುವುದಿಲ್ಲ, ಸರ್ಕಾರ ತಂದೆ ಸ್ಥಾನದಲ್ಲಿ ನಿಂತು ಅವರವರ ಪಾಲು ಅವರಿಗೆ ಸಿಗುವಂತೆ ಮಾಡಬೇಕು, ಒಳ ಮೀಸಲಾತಿಯಿಂದ ಯಾರೂ ವಂಚಿತವಾದಂತೆ ನೋಡಿಕೊಳ್ಳಬೇಕು' ಎಂದು ಒತ್ತಾಯಿಸಿದರು.

ಒಳಮೀಸಲಾತಿ ನೀಡಬೇಕು ಎಂಬುದರ ಹಿಂದೆ ಯಾವುದೇ ರಾಜಕೀಯ ಅಜೆಂಡಾ ಅಲ್ಲ, ಇದು ಅಸ್ಪೃಶ್ಯ ಸಮಾಜದ ಸಮಸ್ಯೆಯಾಗಿದೆ. ಸಾಮಾಜಿಕ ನ್ಯಾಯಕ್ಕಾಗಿ ಪಕ್ಷಾತೀತವಾಗಿ ರಾಜ್ಯಾದ್ಯಂತ ಹೋರಾಟ ಆಯೋಜಿಸಲಾಗುವುದು' ಎಂದರು. ದಲಿತರು ಸದಾ ಕಾಲ ಕಚ್ಚಾಡಿಕೊಂಡು ಇರಬೇಕು, ದಲಿತರು ವೋಟ್ ಬ್ಯಾಂಕ್ ಆಗಿರಬೇಕು ಎಂಬುದಷ್ಟೇ ಕಾಂಗ್ರೆಸ್ ಮನಸ್ಥಿತಿ. ಈ ಕಾರಣಕ್ಕಾಗಿ ಒಳ ಮೀಸಲಾತಿ ಜಾರಿಗೆ ರಾಜ್ಯ ಸರ್ಕಾರ ಹಿಂದೇಟು ಹಾಕುತ್ತಿದೆ' ಎಂದು ಆರೋಪಿಸಿದರು.

'ಒಳ ಮೀಸಲಾತಿ ಜಾರಿಗೆ ಯಾವುದೇ ಬಲವಾದ ತಾಂತ್ರಿಕ ಅಡಚಣೆ ಇಲ್ಲ, ಇಷ್ಟಾದರೂ ಜಾರಿಗೆ ಮೀನಾಮೇಷ ಎಣಿಸಲು ಕಾರಣವೇನು? ಹಾಗಾದರೆ ಕಾಂಗ್ರೆಸ್‌ಗೆ ಸಂವಿಧಾನದ ಮೇಲೆ ನಂಬಿಕೆ ಇಲ್ಲ ಎಂದಾದರೂ ಹೇಳಲಿ' ಎಂದು ಸವಾಲು ಹಾಕಿದರು.

ನಾಗಮೋಹನದಾಸ್ ಅವರು ಬಹಳ ವೈಜ್ಞಾನಿಕವಾಗಿ ಹಾಗೂ ಸಮಾಜಗಳ ಬಗ್ಗೆ ಕಳಕಳಿ ಇಟ್ಟುಕೊಂಡು ಒಳಮೀಸಲಾತಿ ವರದಿ ಮಾಡಿದ್ದಾರೆ. ಈ ವರದಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಒಂದು ಕಡೆ ಸಂವಿಧಾನ, ಇನ್ನೊಂದು ಕಡೆ ಸುಪ್ರೀಂಕೋರ್ಟ್ ಆದೇಶವನ್ನು ಮುಂದಿಟ್ಟುಕೊಂಡು ಒಳ ಮೀಸಲಾತಿ ಜಾರಿಗೆ ಅಂತಿಮ ತೀರ್ಮಾನಕೈಗೊಳ್ಳಬೇಕು' ಎಂದು ಸಲಹೆ ನೀಡಿದರು.



> **ಮುಖ್ಯಮಂತ್ರಿ ಸಿದ್ದರಾಮಯ್ಯ ಯಾವ ಉದ್ದೇಶಕ್ಕಾಗಿ ಒಳ ಮೀಸಲಾತಿ ಜಾರಿಗೆ ವಿಳಂಬ ಮಾಡುತ್ತಿದ್ದಾರೆ ಎಂಬುದು ತಿಳಿಯುತ್ತಿಲ್ಲ. ಇಲ್ಲವಾದರೆ ನಮಗೆ ಜಾರಿ ಮಾಡಲು ಆಗುವುದಿಲ್ಲ ಎಂದಾದರೂ ಸಿದ್ದರಾಮಯ್ಯ ಸ್ಪಷ್ಟವಾಗಿ ಹೇಳಲಿ. ಕೇವಲ ಅಕ್ಕಿ ಕೊಟ್ಟು ನುಡಿದಂತೆ ನಡೆದ ಸರ್ಕಾರ ಎಂದು ಹೇಳಿದರೆ ಆಗುವುದಿಲ್ಲ. ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ ಭರವಸೆಯನ್ನು ಅನುಷ್ಠಾನಕ್ಕೆ ತರುವುದೇ ಸರ್ಕಾರದ ಆದ್ಯ ಕರ್ತವ್ಯ.**
> **-ಗೋವಿಂದ ಕಾರಜೋಳ, ಸಂಸದ**

---

## ಜೂಜಾಟ: ನಾಲ್ವರ ಬಂಧನ

• ಉದಯವಾಹಿನಿ ಕಲಬುರಗಿ

ವಿದ್ಯಾನಗರದ ಮಲ್ಲಿಕಾರ್ಜುನ ದೇವಸ್ಥಾನದ ಹಿಂದುಗಡೆ ಇರುವ ಸಾರ್ವಜನಿಕ ಜಾಗದಲ್ಲಿ ಜೂಜಾಟವಾಡಲಾಗುತ್ತಿದೆ ಎಂಬ ಮಾಹಿತಿ ಮೇಲೆ ಎಂ.ಬಿ.ನಗರ ಪೊಲೀಸ್ ಠಾಣೆ ಎಎಸ್‌ಐ ಸೈಯದ್ ಅಯ್ಯುಬ್, ಸಿಬ್ಬಂದಿಗಳಾದ ರಾಜು, ದಸ್ತಯ್ಯಾ, ಮಹೇಶ್, ನಾಗರಾಜ ಅವರು ದಾಳಿ ನಡೆಸಿ ನಾಲ್ವರನ್ನು ಬಂಧಿಸಿದ್ದಾರೆ. ಸುಭಾಷ ಜಂಬಗಿ, ಮಲ್ಲನಗೌಡ ಪಾಟೀಲ, ವೀರಭದ್ರಪ್ಪ ಸೂರವಾರ ಮತ್ತು ಶಿವಶರಣ ಚಪ್ಪೇದ್ ಎಂಬುವವರನ್ನು ಬಂಧಿಸಿ 5240 ರೂ.ನಗದು ಮತ್ತು 52 ಇಸ್ಪೀಟ್ ಎಲೆಗಳನ್ನು ಜಪ್ತಿ ಮಾಡಿದ್ದಾರೆ. ಎಂ.ಬಿ.ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ನ್ಯಾನೊ ಯೂರಿಯಾ ಬಳಕೆಯಿಂದ ಹೆಚ್ಚು ಇಳುವರಿ:ಅರುಣ್ ಕುಮಾರ್

• ಉದಯವಾಹಿನಿ ತ್ಯಾವಣಗಿ

ನ್ಯಾನೊ ಯೂರಿಯಾ ಬಳಸುವುದರಿಂದ ರೈತರಿಗೆ ಹಣ ಮತ್ತು ಶ್ರಮ ಉಳಿತಾಯವಾಗಲಿದೆ ಎಂದು ಸಹಾಯಕ ಕೃಷಿ ನಿರ್ದೇಶಕ ಅರುಣ್ ಕುಮಾರ್ ಎಸ್.ಎಚ್. ಹೇಳಿದರು.

ಸಮೀಪದ ಅರೇಹಳ್ಳಿ ಗ್ರಾಮದಲ್ಲಿ ಕೃಷಿ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ಭತ್ತದ ನಾಟಿ ಪ್ರಾತ್ಯಕ್ಷಿಕೆ ವೇಳೆ ಮಾತನಾಡಿದರು. ಹರಳು ರೂಪದ ಯೂರಿಯಾ ಅತಿಯಾದ ಬಳಕೆಯಿಂದ ಮಣ್ಣಿನ ಫಲವತ್ತತೆ ಹಾಳಾಗುತ್ತದೆ. ನ್ಯಾನೊ ಯೂರಿಯಾ ಬಳಕೆಯಿಂದ ಶೇ 80ರಷ್ಟು ಇಳುವರಿ ಸಾಧ್ಯ, ಎಂದು ಉಪ ಕೃಷಿ ನಿರ್ದೇಶಕ ರೇವಣಸಿದ್ದನಗೌಡ ತಿಳಿಸಿದರು. ಕೃಷಿ ವಿ.ವಿ. ವಿಸ್ತರಣಾ ಘಟಕದ ಗಂಗಪ್ಪಗೌಡ ಬಿರಾದರ್, ಬೇಸಾಯ ತಜ್ಞ ಶರಣಪ್ಪ ಕುರಿ, ಪರಮೇಶ್ವರಪ್ಪ, ಇತರರಿದ್ದರು.



ಉದಯವಾಹಿನಿ ಚಿತ್ರ

**ಭಾರತೀಯ ಯೋಗ ಶಿಕ್ಷಣ ಸಂಸ್ಥೆ ಚಿತ್ರದುರ್ಗ ವತಿಯಿಂದ ದಿನಾಂಕ 16/8/2025 ಶನಿವಾರ ಸಂಜೆ ಶ್ರೀ ಕೃಷ್ಣ ಜನ್ಮಾಷ್ಟಮಿ ಪೂಜಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು ಸಂಸ್ಥೆ ಗೌರವ ಅಧ್ಯಕ್ಷ ಸತ್ಯಣ್ಣ , ಹಿರಿಯ ಪೊಲೀಸ್ ಅಧಿಕಾರಿ ಮಲ್ಲಿಕಾರ್ಜುನಚಾರ್ ಆರೋಗ್ಯದ ಶಿಕ್ಷಣಾಧಿಕಾರಿ ಮಹೇಶ್ ಡಿ ಯೋಗ ಶಿಕ್ಷಕಿ ಮಂಜುಳಾರಾಜೇಶ್ ಹಾಗೂ ಸಂಸ್ಥೆಯ ಅಧ್ಯಕ್ಷ ಹಾಗೂ ಯೋಗ ಪ್ರಚಾರಕ ರವಿ ಕೆ.ಅಂಬೇಕರ್ ಉಪಸ್ಥಿತರಿದ್ದರು.**

---

## 60 ಕೋಟಿ ಅನುದಾನ ಬಿಡುಗಡೆ ಮಾಡಿ

• ಉದಯವಾಹಿನಿ ಹಾಸನ

ಹಿಮ್ಸ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಕೂಡಲೇ ಕಾರ್ಯಾರಂಭ ಮಾಡುವಂತೆ ಆಗ್ರಹಿಸಿ ಜನಪರ ಚಳವಳಿಗಳ ಒಕ್ಕೂಟದ ಸದಸ್ಯರು ಆಸ್ಪತ್ರೆ ಕಟ್ಟಡದ ಎದುರು ಜನಾರೋಗ್ಯದ ಸ್ವಾತಂತ್ರ್ಯಕ್ಕಾಗಿ ಸಾಮೂಹಿಕ ಸತ್ಯಾಗ್ರಹ ನಡೆಸಿದರು. ಕೆಪಿಆರ್‌ಎಸ್ ಜಿಲ್ಲಾ ಘಟಕದ ಅಧ್ಯಕ್ಷ ಎಚ್. ಆರ್. ನವೀನ್ ಕುಮಾರ್ ಮಾತನಾಡಿ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ತೆರೆಯಲು ನಮಗೆ ತಿಳಿದ ಮಾಹಿತಿಯಂತೆ ಹಾಗೂ ಇಲ್ಲಿನ ತಜ್ಞರು ಹೇಳುವಂತೆ 60 ಕೋಟಿ ಅನುದಾನ ಅಗತ್ಯವಿದೆ. ಇದರಿಂದ ಉಳಿದಿರುವ ಸಿವಿಲ್ ಕಾಮಗಾರಿ ಸೇರಿದಂತೆ ಅಗತ್ಯ ಸಲಕರಣೆ ಹಾಗೂ ವೈದ್ಯರನ್ನು ನೇಮಿಸಿಕೊಳ್ಳಬಹುದಾಗಿದೆ ಎಂದರು.

ಈ ಆಸ್ಪತ್ರೆ ಪ್ರಾರಂಭ ಮಾಡಿದರೆ ಜಿಲ್ಲೆ ಸೇರಿದಂತೆ ಸುಮಾರು 5-6 ಜಿಲ್ಲೆಗಳ ಸಾರ್ವಜನಿಕರಿಗೆ ಆರೋಗ್ಯ ಸೇವೆ ಒದಗಿಸಬಹುದಾಗಿದೆ. ಜಿಲ್ಲಾ ಉಸ್ತುವಾರಿ ಸಚಿವರು ಮುಖ್ಯಮಂತ್ರಿ ಜೊತೆ ಮಾತುಕತೆ ನಡೆಸಿ ಕೂಡಲೇ ಅಗತ್ಯ ಅನುದಾನ ಬಿಡುಗಡೆಗೆ ಕ್ರಮ ಕೈಗೊಳ್ಳಬೇಕು ಎಂದರು.

---

## ಕೇಣಿ ಬಂದರು ಸ್ಥಾಪನೆ ಅಗತ್ಯ : ಸಚಿವ ಮಂಕಾಳ ವೈದ್ಯ

• ಉದಯವಾಹಿನಿ ಕಾರವಾರ

ಕೇಣಿ ಸರ್ವಋತು ಆಳಸಮುದ್ರ ಗ್ರೀನ್‌ಫೀಲ್ಡ್ ಬಂದರು ಯೋಜನೆ ಅಭಿವೃದ್ಧಿ ದೃಷ್ಟಿಯಿಂದ ಅಗತ್ಯವಿದೆ. ಯೋಜನೆ ವಿರೋಧಿಸಿದರೆ ಕಂಪನಿಯು ನೆರೆ ರಾಜ್ಯದಲ್ಲಿ ಯೋಜನೆ ಜಾರಿಗೆ ಮುಂದಾಗುವ ಆತಂಕವಿದೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಹೇಳಿದರು.

ಖಾಸಗಿ ಸಹಭಾಗಿತ್ವದಲ್ಲಿ ನಡೆಯುತ್ತಿರುವ ರಾಜ್ಯದ ಮೊದಲ ಬಂದರು ಇದು. ಸಮುದ್ರದಲ್ಲೇ ಬಂದರು ನಿರ್ಮಾಣ ಆಗಲಿದೆ. ಮೀನುಗಾರರದಾಗಲಿ, ರೈತರದಾಗಲಿ ಜಾಗ ಸ್ವಾಧೀನಪಡಿಸಿಕೊಳ್ಳುತ್ತಿಲ್ಲ. ಅವರಿಗೆ ತೊಂದರೆ ಮಾಡದೆ ಯೋಜನೆ ಜಾರಿಗೆ ತರಲು ಸೂಚಿಸಲಾಗಿದೆ.

ರಸ್ತೆ, ರೈಲ್ವೆ ಸಂಪರ್ಕಕ್ಕೆ ಅಲ್ಪ ಪ್ರಮಾಣದಲ್ಲಿ ಭೂಸ್ವಾಧೀನವಾಗಬಹುದು' ಎಂದು ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಅಂಕೋಲಾದಲ್ಲಿ ವಿಮಾನ ನಿಲ್ದಾಣ ಯೋಜನೆ ಭೂಸ್ವಾಧೀನಕ್ಕೆ ಶೇ 50ರಷ್ಟು ಹಣ ಬಿಡುಗಡೆಯಾಗಿದೆ. ಉಳಿದ ಮೊತ್ತ ಬಿಡುಗಡೆಯಾದ ತಕ್ಷಣವೇ ಸ್ವಾಧೀನ ಪ್ರಕ್ರಿಯೆ ಆರಂಭಿಸಲಾಗುತ್ತದೆ ಎಂದರು.



ಉದಯವಾಹಿನಿ ಚಿತ್ರ

ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ವಿರೋಧವಿದೆ. ಜಿಲ್ಲೆಯ ಪರಿಸರಕ್ಕೆ ಧಕ್ಕೆ ತರುವ ಯಾವುದೇ ಯೋಜನೆ ಜಾರಿಗೆ ಬೇಡ ಎಂದು ಅಭಿಪ್ರಾಯ ಹೇಳಿದ್ದೇನೆ. ಅಣು ಸ್ಥಾವರ, ಜಲವಿದ್ಯುತ್ ಯೋಜನೆಗೆ ಜಾಗ ಸ್ವಾಧೀನವಾಗಿದೆ. ಸಿಆರ್.ಝಡ್ ನಿಯಮಾವಳಿಯಿಂದ ಕರಾವಳಿಯಲ್ಲಿ ತೊಂದರೆ ಆಗಿದೆ. ಹೀಗಾಗಿ ಹೊಸ ಯೋಜನೆ ಬೇಡ ಎಂದು ಹೇಳಿದ್ದೇನೆ' ಎಂದರು.

ಖಾಸಗಿ ಜಮೀನುಗಳಲ್ಲಿ ಚಿರೇಕಲ್ಲು ಗಣಿಗಾರಿಕೆ ನಡೆಸಲು ಅನುಮತಿ ನೀಡುವಂತೆ ಸರ್ಕಾರದಮಟ್ಟದಲ್ಲಿ ಚರ್ಚಿಸಲಾಗಿದೆ. ಜಿಲ್ಲೆಯಿಂದ ಅಕ್ರಮವಾಗಿ ಗಣಿಗಾರಿಕೆ ನಡೆಸಿ ತೆಗೆಯಲಾದ ಮರಳನ್ನು ಗೋವಾ ರಾಜ್ಯಕ್ಕೆ ಸಾಗಿಸುತ್ತಿರುವ ದೂರು ಹೆಚ್ಚಿದ್ದು, ಅವುಗಳ ನಿಯಂತ್ರಣಕ್ಕೆ ಅಧಿಕಾರಿಗಳಿಗೆ ಸೂಚಿಸಲಾಗುವುದು' ಎಂದರು.

> **'ಮೀನುಗಾರರು, ರೈತರಿಗೆ ತೊಂದರೆಯಾಗದಂತೆ ಯೋಜನೆ ಕಾರ್ಯಗತಗೊಳಿಸಲು ಸೂಚನೆ ನೀಡಲಾಗಿದೆ. ಅನ್ಯ ರಾಜ್ಯಗಳಲ್ಲಿ ಖಾಸಗಿ ಸಹಭಾಗಿತ್ವದಡಿಯಲ್ಲಿ ಕೈಗೊಂಡ ಯೋಜನೆಗಳ ಬಗ್ಗೆಯೂ ಪರಿಶೀಲಿಸಿ. ನಂತರ ಕ್ರಮಕ್ಕೆ ಮುಂದಾಗಲಾಗುವುದು. ಯೋಜನೆ ಜಾರಿಯ ಬಳಿಕ ಉದ್ಯೋಗಾವಕಾಶದಲ್ಲಿ ಮೀನುಗಾರರಿಗೆ ಆದ್ಯತೆ ನೀಡಲು ಸೂಚಿಸಿದ್ದೇನೆ. ಕಂಪನಿಯವರು ಒಪ್ಪಿದ್ದಾರೆ. ಒಂದು ವೇಳೆ ಜನರಿಗೆ ಯೋಜನೆಯಿಂದ ತೊಂದರೆಯಾದರೆ ವಿರೋಧ ಮಾಡುತ್ತೇನೆ.-ಮಂಕಾಳ ವೈದ್ಯ**

---

## ಅತ್ಯಾಚಾರ ಎಸಗಿದ ಆಪರಾಧಿಗೆ 20 ವರ್ಷ ಜೈಲು ಶಿಕ್ಷೆ

• ಉದಯವಾಹಿನಿ ಕೊಪ್ಪಳ

ಪರಿಶಿಷ್ಟ ಪಂಗಡಕ್ಕೆ ಸೇರಿದ ಬಾಲಕಿಯನ್ನು ಅಪಹರಿಸಿ ಅತ್ಯಾಚಾರ ಎಸಗಿದ ವಿನೋದ ಕೊತಬಾಳ ಎಂಬಾತ ಮೇಲಿನ ಆರೋಪ ಸಾಬೀತಾಗಿದ್ದು ಅಪರಾಧಿಗೆ 20 ವರ್ಷ ಜೈಲು ಮತ್ತು10 ಸಾವಿರ ದಂಡ ವಿಧಿಸಿ ಇಲ್ಲಿನ ಪೋಕ್ಸೊ ನ್ಯಾಯಾಲಯದ ನ್ಯಾಯಾಧೀಶರಾದ ಕುಮಾರ ಡಿ.ಕೆ. ಅವರು ಆದೇಶಿಸಿದ್ದಾರೆ. ಎರಡು ವರ್ಷಗಳ ಹಿಂದೆ ಕುಷ್ಟಗಿ ತಾಲ್ಲೂಕಿನ ಹನುಮಸಾಗರ ಪೊಲೀಸ್ ಠಾಣೆ ವ್ಯಾಪ್ತಿಯ ನಿಲೋಗಲ್ ಗ್ರಾಮ ಸೀಮಾದ ಜಮೀನೊಂದರಲ್ಲಿ ಬಾಲಕಿ ತನ್ನ ಗೆಳತಿಯೊಂದಿಗೆ ಬಯಲು ಬಹಿರ್ದೆಸೆಗೆ ಹೋದಾಗ ವಿನೋದ ಹಾಗೂ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನೊಬ್ಬ ಬಾಲಕಿಗೆ ಬೆದರಿಕೆಯೊಡ್ಡಿ ಕರೆದುಕೊಂಡು ಹೋಗಿದ್ದಾರೆ. ಆವ ವಿನೋದ ಅತ್ಯಾಚಾರ ಎಸಗಿದ್ದಾನೆ.

ಕಾನೂನು ಸಂಘರ್ಷಕ್ಕೊಳಗಾದ ಬಾಲಕ ಬಾಲಕಿಯ ಗೆಳತಿಯನ್ನು ಹೆದರಿಸಿ ತನ್ನ ಹತ್ತಿರ ನಿಲ್ಲಿಸಿಕೊಂಡಿದ್ದ. ಬಾಲಕಿ ಚೀರಾಡುವ ಧ್ವನಿ ಕೇಳಿ ಗ್ರಾಮದ ಜನ ಓಡಿ ಬಂದಾಗ ಆರೋಪಿ ವಿನೋದ ಹಾಗೂ ಬಾಲಕ ಅಲ್ಲಿಂದ ಓಡಿ ಹೋಗಿದ್ದರು. ಮನೆಯಲ್ಲಿ ವಿಷಯ ತಿಳಿಸಿದರೆ ಜೀವ ಸಹಿತ ಬಿಡುವುದಿಲ್ಲ ಎಂದು ಬೆದರಿಕೆ ಒಡ್ಡಿದ ಮತ್ತು ಅತ್ಯಾಚಾರ ಎಸಗಿದ ಕುರಿತು ಹನುಮಸಾಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಕುಷ್ಟಗಿ ವೃತ್ತದ ಸಿಪಿಐ ನಿಂಗಪ್ಪ ಎನ್.ಆರ್. ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು.

---

## ಮೀನುಗಾರಿಕೆ ಇಲಾಖೆ ವತಿಯಿಂದ ಮೀನು ಕೃಷಿಕರ ದಿನಾಚರಣೆ ಆಚರಣೆ

• ಉದಯವಾಹಿನಿ ಸಿರುಗುಪ್ಪ

ತಾಲ್ಲೂಕಿನ ನಡವಿ ಗ್ರಾಮದ ಹೊರವಲಯದಲ್ಲಿರುವ ಶ್ರೀ ವೆಂಕಟ ಕೃಷ್ಣ ಮೀನು ಪಾಲನ ಕೇಂದ್ರದಲ್ಲಿ ನಡೆದ ರಾಷ್ಟ್ರೀಯ ಮೀನು ಕೃಷಿಕರ ದಿನಾಚರಣೆ ಅಂಗವಾಗಿ ಸಭೆಯನ್ನು ಉದ್ಘಾಟಿಸಿದ ಬಳ್ಳಾರಿ ಮೀನುಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಷಡಕ್ಷರಿ ಅವರು ಮೀನು ಕೃಷಿಕರ ಪಿತಾಮಹರಾದ ದಿವಂಗತ ಪ್ರೊ. ಡಾ. ಹೀರಲಾಲ್ ಚೌದ್ರಿ ಅವರ ಭಾವಚಿತ್ರಕ್ಕೆ ಪೂಜೆ ಮಾಡುವುದರ ಮೂಲಕ ಉದ್ಘಾಟಿಸಿದರು.

ನಂತರ ಮಾತನಾಡಿ ಪ್ರೋ.ಡಾ.ಹೀರಾಲಾಲ್ ಚೌಧರಿ ಮತ್ತು ಅರುಣ್ ಕೃಷ್ಣನ್ ಅವರನ್ನು ಭಾರತದಲ್ಲಿ ನೀಲಿ ಕ್ರಾಂತಿಯ ಪಿತಾಮಹರೆಂದು ಪರಿಗಣಿಸಲಾಗುತ್ತದೆ.

ಅವರು ದೇಶಕ್ಕೆ ಆರ್ಥಿಕ ಸಮೃದ್ಧಿಯನ್ನು ಸಾಧಿಸುವ ಮತ್ತು ಮೀನುಗಾರಿಕೆ ಅಭಿವೃದ್ಧಿಗಾ ನೀರಿನ ಸಂಪನ್ಮೂಲಗಳನ್ನು ಬಳಸಿಕೊಳ್ಳುವ ಮೂಲಕ ಆಹಾರ ಮತ್ತು ಪೌಷ್ಟಿಕಾಂಶ ಭದ್ರತೆಗೆ ಕೊಡುಗೆ ನೀಡುವ ದೃಷ್ಟಿಕೋನವನ್ನು ಹೊಂದಿದ್ದರು.



ಉದಯವಾಹಿನಿ ಚಿತ್ರ

**ದೇಶಕ್ಕೆ ಆರ್ಥಿಕ ಸಮೃದ್ಧಿ**

ಡಾ. ಚೌಧರಿಯವರ ಸೆರೆಯಲ್ಲಿ ಕಾರ್ಪ್ ಮೊದಲ ಯಶಸ್ವಿ ಪ್ರೇರಿತ ಮೊಟ್ಟೆಯಿಡುವಿಕೆಯು ಉಪನಗರ ಮತ್ತು ಗ್ರಾಮೀಣ ಭಾರತದಲ್ಲಿ ಅಸಾಮಾನ್ಯ ಮೀನು ಕೃಷಿ ಚಟುವಟಿಕೆಗೆ ಕಾರಣವಾಯಿತು.

ಗಂಗಾ ನದಿಯ ಉಬ್ಬರವಿಳಿತದ ನೀರಿನಲ್ಲಿ ತೇಲುತ್ತಿರುವ ಮೀನುಗಳನ್ನು ಗಮನಿಸುತ್ತಿದ್ದ ಡಾ. ಹಿರಾಲಾಲ್ ಚೌಧರಿ, ಮೀನಿನ ಹೊಟ್ಟೆಯನ್ನು ಒತ್ತಿದಾಗ ಪಾರದರ್ಶಕ ಮೊಟ್ಟೆಗಳು ಬಿಡುಗಡೆಯಾಗುವುದನ್ನು ಗಮನಿಸಿದರು. ಈ ವಿದ್ಯಮಾನಗಳಿಂದ ಪ್ರೇರಿತರಾಗಿ, ಅವರು ಕಾರ್ಪ್‌ನ ಸಂತಾನೋತ್ಪತ್ತಿ ಪ್ರಕ್ರಿಯೆಗಳ ಬಗ್ಗೆ ಸಂಶೋಧನೆ ಮಾಡಲು ಪ್ರಾರಂಭಿಸಿದರು.

ಡಾ. ಹಿರಾಲಾಲ್ ಚೌಧರಿಯವರು 1940 ಮತ್ತು 50 ರ ದಶಕಗಳಲ್ಲಿ, ಸಿಹಿನೀರಿನ ಜಲಚರ ಸಾಕಣೆಯನ್ನು ಅಭಿವೃದ್ಧಿಪಡಿಸುವ ಯಾವುದೇ ಪ್ರಯತ್ನಗಳು ಇರಲಿಲ್ಲ ಮತ್ತು ಮೀನು ಸಂತಾನೋತ್ಪತ್ತಿಯ ಅಗಾಧ ಸಾಮರ್ಥ್ಯದ ಕುರಿತು ಯಾವುದೇ ಸಂಶೋಧನಾ ಮೂಲಸೌಕರ್ಯ ಇರಲಿಲ್ಲ. ಡಾ. ಚೌಧರಿ ಸಾಂಪ್ರದಾಯಿಕ ಬುದ್ಧಿವಂತಿಕೆಯ ಮಿತಿಗಳನ್ನು ಮೀರಿ ಯೋಚಿಸುವ ದೂರದೃಷ್ಟಿಯನ್ನು ಹೊಂದಿದ್ದರು. ಡಿಬಿಟಿಯಲ್ಲಿ ಅವರ ಅಧಿಕಾರಾವಧಿಯಲ್ಲಿ ಮೀನು ತಳಿಗಳ ಯಶಸ್ವಿ ಅಭಿವೃದ್ಧಿ ಇತಿಹಾಸ ನಿರ್ಮಿಸಿತು ಎಂದು ಮೀನು ಕೃಷಿಕರಿಗೆ ಮಾಹಿತಿ ನೀಡಿದರು.

ನಂತರ ಮೀನುಗಾರಿಕೆ ಇಲಾಖೆ ವತಿಯಿಂದ ಮೀನು ಕೃಷಿ ಪ್ರಗತಿಪರ ರೈತರಿಗೆ ಮತ್ತು ಸಹಕಾರ ಸಂಘಗಳಿಗೆ ಪರಿತೋಷಕ ಪ್ರಶಸ್ತಿ ನೀಡಲಾಯಿತು.

---

## ನಿವೃತ್ತ ನ್ಯಾಯಮೂರ್ತಿ ಎಚ್ ಎನ್ ನಾಗಮೋಹನದಾಸ್ ವರದಿಯಿಂದ ಬಲಗೈ ಸಮುದಾಯಕ್ಕೆ ಅನ್ಯಾಯ

• ಉದಯವಾಹಿನಿ ಮುದ್ದೇಬಿಹಾಳ

ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್‌ದಾಸ್ ಆಯೋಗವು ಪರಿಶಿಷ್ಟ ಜಾತಿಯಲ್ಲಿ ಸಂಗ್ರಹಿಸಿದ ದತ್ತಾಂಶದಲ್ಲಿ ಸಾಕಷ್ಟು ಲೋಪಗಳಿದ್ದು, ಛಲವಾದಿ ಸಮುದಾಯಕ್ಕೆ ಅನ್ಯಾಯವಾಗಿದೆ ಎಂದು ಆರೋಪಿಸಿದ ಭಾರತೀಯ ಭೀಮಸೇನೆಯ ರಾಜ್ಯ ಉಪಾಧ್ಯಕ್ಷ ಪ್ರಕಾಶ ಕಪನೂರ ಭಾರತೀಯ ಭೀಮ್ ಸೇನೆ ಹಾಗೂ ವಿವಿಧ ದಲಿತ ಮುಖಂಡರು ಸಭೆಯಲ್ಲಿ ಆಯೋಗದ ವರದಿಯನ್ನು ಒಪ್ಪಲು ಸಾಧ್ಯವಿಲ್ಲ ಎಂದು ಘೋಷಣೆ ಮಾಡಿದರು. ಅನ್ಯಾಯ ಸರಿಪಡಿಸದ ಹೊರತು ಒಳಮೀಸಲಾತಿ ಜಾರಿಗೆ ಅವಕಾಶ ನೀಡುವುದಿಲ್ಲ ಎಂದು ಅಸಮಾಧಾನ ಹೊರಹಾಕಿದರು.



ಪರಿಶಿಷ್ಟ ಜಾತಿಯ ಬಲಗೈ ಸಮುದಾಯಕ್ಕೆ ಸೇರಿದ ಪರೈಯ್ಯ, ಪರವನ್ ಜಾತಿಯನ್ನು ಎಡಗೈ ಪಂಗಡಕ್ಕೆ ಸೇರಿಸಲಾಗಿದೆ. ಬಲಗೈ ಸಮುದಾಯಕ್ಕೆ ಸೇರಿದ ಇನ್ನೂ ಹಲವು ಜಾತಿಗಳನ್ನು ಅತ್ಯಂತ ಹಿಂದುಳಿದ ಜಾತಿಗಳ ಗುಂಪಿಗೆ ಸೇರಿಸಿ ಬಲಗೈ ಸಮುದಾಯದ ಜನಸಂಖ್ಯೆಯನ್ನು ಉದ್ದೇಶ ಪೂರ್ವಕವಾಗಿ ಕಡಿಮೆ ಮಾಡಲಾಗಿದೆ. ಜಾತಿಯೇ ಅಲ್ಲದ ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಸಮುದಾಯಕ್ಕೆ ನಿಗದಿಪಡಿಸಿದ ಶೇ 1ರಷ್ಟು ಮೀಸಲಾತಿಯನ್ನು ರದ್ದುಪಡಿಸಬೇಕು ಎಂದು ಆಗ್ರಹಿಸಿದರು.

---

## ಕ್ರಾಂತಿವೀರ ಸಂಗೊಳ್ಳಿ ರಾಯಣ್ಣರು ಪುಣ್ಯ ಪುರುಷರು: ಖಾಶೆಂಪುರ್

• ಉದಯವಾಹಿನಿ ಬೀದರ್

ಇಡೀ ದೇಶದಲ್ಲಿ ಸ್ವಾತಂತ್ರ್ಯದ ಪೂರ್ವದಲ್ಲಿ ಸ್ವಾತಂತ್ರ್ಯದ ಸಲುವಾಗಿ ಬ್ರಿಟಿಷರ ವಿರುದ್ಧ ಹೋರಾಟ ಮಾಡಿದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣರವರ ಮೂರ್ತಿ ಪಕ್ಕದಲ್ಲಿ ಹೋದ್ರೆ ಇವತ್ತಿಗೂ ಮೈ ಜುಮ್ ಎನ್ನುತ್ತೆ ಎಂದು ಮಾಜಿ ಸಚಿವರು, ಜೆಡಿಎಸ್ ಪಕ್ಷದ ಹಿರಿಯ ನಾಯಕರಾಗಿರುವ ಬಂಡೆಪ್ಪ ಖಾಶೆಂಪುರ್ ರವರು ಹೇಳಿದರು. ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವ ಘರ್ಜನೆ ಜಿಲ್ಲಾ ಸಮಿತಿ ಬೀದರ್ ವತಿಯಿಂದ ಬೀದರ್ ನಗರದ ಶ್ರೀ ಸಾಯಿ ಆದರ್ಶ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಹಮ್ಮಿಕೊಂಡಿದ್ದ '79ನೇ ಸ್ವಾತಂತ್ರ್ಯೋತ್ಸವ ಹಾಗೂ 229ನೇ ಸಂಗೊಳ್ಳಿ ರಾಯಣ್ಣ ಜಯಂತ್ಯೋತ್ಸವ ಮತ್ತು ಮಾಜಿ ಸೈನಿಕರಿಗೆ ವಿಶೇಷ ಸನ್ಮಾನ ಕಾರ್ಯಕ್ರಮ' ದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಸಂಗೊಳ್ಳಿ ರಾಯಣ್ಣರ ವ್ಯಕ್ತಿತ್ವದ ಬಗ್ಗೆ ತಿಳಿಸಿದರು.

ಸಂಗೊಳ್ಳಿ ರಾಯಣ್ಣರವರು ಹುಟ್ಟಿದ್ದು ಆ.15, ಅಂದೇ ನಮ್ಮ ದೇಶದ ಸ್ವಾತಂತ್ರ್ಯ ದಿನಾಚರಣೆ, ಅವರು ಹುತಾತ್ಮರಾಗಿರುವುದು ಜನವರಿ 26, ಅಂದು ನಮ್ಮ ದೇಶದ ಗಣರಾಜ್ಯೋತ್ಸವ ದಿನಾಚರಣೆಯಾಗಿದೆ. ಸಂಗೊಳ್ಳಿ ರಾಯಣ್ಣರಂತಹ ಪುಣ್ಯ ಪುರುಷರನ್ನು ಮತ್ತೆ ಎಲ್ಲೂ ಕಾಣಲು ಸಾಧ್ಯವಾಗದು. ಅಂತಹ ವ್ಯಕ್ತಿತ್ವ ಅವರದ್ದು ಎಂದು ಸಂಗೊಳ್ಳಿ ರಾಯಣ್ಣರ ಶೌರ್ಯ, ಸಾಹಸವನ್ನು ಮಾಜಿ ಸಚಿವ ಬಂಡೆಪ್ಪ ಖಾಶೆಂಪುರ್ ರವರು ಸ್ಮರಿಸಿದರು. ವೇದಿಕೆ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಔದತ್ತಪೂರದ ಶ್ರೀ ಶ್ರೀ ಶ್ರೀ ಶಿವಯೋಗಿ ಮಚೇಂದ್ರನಾಥ ಮಹಾರಾಜರು, ಖಾನಪೂರದ ಶ್ರೀ ಕ್ಷೇತ್ರ ಮೈಲಾರ ಮಲ್ಲಣ್ಣ ದೇವಸ್ಥಾನದ ಪ್ರಧಾನ ಅರ್ಚಕರಾದ ಶ್ರೀ ಬಸಪ್ಪ ಹಿರಿವಗ್ಗೆರವರು, ಉಚ್ಚಾದ ಶ್ರೀ ಬೀರಲಿಂಗೇಶ್ವರ ಪೀಠಾಧಿಪತಿಗಳಾದ ಪೂಜ್ಯ ಶ್ರೀ ಬಾಲ ತಪಸ್ವಿ ಗೋಪಾಲ ಮುತ್ಯಾರು ವಹಿಸಿದ್ದರು.



ಉದಯವಾಹಿನಿ ಚಿತ್ರ

---

## ಶ್ರೀಕೃಷ್ಣ ಜನ್ಮಾಷ್ಟಮಿಯು ಅತ್ಯಂತ ಪವಿತ್ರವಾದ ಹಬ್ಬ

• ಉದಯವಾಹಿನಿ, ಚಿಂಚೋಳಿ

ಶ್ರೀಕೃಷ್ಣ ಜನ್ಮಾಷ್ಟಮಿ ಹಬ್ಬವು ಅತ್ಯಂತ ಪವಿತ್ರವಾದ ಹಾಗೂ ಸಂತೋಷದಾಯಕವಾದ ಹಬ್ಬವಾಗಿದೆ ಎಂದು ಕಂದಾಯ ಇಲಾಖೆ ಶೀರಸ್ತೆದಾರ ಶಶಿಧರಸ್ವಾಮಿ ಹೇಳಿದರು.

**ಶ್ರಾವಣ ಮಾಸದ ಕೃಷ್ಣ ಅಷ್ಟಮಿ**

ಪಟ್ಟಣದ ತಹಶೀಲ್ ಕಛೇರಿಯಲ್ಲಿ ತಾಲ್ಲೂಕಾಡಳಿತ ವತಿಯಿಂದ ಹಮ್ಮಿಕೊಂಡ ಶ್ರೀಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಶ್ರೀಕೃಷ್ಣ ಭಾವಚಿತ್ರಕ್ಕೆ ಪೂಜಿಸಿ ಮಾಲಾರ್ಪಣೆ ಮಾಡಿ ಮಾತನಾಡಿದ ಅವರು, ಶ್ರೀಕೃಷ್ಣ ಜನ್ಮಾಷ್ಟಮಿ ಹಬ್ಬವನ್ನು ದೇಶ -ವಿದೇಶಗಳಲ್ಲೂ ಅತ್ಯಂತ ಭಕ್ತಿ ಮತ್ತು ಸಂತೋಷದಿಂದ ಆಚರಿಸಲಾಗುತ್ತದೆ, ಜನ್ಮಾಷ್ಟಮಿಯು ಕೇವಲ ಒಂದು ಧಾರ್ಮಿಕ ಹಬ್ಬವಲ್ಲ ಬದಲಾಗಿ ಇದು ಪ್ರೀತಿ, ಭಕ್ತಿ, ಮತ್ತು ಸಂಸ್ಕೃತಿಯ ಸಂಕೇತವಾಗಿದೆ.

ಶ್ರೀಕೃಷ್ಣನು ವಿಷ್ಣು ದೇವನ 8ನೇ ಅವತಾರವಾಗಿದ್ದು, ವಿಷ್ಣು ದೇವನು ಈ ಕೃಷ್ಣನ ಅವತಾರದಲ್ಲಿ ಶ್ರಾವಣ ಮಾಸದ ಕೃಷ್ಣ ಅಷ್ಟಮಿ ತಿಥಿಯಂದು ಜನಿಸಿದರು ಎಂದು ಹೇಳಲಾಗುತ್ತದೆ, ಈ ದಿನವನ್ನೇ ನಾವು ಶ್ರೀಕೃಷ್ಣ ಜನ್ಮಾಷ್ಟಮಿ ಎಂದು ಆಚರಿಸಲಾಗುತ್ತದೆ, ಶ್ರೀಕೃಷ್ಣ ಜನ್ಮಾಷ್ಟಮಿ ದಿನದಂದು ಕೃಷ್ಣನನ್ನು ಪೂಜಿಸುವುದರ ಜೊತೆಗೆ ಆತನ ಭಜನೆಗಳನ್ನು, ಮಂತ್ರಗಳನ್ನು ಪಠಿಸುವ ಸಂಪ್ರದಾಯವಿದೆ. ಜನ್ಮಾಷ್ಟಮಿಯು ಜನರ ನಡುವೆ ಪ್ರೀತಿ ಸೌಹಾರ್ದತೆ ಮತ್ತು ಏಕತೆಯನ್ನು ಹೆಚ್ಚಿಸುತ್ತದೆ ಎಂದರು.

ಈ ಸಂದರ್ಭದಲ್ಲಿ ತಾಲ್ಲೂಕಾ ಯಾದವ ಸಮಾಜದ ಅಧ್ಯಕ್ಷ ಪದ್ಮಾಕರ್ ಯಾದವ ದೋಟಿಕೊಳ, ಪಾಂಡು ಯಾದವ ಕಾವಲಿ, ರೇಣುಕಾಸಿದ್ದ ಮೋಘಾ, ರಮೇಶ ಭೂತಪೂರ, ಶ್ರೀಕಾಂತ ಪಿತ್ತಲ್, ಕೃಷ್ಣಪ್ಪಾ ಯಾದವ ಮಿರಿಯಾಣ, ನರಸಿಂಹಮ್ಮ ಯಾದವ, ಮಹೇಶ ಯಾದವ ಮಿರಿಯಾಣ, ಅನೇಕರಿದ್ದರು.



ಉದಯವಾಹಿನಿ ಚಿತ್ರ

---


• ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಪಟ್ಟಣದ ಬಿ.ಎಚ್.ರಸ್ತೆ ದ್ವಿಪಥ ರಸ್ತೆಯಾಗಿ ಅಭಿವೃದ್ಧಿಯಾಗುತ್ತಿದೆ

# ಒಂದೆಡೆ ಅಭಿವೃದ್ಧಿ: ಮತ್ತೊಂದೆಡೆ ಸಮಸ್ಯೆ: ಸಾರ್ವಜನಿಕರಿಗೆ ತೊಂದರೆ


• ಉದಯವಾಹಿನಿ ತರೀಕೆರೆ

ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಪಟ್ಟಣದ ಬಿ.ಎಚ್.ರಸ್ತೆ ದ್ವಿಪಥ ರಸ್ತೆಯಾಗಿ ಅಭಿವೃದ್ಧಿಯಾಗುತ್ತಿದೆ. ಅಭಿವೃದ್ಧಿ ಕಾಮಗಾರಿ ಸಂದರ್ಭದಲ್ಲಿ ಸಾರ್ವಜನಿಕರು ಮತ್ತು ವಾಹನಗಳ ಸಂಚಾರಕ್ಕೆ ಪರ್ಯಾಯ ವ್ಯವಸ್ಥೆ ಮಾಡದೆ ಇರುವುದರಿಂದ ಜನ ಸಮಸ್ಯೆ ಎದುರಿಸುತ್ತಿದ್ದಾರೆ.

ಸರ್ಕಾರದ ವಿವಿಧ ಮೂಲಗಳಿಂದ ಕೋಡಿ ಕ್ಯಾಂಪ್ ವೃತ್ತದಿಂದ ಎಂ.ಜಿ.ಸರ್ಕಲ್‌ವರೆಗಿನ 1.2 ಕಿ.ಮೀ. ರಸ್ತೆ ಅಭಿವೃದ್ಧಿಗೆ ಈ 20 ಕೋಟಿ, ಅರಣ್ಯ ಇಲಾಖೆ ಮುಂಭಾಗದಿಂದ ಮಿನಿ ವಿಧಾನಸೌಧದ ವರೆಗೆ 300 ಮೀ ರಸ್ತೆ ಅಭಿವೃದ್ಧಿಗೆ 4 ಕೋಟಿ, ಮಿನಿ ವಿಧಾನಸೌಧದಿಂದ ಆರ್‌ಟಿಒ ಕಚೇರಿವರೆಗೆ ಮತ್ತು ಕೋಡಿಕ್ಯಾಂಪ್ ಸರ್ಕಲ್‌ನಿಂದ ಯಾಸೀಲ್ ಅಂಗಡಿವರೆಗೆ ತಲಾ 450ಮೀ. ನಂತೆ ರಸ್ತೆ ಅಭಿವೃದ್ಧಿಗೆ ಒಟ್ಟು 9.95 ಕೋಟಿ, ಯಾಸೀನ್ ಅಂಗಡಿಯಿಂದ ಭದ್ರಾ ಮೇಲ್ದಂಡೆ ನಾಲೆವರೆಗೆ ದ್ವಿಪಥ ರಸ್ತೆ ಅಭಿವೃದ್ಧಿ ಹಾಗೂ ಭದ್ರಾ ನಾಲೆಯಿಂದ ಎನ್.ಎಚ್. 206ರ ಬೈಪಾಸ್ ರಸ್ತೆವರೆಗೆ ರಿ ಸರ್ಫೇಸಿಂಗ್‌ಗೆ 4.32 ಕೋಟಿ ಹಾಗೂ ಈ ಮುಖ್ಯ ರಸ್ತೆಯಲ್ಲಿ ಬರುವ ಕೋಡಿಕ್ಯಾಂಪ್‌ನ ಮತ್ತು ಮಹಾತ್ಮ ಗಾಂಧಿ ವೃತ್ತಗಳ ಅಭಿವೃದ್ಧಿಗಾಗಿ ತಲಾ 4 ಕೋಟಿ ಅನುದಾನ ಬಿಡುಗಡೆಯಾಗಿದೆ.



ಉದಯವಾಹಿನಿ ಚಿತ್ರ



ಉದಯವಾಹಿನಿ ಚಿತ್ರ

**4 ಕೋಟಿ ಅನುದಾನ ಬಿಡುಗಡೆ**

ಪಟ್ಟಣದ ಹಳಿಯೂರಿನಿಂದ ಆರ್‌ಟಿಒ ಕಚೇರಿವರೆಗೆ ರಸ್ತೆ ವಿಸ್ತರಣೆ ಕಾರ್ಯ ಭರದಿಂದ ಸಾಗುತ್ತಿದೆ. ಇದರಿಂದ ರಸ್ತೆಯ ಇಕ್ಕೆಲಗಳಲಿದ್ದ ಮರಗಳನ್ನು ತೆರವುಗೊಳಿಸಿ, ಬಾಕ್ಸ್ ಚರಂಡಿ ಕಾಮಗಾರಿ ಭಾಗಶಃ ಅಂತಿಮ ಹಂತದಲ್ಲಿದೆ. ಇದೇ ರೀತಿ ಅಲ್ಲಲ್ಲಿ ಸೇತುವೆ ನಿರ್ಮಾಣ ಕಾಮಗಾರಿ ನಡೆಯುತ್ತಿದೆ.

ಆದರೆ, ಈ ಸಂದರ್ಭದಲ್ಲಿ ಸಾರ್ವಜನಿಕರು ಓಡಾಡಲು, ವಾಹನ ಸಂಚಾರಕ್ಕೆ ಗುತ್ತಿಗೆದಾರರು ಮತ್ತು ಅಧಿಕಾರಿಗಳು ಸಮರ್ಪಕವಾಗಿ ವ್ಯವಸ್ಥೆ ಮಾಡಿಲ್ಲ. ಇದರಿಂದಾಗಿ ಪಟ್ಟಣದಲ್ಲಿ ದಿನನಿತ್ಯ ವಾಹನ ದಟ್ಟಣೆ ಉಂಟಾಗುತ್ತಿದೆ.


ಚರಂಡಿ ಮತ್ತು ಸೇತುವೆ ನಿರ್ಮಾಣ ಸಂದರ್ಭದಲ್ಲಿ ಹಾಗೂ ಈ ಹಿಂದೆ ಹಾಳಾಗಿದ್ದ ರಸ್ತೆಯಿಂದಾಗಿ ಹಲವು ಹೊಂಡಗಳಾಗಿದ್ದು, ರಸ್ತೆ ಕಾಮಗಾರಿ ಪ್ರಾರಂಭವಾದಾಗಿನಿಂದ ಮಳೆ ಬಂದಾಗ ಗುಂಡಿಗಳಲ್ಲಿ ನೀರು ತುಂಬಿಸಿದೆ. ಮಳೆ ನಿಂತಾಗ ದೂಳಿನ ಸಮಸ್ಯೆ ಆಗುತ್ತಿದೆ. ಇದರಿಂದ ಅವಘಡಗಳೂ ನಡೆದಿವೆ. ಮಳೆ ಇಲ್ಲದೆ ಇದ್ದಾಗ ನೀರು ಸಿಂಪಡಿಸಿ ದೂಳು ಏಳದಂತೆ ಕ್ರಮ ವಹಿಸಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.


> **ಪಟ್ಟಣದಲ್ಲಿ ಬಿ.ಎಚ್.ರಸ್ತೆಯ ಕಾಮಗಾರಿ ಭರದಿಂದ ಸಾಗಿದ್ದು, ಕಾಮಗಾರಿ ನಡೆಯುವ ಸಂದರ್ಭದಲ್ಲಿ ಸಾರ್ವಜನಿಕರಿಗೆ ಮತ್ತು ವಾಹನ ಸಂಚಾರಕ್ಕೆ ತೊಂದರೆಯಾಗದಂತೆ ನಿರ್ವಹಿಸಲು ಸೂಚಿಸಲಾಗಿದೆ. ಮುಂದಿನ ಬೇಸಿಗೆಯೊಳಗೆ ಕಾಮಗಾರಿ ಸಂಪೂರ್ಣವಾಗಿ ಪೂರ್ಣಗೊಳ್ಳುವ ಸಾಧ್ಯತೆ ಇದೆ.-ಸೋಮಶೇಖರ್ ಬಿ.**
> **ಲೋಕೋಪಯೋಗಿ ಇಲಾಖೆಯ ತರೀಕೆರೆ ಎಇಇ**

> **ತರೀಕೆರೆ ಪಟ್ಟಣದಲ್ಲಿ ನಡೆಯುತ್ತಿರುವ ರಸ್ತೆ ವಿಸ್ತರಣೆಯ ಕಾಮಗಾರಿಗೆ ಯಾರೂ ತೊಂದರೆ ನೀಡುತ್ತಿಲ್ಲ. ಆದರೆ, ಅದನ್ನು ವ್ಯವಸ್ಥಿತವಾಗಿ ನಿರ್ವಹಿಸುತ್ತಿಲ್ಲ. ಮಳೆಗಾಲವಾದ್ದರಿಂದ ಚರಂಡಿ ನಿರ್ಮಾಣ ಮಾಡಿದ ನಂತರ ಚರಂಡಿ ಪಕ್ಕದಲ್ಲಿ ಗುಂಡಿಗಳು ಹಾಗೂ ಮಣ್ಣಿನ ರಾಶಿ ಬಿದ್ದಿದೆ. ಇವುಗಳನ್ನು ಸರಿಪಡಿಸಿದರೆ ಪಾರ್ಕಿಂಗ್ ವ್ಯವಸ್ಥೆ ಸರಿಯಾಗಿ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ತೊಂದರೆ ಆಗದು ಎಂದು ರೋಟರಿ ಕ್ಲಬ್ ಮಾಜಿ ಅಧ್ಯಕ್ಷ ಎಚ್.ಒ.ದಯಾನಂದ ಹೇಳಿದರು.**
> **-ಎಚ್.ಒ.ದಯಾನಂದ**

# 'ಗ್ರೀನ್ ಗರ್ಲ್'ಗೆ ಸಿಕ್ತು ಪ್ರತಿಷ್ಠಿತ ನಿರ್ಮಾಣ ಸಂಸ್ಥೆಯ ಸಾಥ್

ಕನ್ನಡದ ಖ್ಯಾತ ನಿರ್ಮಾಣ ಸಂಸ್ಥೆಗಳಲ್ಲಿ ಒಂದಾಗಿರುವ ಕೆಆರ್‌ಜಿ ಸಿನಿಮಾ ನಿರ್ಮಾಣ ಸಂಸ್ಥೆ ಹೊಸ ಪ್ರತಿಭೆಗಳಿಗೆ, ಹೊಸ ರೀತಿಯ ಸಿನಿಮಾಗಳಿಗೆ ಹೆಚ್ಚು ಒತ್ತು ನೀಡುತ್ತಿದೆ. ಎಕ್ಕ ಸಿನಿಮಾದ ಸೂಪರ್ ಸಕ್ಸಸ್ ಬಳಿಕ ಕೆಆರ್ಜಿ ಸಂಸ್ಥೆ ಮತ್ತೊಂದು ಸಿನಿಮಾ ರಿಲೀಸ್ ಮಾಡಲು ಸಜ್ಜಾಗಿದೆ. ಹೌದು ಮತ್ತೊಂದು ವಿಭಿನ್ನ ಸಿನಿಮಾ ಮೂಲಕ ಕೆಆರ್‌ಜಿ ಸಂಸ್ಥೆ ಅಭಿಮಾನಿಗಳ ಮುಂದೆ ಬರುತ್ತಿದೆ. ಯುವ ಪ್ರತಿಭೆ ಸಾರ್ಥಕ್ ಹೆಗ್ಡೆ ನಿರ್ದೇಶಿಸಿದ 'ಗ್ರೀನ್ ಗರ್ಲ್' ಸಿನಿಮಾವನ್ನು ಕೆಆರ್‌ಜಿ ಸಂಸ್ಥೆ ರಿಲೀಸ್ ಮಾಡುತ್ತಿದೆ. ಗ್ರೀನ್ ಗರ್ಲ್ ಈಗಾಗಲೇ ಟ್ರೈಲರ್ ಮೂಲಕ ಸಿಕ್ಕಾಪಟ್ಟೆ ಸುದ್ದು ಮಾಡಿದ ಸಿನಿಮಾ. ಟ್ರೈಲರ್ ಮೂಲಕ ಭಾರಿ ನಿರೀಕ್ಷೆ ಮತ್ತು ಕುತೂಹಲ ಮೂಡಿಸಿದ್ದ ಗ್ರೀನ್ ಗರ್ಲ್ ಇದೀಗ ಚಿತ್ರಂದಿರಕ್ಕೆ ಬರತ್ತಿದೆ. ಸಿನಿಮಾ ಬಿಡುಗಡೆಗೆ ಕೆಆರ್ಜಿ ಅಂತ ದೊಡ್ಡ ನಿರ್ಮಾಣ ಸಂಸ್ಥೆಯ ಸಾಥ್ ಸಿಕ್ಕಿರುವುದು ಯುವ ಚಿತ್ರತಂಡಕ್ಕೆ ಮತ್ತಷ್ಟು ಬಲಬಂದಂತೆ ಆಗಿದೆ. ಬಗ್ಗೆ ಪ್ರತಿಕ್ರಿಯೆ ನೀಡಿರುವ ಕೆಆರ್ಜಿ ಸಂಸ್ಥೆ, 'ಕೆಲವು ಕಥೆಗಳನ್ನು ಜೋರಾಗಿ ಮತ್ತು ಸ್ಟ್ರಾಂಗ್ ಆಗಿ ಹೇಳಬೇಕು. ಕೆಆರ್ಜಿ ಸಂಸ್ಥೆ ಯಾವಾಗಲೂ ಹೊಸ ಪ್ರತಿಭೆಗಳ ಬೆಂಬಲಕ್ಕೆ ನಿಂತಿರುತ್ತೆ. ಸಾರ್ಥಕ್ ಹೆಗ್ಡೆ ಅವರ ದಿಟ್ಟ, ನಿರ್ಭೀತ ಚಿತ್ರ, ಗ್ರೀನ್ ಗರ್ಲ್ ಸಿನಿಮಾವನ್ನು





ಕೂಲಿ ಸಿನಿಮಾ ಬಿಡುಗಡೆ

ಪ್ರಸ್ತುತಪಡಿಸಲು ತುಂಬಾ ಉತ್ಸುಕರಾಗಿದ್ದೇವೆ. ಗ್ರೀನ್ ಗರ್ಲ್ ಅಂತರ್ಧರ್ಮೀಯ ಪ್ರೀತಿ ಮತ್ತು ನೈತಿಕ ಪೊಲೀಸ್ಗಿರಿಯ ಬಗ್ಗೆ ಇದೆ. ಸಾರ್ಥಕ್ ಹೆಗ್ಡೆ ಖಂಡಿತವಾಗಿಯೂ ಕನ್ನಡದ ಅತ್ಯುತ್ತಮ ನಿರ್ದೇಶಕರಲ್ಲಿ ಒಬ್ಬರಾಗಲಿದ್ದಾರೆ' ಎಂದು ಹೇಳಿದ್ದಾರೆ.

ಈ ಬಗ್ಗೆ ಸಾರ್ಥಕ್ ಪ್ರತಿಕ್ರಿಯೆ ನೀಡಿ, 'ಕೆಆರ್ಜಿ ಸ್ಟುಡಿಯೋಸ್ ಗ್ರೀನ್ ಗರ್ಲ್ ಸಿನಿಮಾವನ್ನು ಪ್ರಸ್ತುತಪಡಿಸುತ್ತಿರುವುದು ಖುಷಿಯ ವಿಚಾರ. ಪ್ರೀತಿ, ಧರ್ಮ ಮತ್ತು ದಂಗೆಯ ಬಗ್ಗೆ ಧೈರ್ಯ ಮಾಡಿ ಸಿನಿಮಾ ಮಾಡುವುದು ತುಂಬಾ ಕಡಿಮೆ. ಆದರೆ ಗ್ರೀನ್ ಗರ್ಲ್ ಸಿನಿಮಾ ಕೂಡ ಒಂದು' ಎಂದು ಹೇಳಿದ್ದಾರೆ.

# ನನಗೆ ಮದುವೆ ಆಗಿಲ್ಲ ಅಂತ ಯಾರು ಹೇಳಿದ್ದು?



ಜೀವನದ ಬಗ್ಗೆ ಯಾವಾಗಲೂ ಸುದ್ದಿ

ಇತ್ತೀಚಿನ ಸಂದರ್ಶನದಲ್ಲಿ, ನಟಿ ಕಂಗನಾ ರನೌತ್ ಅವರು ಮದುವೆ ಮತ್ತು ಲಿವ್-ಇನ್ ಸಂಬಂಧಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಮದುವೆಯಾಗಲು ತಮಗೆ ಇನ್ನೂ ಸಮಯವಿದೆ ಎಂದು ಹೇಳಿದ ಅವರು, ಲಿವ್-ಇನ್ ಸಂಬಂಧಗಳು ಮಹಿಳೆಯರಿಗೆ ಅಪಾಯಕಾರಿ ಎಂದು ನಂಬುತ್ತಾರೆ ಎಂದು ಹೇಳಿದ್ದಾರೆ.

ನಟಿ ಕಂಗನಾ ರನೌತ್ ಬಗ್ಗೆ ಹೊಸದಾಗಿ ಪರಿಚಯ ಹೇಳುವ ಅಗತ್ಯವಿಲ್ಲ. ಅವರು ಅನೇಕ ಚಿತ್ರಗಳಲ್ಲಿ ವಿವಿಧ ರೀತಿಯ ಪಾತ್ರಗಳನ್ನು ನಿರ್ವಹಿಸುವ ಮೂಲಕ ತಮ್ಮನ್ನು ತಾವು ಸಾಬೀತುಪಡಿಸಿಕೊಂಡಿದ್ದಾರೆ. ಕಂಗನಾ ಇನ್ನು ಬಾಲಿವುಡ್‌ಗೆ ಮಾತ್ರ ಸೀಮಿತವಾಗಿಲ್ಲ. ಅವರು ರಾಜಕೀಯ ಕ್ಷೇತ್ರಕ್ಕೂ ಪಾದಾರ್ಪಣೆ ಮಾಡಿದ್ದಾರೆ. ನಟಿ ಮತ್ತು ಬಿಜೆಪಿ ಸಂಸದೆ ಕಂಗನಾ ತಮ್ಮ ವೈಯಕ್ತಿಕ ಮತ್ತು ವೃತ್ತಿಪರ ಜೀವನದ ಬಗ್ಗೆ ಯಾವಾಗಲೂ ಸುದ್ದಿಯಲ್ಲಿರುತ್ತಾರೆ. ಏತನ್ಮಧ್ಯೆ, ಇತ್ತೀಚಿನ ಸಂದರ್ಶನವೊಂದರಲ್ಲಿ, ಕಂಗನಾ ತಮ್ಮ ವೈಯಕ್ತಿಕ ಜೀವನದ ಬಗ್ಗೆ ದೊಡ್ಡ ಹೇಳಿಕೆ ನೀಡಿದ್ದಾರೆ. ಈ ಹೇಳಿಕೆ ವೈರಲ್ ಆಗಿದೆ. ಸಂದರ್ಶನದಲ್ಲಿ, ಕಂಗನಾ ತಮ್ಮ ಡೇಟಿಂಗ್ ಜೀವನ ಮತ್ತು ಲಿವ್-ಇನ್ ಸಂಬಂಧದ ಬಗ್ಗೆ ಮಾತನಾಡಿದ್ದಾರೆ. ಸಂದರ್ಶನವೊಂದರಲ್ಲಿ ಕಂಗನಾ ಅವರಿಗೆ ಮದುವೆಯ ಬಗ್ಗೆ ಕೇಳಲಾಯಿತು. ಇದಕ್ಕೆ ಕಂಗನಾ, 'ನಾನು ಇನ್ನೂ ಮದುವೆಯಾಗಿಲ್ಲ ಎಂದು ನಿಮಗೆ ಹೇಗೆ ಗೊತ್ತು. ನೀವು ನನ್ನನ್ನು ತಿಳಿದಿದ್ದೀರಿ ಎಂದು ಭಾವಿಸಬೇಡಿ' ಎಂದು ಹೇಳಿದರು. ಆಗ ಕಂಗನಾ ನಗಲು ಪ್ರಾರಂಭಿಸಿದರು. ಇದನ್ನು ಅವರು ಫನ್‌ಗಾಗಿ ಹೇಳಿದ್ದರು.

'ಮದುವೆ ನನ್ನ ಲಿಸ್ಟ್‌ನಲ್ಲಿ ಇದೆ. ಈಗಾಗಲೇ ತಡವಾಗಿದೆ ಎಂದು ನನಗೆ ತಿಳಿದಿದೆ. ಆದರೆ ನಾನು ಖಂಡಿತವಾಗಿಯೂ ಮದುವೆಯಾಗಲಿದ್ದೇನೆ' ಎಂದು ಕಂಗನಾ ಹೇಳಿದರು. ಅಷ್ಟೇ ಅಲ್ಲ, ಮದುವೆಯಾಗಲು ಕುಟುಂಬದಿಂದ ಸಾಕಷ್ಟು ಒತ್ತಡವಿದೆ, ಆದರೆ ಎಲ್ಲವೂ ಆಗಲು ಒಂದು ನಿಗದಿತ ಸಮಯವಿದೆ ಎನ್ನುತ್ತಾರೆ ಅವರು. ಕಂಗನಾ ಕೂಡ ಲಿವ್-ಇನ್ ಸಂಬಂಧಗಳ ಬಗ್ಗೆ ದೊಡ್ಡ ಹೇಳಿಕೆ ನೀಡಿದ್ದಾರೆ. 'ಮದುವೆ ಎಂಬುದು ಜೀವನದಲ್ಲಿ ನಡೆಯುವ ಒಂದು ಒಳ್ಳೆಯ ವಿಷಯ. ಲಿವ್-ಇನ್ ಸಂಬಂಧಗಳಲ್ಲಿ ಹೆಚ್ಚು ನಂಬಿಕೆ ಎಂದರು.

# ಕೃಷ್ಣ ಜನ್ಮಾಷ್ಟಮಿಯಂದೇ ಮಗನ ನಾಮಕರಣ

'ಸಿಂಹಪ್ರಿಯ' ಜೋಡಿಯೆಂದೇ ಖ್ಯಾತಿಗಳಿಸಿದ್ದ ನಟ ವಸಿಷ್ಠ ಸಿಂಹ ಹಾಗೂ ನಟಿ ಹರಿಪ್ರಿಯಾ ತಮ್ಮ ಮುದ್ದಾದ ಮಗನಿಗೆ ಕೃಷ್ಣ ಜನ್ಮಾಷ್ಟಮಿಯಂದೇ ನಾಮಕರಣ ಮಾಡಿದ್ದಾರೆ. ದಂಪತಿಯು ಪುಟ್ಟ ಕೃಷ್ಣನಿಗೆ ವಿಪ್ರಾ ಎನ್ ಸಿಂಹ ಎಂದು ಹೆಸರಿಟ್ಟಿದ್ದಾರೆ. 2023ರ ಜನವರಿ 26ರಂದು ಮೈಸೂರಿನ ಗಣಪತಿ ಸಚಿದಾನಂದ ಆಶ್ರಮದಲ್ಲಿ ವಸಿಷ್ಠ ಸಿಂಹ ಹಾಗೂ ಹರಿಪ್ರಿಯಾ ಜೋಡಿ ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದರು.



2025 ಜನವರಿ 26ರಂದು ಹರಿಪ್ರಿಯಾ ಗಂಡು ಮಗುವಿಗೆ ಜನ್ಮ ನೀಡಿದ್ದರು. ಇದೀಗ ದಂಪತಿಗಳು ಮಗನ ನಾಮಕರಣದ ಸಂಭ್ರಮದಲ್ಲಿದ್ದಾರೆ. ಇದೀಗ ಮೂವರು ಹಳದಿ ಬಣ್ಣದ ಸೇಮ್ ಕಾಸ್ಟ್ಯೂಮ್‌ನಲ್ಲಿ ಮಿಂಚಿದ್ದಾರೆ. ಸದ್ಯ ಸಿಂಹಪ್ರಿಯ ಜೋಡಿಯ ಮಗನ ನಾಮಕರಣದ ಫೋಟೋಸ್ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿದೆ. ನಾಮಕರಣ ಕಾರ್ಯಕ್ರಮದಲ್ಲಿ ನಟಿ ಪ್ರಣಿತಾ, ಸೊನಾಲ್, ಕೆಜಿಎಫ್ ಖ್ಯಾತಿಯ ಗರುಡ ರಾಮ್ ಹಾಗೂ ಇನ್ನಿತರ ಸೆಲೆಬ್ರಿಟಿಗಳು ಭಾಗಿಯಾಗಿದ್ದಾರೆ

# ಚುನಾವಣೆಯಲ್ಲಿ ಗೆದ್ದ ನಟಿ ಶ್ವೇತಾ ಮೆನನ್



ಅಶ್ಲೀಲ ಸಿನಿಮಾದಲ್ಲಿ ನಟಿಸಿದ ಆರೋಪ

ಮಲಯಾಳಂ ಚಲನಚಿತ್ರ ಕಲಾವಿದರ ಸಂಘದ ಚುನಾವಣೆಯಲ್ಲಿ ಶ್ವೇತಾ ಮೆನನ್ ಅಧ್ಯಕ್ಷರಾಗಿ ಆಯ್ಕೆ ಆಗಿದ್ದಾರೆ. ಕುಕ್ಕು ಪರಮೇಶ್ವರನ್ ಮುಖ್ಯ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದಾರೆ. ಇದು ಇತಿಹಾಸದಲ್ಲಿ ಮಹಿಳೆಯರು ಮುಖ್ಯ ಹುದ್ದೆಗಳನ್ನು ಪಡೆದಿದ್ದು ಮೊದಲ ಬಾರಿ. ಮಹಿಳೆಯರ ವಿರುದ್ಧದ ಕಿರುಕುಳದ ಆರೋಪಗಳ ನಂತರ ಈ ಚುನಾವಣೆ ಹೆಚ್ಚಿನ ಮಹತ್ವ ಪಡೆದಿತ್ತು. ಮಲಯಾಳಂ ಚಲನಚಿತ್ರ ಕಲಾವಿದರ ಸಂಘ ಸ್ಥಾಪನೆಯಾದಾಗಿನಿಂದ ಇದೇ ಮೊದಲ ಬಾರಿಗೆ ಇದರ ಚುಕ್ಕಾಣಿ ಮಹಿಳೆಯರ ಪಾಲಾಗಿದ್ದು, ಇತಿಹಾಸ ನಿರ್ಮಾಣ ಆಗಿದೆ. ಮಲಯಾಳಂ ಚಿತ್ರರಂಗದಲ್ಲಿ ಮಹಿಳೆಯರಿಗೆ ಸುರಕ್ಷತೆ ಇಲ್ಲ, ಅನೇಕರಿಗೆ ಕಿರುಕುಳ ಆಗಿದೆ ಎಂಬ ಆರೋಪ ಹೆಚ್ಚಿದ ಬೆನ್ನಲ್ಲೇ ಈ ರೀತಿಯ ಮಹತ್ವದ ಬೆಳವಣಿಗೆ ನಡೆದಿದೆ ಅನ್ನೋದು ವಿಶೇಷ. ಶ್ವೇತಾ ಮೆನನ್ ಅವರು ಅಧ್ಯಕ್ಷರಾಗಿ ಹಾಗೂ ಕುಕ್ಕು ಪರಮೇಶ್ವರನ್ ಅವರು ಮುಖ್ಯ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದಾರೆ. ಶ್ವೇತಾ ಮೆನನ್ ವಿರುದ್ಧ ಇತ್ತೀಚೆಗೆ ಅಶ್ಲೀಲ ಸಿನಿಮಾದಲ್ಲಿ ನಟಿಸಿದ ಆರೋಪ ಕೇಳಿ ಬಂದಿತ್ತು.

ಆಗಸ್ಟ್ 15ರಂದು 'ಅಮ್ಮ' ಚುನಾವಣೆ ನಡೆದಿದೆ.

ಚುನಾವಣೆಯಲ್ಲಿ ಶ್ವೇತಾ ವಿರುದ್ಧ ದೇವನ್ ಹಾಗೂ ಕುಕ್ಕು ಪರಮೇಶ್ವರನ್ ವಿರುದ್ಧ ರವೀಂದ್ರನ್ ಸ್ಪರ್ಧೆ ಮಾಡಿದ್ದರು. ಆದರೆ, ಹೀರೋಗಳಿಗೆ ಸೋಲಾಗಿದೆ. ಈ ಸಂಘ ರಚನೆಗೊಂಡು ಮೂರು 30 ವರ್ಷಗಳ ಮೇಲಾಗಿದೆ. ಆದರೆ, ಈವರೆಗೆ ನಟಿಯರು ಇದಕ್ಕೆ ಆಯ್ಕೆ ಆಗಿರಲಿಲ್ಲ ಅನ್ನೋದು ವಿಶೇಷ. 2024ರಲ್ಲಿ ಮಲಯಾಳಂ ಚಿತ್ರರಂಗದಲ್ಲಿ ಸಾಕಷ್ಟು ಸಂಚಲನ ಸೃಷ್ಟಿ ಆಯಿತು. ಮಲಯಾಳಂ ಸಿನಿಮಾದಲ್ಲಿ ಮಹಿಳೆಯರು ಸಾಕಷ್ಟು ಸಮಸ್ಯೆ ಎದರಿಸುತ್ತಿದ್ದಾರೆ

# ಅಜಯ್ ರಾವ್ ಬಾಳಲ್ಲಿ ಬಿರುಗಾಳಿ!



ನಟ ಅಜಯ್ ರಾವ್ ಸಿನಿಮಾ ನಿರ್ಮಾಣಕ್ಕೆ ಕೈ ಹಾಕಿದ್ದರಿಂದ ಬದುಕಿನಲ್ಲಿ ಬಿರುಗಾಳಿ ಎದ್ದಿದೆ ಎನ್ನಲಾಗುತ್ತಿದೆ. ಪತ್ನಿ ಸ್ವಪ್ನಾ ಅವರನ್ನು ಮದುವೆಯಾದ ನಂತರ ಅಜಯ್ ರಾವ್ ಶ್ರೀ ಕೃಷ್ಣ ಆರ್ಟ್ ಅಂಡ್ ಕ್ರಿಯೇಷನ್ ಹೆಸರಿನಲ್ಲಿ ನಿರ್ಮಾಣ ಸಂಸ್ಥೆಯನ್ನು ಸ್ಥಾಪಿಸಿದ್ದರು. ಪತ್ನಿ ಸ್ವಪ್ನಾ ಅವರು ಸಿನಿಮಾ ನಿರ್ಮಾಣಕ್ಕೆ ಇಳಿಯಬೇಡಿ ಎಂದು ಪದೇ ಪದೇ ಗಂಡನಿಗೆ ಎಚ್ಚರಿಸುತ್ತಿದ್ದರು. ಹೀಗಿದ್ದರೂ ಕೃಷ್ಣಲೀಲಾ, ಯುದ್ಧಕಾಂಡ ಸೇರಿದಂತೆ ಹಲವು ಚಿತ್ರಗಳನ್ನು ಅಜಯ್ ರಾವ್ ನಿರ್ಮಾಣ ಮಾಡಿದ್ದರು. ಯುದ್ಧಕಾಂಡ ಸಿನಿಮಾಗಾಗಿ ಅಜಯ್ ರಾವ್ ಭಾರೀ ಸಾಲ ಮಾಡಿಕೊಂಡಿದ್ದರು.

ಅಷ್ಟೇ ಅಲ್ಲದೇ ಯುದ್ಧಕಾಂಡ ಚಿತ್ರಕ್ಕಾಗಿ ನೆಚ್ಚಿನ ದುಬಾರಿ ಕಾರನ್ನೂ ಮಾರಾಟ ಮಾಡಿದ್ದರು. ಯುದ್ಧಕಾಂಡ ಬಿಡುಗಡೆಯ ನಂತವೂ ಕೌಟುಂಬದಲ್ಲಿ ಪದೇ ಪದೇ ಕಲಹ ನಡೆಯುತ್ತಿತ್ತು.

ವಿಪರೀತ ಸಾಲ ಮಾಡಿಕೊಂಡಿದ್ದೇ ದಾಂಪತ್ಯದಲ್ಲಿ ಬಿರುಕಿಗೆ ಕಾರಣ ಎನ್ನಲಾಗುತ್ತಿದೆ. ಕಲಹಕ್ಕೆ ಬೇಸತ್ತು ವಿಚ್ಛೇದನಕ್ಕೆ ಸ್ವಪ್ನಾ ಅರ್ಜಿ ಸಲ್ಲಿಸಿದ್ದಾರೆ. ಯುದ್ಧಕಾಂಡ ಸಿನಿಮಾ ಸಂದರ್ಭದಲ್ಲಿ ಅಜಯ್ ರಾವ್ ತಮ್ಮ ಬಿಎಂಡಬ್ಲ್ಯು ಕಾರನ್ನು ಮಾರಾಟ ಮಾಡಿದ್ದರು. ಈ ವೇಳೆ ಅವರ ಪುತ್ರಿ ಕಾರನ್ನು ಮಾರಾಟ ಮಾಡಬೇಡಿ ಎಂದು ಹೇಳಿ ಅಳುತ್ತಿರುವ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು.

# ಶಾಹಿದ್ ಅಫ್ರಿದಿ ನಾಯಿ ಮಾಂಸ ತಿಂದಿದ್ದಾನೆ ಅದಕ್ಕೆ ಬೊಗಳ್ತಿದ್ದಾನೆ..!

ಪಾಕಿಸ್ತಾನದ ಮಾಜಿ ನಾಯಕ ಶಾಹಿದ್ ಅಫ್ರಿದಿ ಅವರೊಂದಿಗಿನ ವಿವಾದದ ಬಗ್ಗೆ ಟೀಮ್ ಇಂಡಿಯಾದ ಮಾಜಿ ಆಲ್‌ರೌಂಡರ್ ಇರ್ಫಾನ್ ಪಠಾಣ್ ಸಂದರ್ಶನವೊಂದರಲ್ಲಿ ಮನಬಿಚ್ಚಿ ಮಾತನಾಡಿದ್ದಾರೆ. ಅದರಲ್ಲೂ ತನ್ನ ವೃತ್ತಿಜೀವನದ ಆರಂಭಿಕ ದಿನಗಳಲ್ಲಿ ಅಫ್ರಿದಿಯನ್ನು ಹೇಗೆ ಎದುರಾಕಿಕೊಂಡಿದ್ದೆ ಎಂಬುದನ್ನು ಬಹಿರಂಗಪಡಿಸಿದ್ದಾರೆ. ಟೀಮ್ ಇಂಡಿಯಾದ ಮಾಜಿ ಆಲ್‌ರೌಂಡರ್ ಇರ್ಫಾನ್ ಪಠಾಣ್ ಹಾಗೂ ಪಾಕಿಸ್ತಾನ್ ಕ್ರಿಕೆಟಿಗರ ನಡುವಣ ಜಿದ್ದಾಟ ಎಂದಿಗೂ ಮುಗಿಯದ ಕಥೆ. ಈ ಹಿಂದೆ ಮೈದಾನದಲ್ಲಿ ಕಂಡು ಬರುತ್ತಿದ್ದ ವಾಕ್ಸಮರ ಇದೀಗ ಸೋಷಿಯಲ್ ಮೀಡಿಯಾದಲ್ಲಿ ಮುಂದುವರೆದಿದೆ. ಅದರಲ್ಲೂ ಭಾರತ-ಪಾಕಿಸ್ತಾನ್ ನಡುವಣ ಪಂದ್ಯಗಳ ಫಲಿತಾಂಶದ ಬೆನ್ನಲ್ಲೇ ಪಾಕಿಗಳ ಕಾಲೆಳೆಯುವಲ್ಲಿ ಇರ್ಫಾನ್ ಪಠಾಣ್ ನಿಸ್ಸೀಮರು. ಇಂತಹದೊಂದು ಜಿದ್ದಾಟ ಶುರುವಾಗಿದ್ದು 2006 ರಲ್ಲಿ ಎಂಬುದು ಅನೇಕರಿಗೆ ಗೊತ್ತಿಲ್ಲ.

2006ರಲ್ಲಿ ಪಾಕ್ ಪ್ರವಾಸ ಕೈಗೊಂಡಿದ್ದಾಗ ಇರ್ಫಾನ್ ಫಠಾಣ್ ಕೂಡ ಭಾರತ ತಂಡದಲ್ಲಿದ್ದರು. ಈ ವೇಳೆ ನಡೆದ ಕೆಲ ಕುತೂಹಲಕಾರಿ ಘಟನೆಗಳ ಬಗ್ಗೆ ಟೀಮ್ ಇಂಡಿಯಾದ ಮಾಜಿ ಆಲ್‌ರೌಂಡರ್ ಸಂದರ್ಶನವೊಂದರಲ್ಲಿ ಮನಬಿಚ್ಚಿ ಮಾತನಾಡಿದ್ದಾರೆ. 2006 ರಲ್ಲಿ ಟೀಮ್ ಇಂಡಿಯಾ ಪಾಕಿಸ್ತಾನ ಪ್ರವಾಸದಲ್ಲಿದ್ದಾಗ ಎರಡೂ ತಂಡಗಳ ಆಟಗಾರರು ಕರಾಚಿಯಿಂದ ಲಾಹೋರ್‌ಗೆ ಒಂದೇ ವಿಮಾನದಲ್ಲಿ ಪ್ರಯಾಣಿಸಿದ್ದರು. ಈ ವೇಳೆ ಶಾಹಿದ್ ಅಫ್ರಿದಿ ಯುವ ಆಟಗಾರನಾಗಿದ್ದ




ಇರ್ಫಾನ್ ಪಠಾಣ್ ಅವರನ್ನು ಕೆಣಕುವ ಪ್ರಯತ್ನ ಮಾಡಿದ್ದರು. ಸುಮ್ಮನೆ ಕೂತಿದ್ದ ಇರ್ಫಾನ್ ಪಠಾಣ್ ಅವರ ತಲೆ ಮೇಲೆ ಕೈ ಇಟ್ಟು ಹೇರ್ ಸ್ಟೈಲ್ ಅನ್ನು ಹಾಳು ಮಾಡಿದ್ದ ಅಫ್ರಿದಿ 'ಹೇಗಿದ್ದೀಯ ಮಗು' ಎಂದು ಕೇಳಿದರು. ಈ ವೇಳೆ ಕೋಪಗೊಂಡ ನಾನು, 'ತು ಕಬ್ ಸೆ ಮೇರಾ ಬಾಪ್ ಬನ್ ಗಯಾ (ನೀನು ಯಾವಾಗಿನಿಂದ ನನ್ನ ತಂದೆಯಾದಿರಿ)' ಎಂದು ಕೇಳಿದ್ದೆ. ಇದೇ ವೇಳೆ ಅಫ್ರಿದಿ ನನ್ನನ್ನು ಕೆಲ ಅವಾಚ್ಯ ಶಬ್ದಗಳಿಂದ ನಿಂದಿಸಿದರು. ಇದು ಅಲ್ಲಿಗೆ ಮುಗಿಯಲಿಲ್ಲ. ನಾನು ವಿಮಾನದಲ್ಲಿ ಇತ್ತ ಕಡೆ ಕೂತಿದ್ದರೆ, ಅತ್ತ ಕಡೆ ಅಫ್ರಿದಿ ಹಾಗೂ ಅಬ್ದುಲ್ ರಝಾಕ್ ಕುಳಿತಿದ್ದರು. ಇದೇ ವೇಳೆ ನಾನು ರಝಾಕ್ ಅವರಲ್ಲಿ ಪಾಕಿಸ್ತಾನದಲ್ಲಿ ಲಭ್ಯವಿರುವ ವಿವಿಧ ರೀತಿಯ ಮಾಂಸದ ಬಗ್ಗೆ ಕೇಳಿದೆ. ಅವರು ವಿವಿಧ ರೀತಿಯ ಮಾಂಸದ ಬಗ್ಗೆ ಹೇಳಿದರು.

ಇದೇ ವೇಳೆ ನಾನು ನಾಯಿ ಮಾಂಸ ಲಭ್ಯವಿದೆಯೇ ಎಂದು ಕೇಳಿದೆ. ಇದನ್ನು ಕೇಳಿ ರಝಾಕ್ ಆಘಾತಕ್ಕೊಳಗಾದರು. ಅಲ್ಲದೆ ಈ ಪ್ರಶ್ನೆ ಯಾಕೆ ಎಂದು ಮರುಪ್ರಶ್ನಿಸಿದರು. ಇಲ್ಲಾ, ಶಾಹಿದ್ ಅಫ್ರಿದಿ ನಾಯಿ ಮಾಂಸ ತಿಂದಿರಬೇಕು. ಅದಕ್ಕಾಗಿಯೇ ಅವರು ಬೊಗಳುತ್ತಲೇ ಇರುತ್ತಾರೆ ಎಂದು ನಾನು ಮರು ಉತ್ತರ ನೀಡಿದ್ದೆ. ಇದರಿಂದ ಅಫ್ರಿದಿ ಮತ್ತಷ್ಟು ಕೋಪಗೊಂಡರು. ಇದಾಗ್ಯೂ ನಾನು ನೀಡಿದ ಕೌಂಟರ್ ಅಟ್ಯಾಕ್‌ಗೆ ಶಾಹಿದ್ ಅಫ್ರಿದಿ ತುಟಿಕ್ ಪಿಟಿಕ್ ಅನ್ನಲಿಲ್ಲ ಎಂದು ಇರ್ಫಾನ್ ಪಠಾಣ್ 19 ವರ್ಷಗಳ ಹಳೆಯ ಘಟನೆಯನ್ನು ಮೆಲುಕು ಹಾಕಿದರು.

ಅಂದಿನ ಘಟನೆಯಿಂದಾಗಿ ಅಫ್ರಿದಿ ಹಾಗೂ ನನ್ನ ನಡುವೆ ಇಂದಿಗೂ ಸ್ನೇಹವೇ ಮೂಡಲಿಲ್ಲ. ಈ ಜಿದ್ದಾಜಿದ್ದು ಮೈದಾನದಲ್ಲೂ ಮುಂದುವರೆಯಿತು. ಈ ಪೈಪೋಟಿ ನಡುವೆ ನಾನು ಶಾಹಿದ್ ಅಫ್ರಿದಿಯನ್ನು 11 ಬಾರಿ ಔಟ್ ಮಾಡುವಲ್ಲಿ ಯಶಸ್ವಿಯಾಗಿದ್ದೇನೆ ಎಂದು ಇದೇ ವೇಳೆ ಇರ್ಫಾನ್ ಪಠಾಣ್ ಸ್ಮರಿಸಿದರು.

# 6,6,6,6,6,6 ಎಲ್ಲವೂ ಸ್ಟೇಡಿಯಂನಿಂದ ಆಚೆ

ಪ್ರಸ್ತುತ ದಕ್ಷಿಣ ಆಫ್ರಿಕಾ ತಂಡವು ಟಿ20 ಸರಣಿಗಾಗಿ ಆಸ್ಟ್ರೇಲಿಯಾ ಪ್ರವಾಸದಲ್ಲಿದೆ. ಎರಡೂ ತಂಡಗಳ ನಡುವೆ 3 ಟಿ20 ಪಂದ್ಯಗಳ ಸರಣಿ ನಡೆಯುತ್ತಿದ್ದು ಈಗಾಗಲೇ ಎರಡು ಪಂದ್ಯಗಳು ಮುಗಿದಿವೆ. ಮೊದಲ ಪಂದ್ಯದಲ್ಲಿ ಆಸ್ಟ್ರೇಲಿಯಾ ಗೆದ್ದರೆ, ಎರಡನೇ ಪಂದ್ಯವನ್ನು ಆಫ್ರಿಕಾ ಗೆದ್ದುಕೊಂಡಿತ್ತು. ಇದೀಗ ಸರಣಿಯ ಮೂರನೇ ಪಂದ್ಯ ನಡೆಯುತ್ತಿದ್ದು, ಎರಡನೇ ಪಂದ್ಯದಲ್ಲಿ ಸಿಡಿಲಬ್ಬರದ ಶತಕ ಸಿಡಿಸಿದ್ದ ಆಫ್ರಿಕಾದ ಡೆವಾಲ್ಡ್ ಬ್ರೆವಿಸ್, ಇದೀಗ ಸರಣಿಯ ಕೊನೆಯ ಪಂದ್ಯದಲ್ಲಿ ಕೇವಲ 22 ಎಸೆತಗಳಲ್ಲಿ ಅರ್ಧಶತಕ




ಗಳಿಸಿದರು. ಡೆವಾಲ್ಡ್ 26 ಎಸೆತಗಳಲ್ಲಿ 6 ಸಿಕ್ಸರ್ ಮತ್ತು 1 ಬೌಂಡರಿಯೊಂದಿಗೆ 53 ರನ್ ಗಳಿಸಿದರು. ಮೊದಲ ಟಿ20ಯಲ್ಲಿ ಕೇವಲ 2 ರನ್ ಗಳಿಗೆ ಔಟಾಗಿದ್ದ ಬ್ರೆವಿಸ್ ಎರಡನೇ ಪಂದ್ಯದಲ್ಲಿ 56 ಎಸೆತಗಳಲ್ಲಿ 125 ರನ್ ಗಳಿಸಿ ಅಜೇಯ ಇನ್ನಿಂಗ್ಸ್ ಆಡಿದ್ದರು. ಈ ಪಂದ್ಯದಲ್ಲಿ ಬ್ರೆವಿಸ್ ಸತತ 4 ಎಸೆತಗಳಲ್ಲಿ ನಾಲ್ಕು ಸಿಕ್ಸರ್‌ಗಳನ್ನು ಬಾರಿಸುವ ಮೂಲಕ ತಮ್ಮ ಅರ್ಧಶತಕ ಪೂರೈಸಿದರು. ಮೊದಲ ಇನ್ನಿಂಗ್ಸ್‌ನ 10 ನೇ ಓವರ್‌ನಲ್ಲಿ ಈ ಅದ್ಭುತ ಸಾಧನೆ ಮಾಡಿದ ಬ್ರೆವಿಸ್, ಆರನ್ ಹಾರ್ಡಿ ಬೌಲ್ ಮಾಡಿದ ಈ ಓವರ್‌ನ ಮೂರನೇ, ನಾಲ್ಕನೇ, ಐದನೇ ಮತ್ತು ಆರನೇ ಎಸೆತಗಳಲ್ಲಿ ಸತತ 4 ಸಿಕ್ಸರ್‌ಗಳನ್ನು ಬಾರಿಸಿದರು. ಹಾರ್ಡಿಯ ಈ ಓವರ್‌ನಲ್ಲಿ ಒಟ್ಟು 27 ರನ್‌ಗಳು ಬಂದವು.

ಈ ಪಂದ್ಯದಲ್ಲಿ, ಬ್ರೆವಿಸ್ ಆಸ್ಟ್ರೇಲಿಯಾ ವಿರುದ್ಧ 22 ಎಸೆತಗಳಲ್ಲಿ ಅರ್ಧಶತಕ ಗಳಿಸಿ ತಮ್ಮದೇ ಆದ ದಾಖಲೆಯನ್ನು ಮುರಿದರು. ಇದಕ್ಕೂ ಮೊದಲು, ಕಾಂಗರೂ ತಂಡದ ವಿರುದ್ಧದ ಈ ಟಿ20 ಸರಣಿಯ ಎರಡನೇ ಪಂದ್ಯದಲ್ಲಿ ಬ್ರೆವಿಸ್ 25 ಎಸೆತಗಳಲ್ಲಿ ಅರ್ಧಶತಕ ಗಳಿಸಿದ್ದರು. ಈ ಮೂಲಕ ಆಸ್ಟ್ರೇಲಿಯಾ ವಿರುದ್ಧ ದಕ್ಷಿಣ ಆಫ್ರಿಕಾ ಪರ ಟಿ20 ಸ್ವರೂಪದಲ್ಲಿ ಅತಿವೇಗದ ಅರ್ಧಶತಕ ಗಳಿಸಿದ ಬ್ಯಾಟ್ಸ್‌ಮನ್ ಎನಿಸಿಕೊಂಡಿದ್ದರು.

ಬೇಬಿ ಎಬಿ ಬಿರುಗಾಳಿ ಹೇಗಿತ್ತು?




# ಸಾರ್ವಕಾಲಿಕ ಶ್ರೇಷ್ಠ ಆಟಗಾರರನ್ನು ಹೆಸರಿಸಿದ ಸ್ಮಿತ್

ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ 664 ಪಂದ್ಯಗಳಲ್ಲಿ ಕಣಕ್ಕಿಳಿದಿರುವ ಸಚಿನ್ ತೆಂಡೂಲ್ಕರ್ 100 ಶತಕಗಳೊಂದಿಗೆ ಒಟ್ಟು 34357 ರನ್ ಕಲೆಹಾಕಿದ್ದಾರೆ. ಈ ಮೂಲಕ ಇಂಟರ್‌ನ್ಯಾಷನಲ್ ಕ್ರಿಕೆಟ್‌ನಲ್ಲಿ ಅತ್ಯಧಿಕ ರನ್ ಕಲೆಹಾಕಿದ ಬ್ಯಾಟರ್ ಎನಿಸಿಕೊಂಡಿದ್ದಾರೆ. ಇನ್ನು ಸೌತ್ ಆಫ್ರಿಕಾದ ಆಲ್ ರೌಂಡರ್ ಜಾಕ್ಸ್ ಕಾಲಿಸ್ ಒಟ್ಟು 25,534 ರನ್ ಗಳಿಸಿದ್ದಾರೆ.

ಕ್ರಿಕೆಟ್ ಇತಿಹಾಸದ ಸರ್ವಶ್ರೇಷ್ಠ ಆಟಗಾರ ಯಾರು ಎಂಬುದು ಆಗಾಗ್ಗೆ ಚರ್ಚೆಯಾಗುತ್ತಿರುತ್ತದೆ. ಕೆಲವರು ಆಸ್ಟ್ರೇಲಿಯಾದ ದಂತಕಥೆ ಡಾನ್ ಬ್ರಾಡ್ಮನ್ ಹೆಸರನ್ನು ಹೇಳಿದರೆ, ಇನ್ನೂ ಕೆಲವರು ಕ್ರಿಕೆಟ್ ದೇವರು ಸಚಿನ್ ತೆಂಡೂಲ್ಕರ್ ಅವರ ಹೆಸರನ್ನು ಪ್ರಸ್ತಾಪಿಸುತ್ತಾರೆ. ವೆಸ್ಟ್ ಇಂಡೀಸ್ ದಿಗ್ಗಜ ವಿವಿಯನ್ ರಿಚರ್ಡ್ಸ್ ಹೆಸರು ಹೇಳುತ್ತಾರೆ. ಈ ಚರ್ಚೆಗಳ ನಡುವೆ ವಿರಾಟ್ ಕೊಹ್ಲಿಯ ಹೆಸರು ಕೂಡ ಆಗಾಗ್ಗೆ ಕೇಳಿ ಬರುತ್ತಿರುತ್ತವೆ.



ಇದೀಗ ಆಸ್ಟ್ರೇಲಿಯಾದ ಸ್ಟೀವ್ ಸ್ಮಿತ್ ಕ್ರಿಕೆಟ್ ಅಂಗಳದ ಸಾರ್ವಕಾಲಿಕ ಶ್ರೇಷ್ಠ ಆಟಗಾರರು ಯಾರೆಂಬುದನ್ನು ತಿಳಿಸಿದ್ದಾರೆ.

ಸ್ಟೀವ್ ಸ್ಮಿತ್ ಪ್ರಕಾರ, ಕ್ರಿಕೆಟ್ ಇತಿಹಾಸದ ಶ್ರೇಷ್ಠ ಆಟಗಾರೆಂದರೆ ಸೌತ್ ಆಫ್ರಿಕಾ ಜಾಕ್ಸ್ ಕಾಲಿಸ್ ಹಾಗೂ ಭಾರತದ ಸಚಿನ್ ತೆಂಡೂಲ್ಕರ್.

ಬಿಬಿಸಿ ಸ್ಪೋರ್ಟ್ಸ್ ವೇಲ್ಸ್ ಜೊತೆಗಿನ ಚಿಟ್ ಚಾಟ್‌ನಲ್ಲಿ ಕಾಣಿಸಿಕೊಂಡ ಸ್ಮಿತ್‌ಗೆ ಸಾರ್ವಕಾಲಿಕ ಶ್ರೇಷ್ಠ ಬ್ಯಾಟ್ಸ್‌ಮನ್ ಯಾರು ಎಂಬ ಪ್ರಶ್ನೆಯನ್ನು ಮುಂದಿಡಲಾಗಿತ್ತು. ಈ ಪ್ರಶ್ನೆಗೆ ಸ್ಮಿತ್ ಕಡೆಯಿಂದ ಬಂದ ಉತ್ತರ ಜಾಕ್ಸ್ ಕಾಲಿಸ್. ಕ್ಷಣಾರ್ಧದಲ್ಲೇ ಕ್ಷಮಿಸಿ ಎಂದ ಸ್ಮಿತ್, ಕಾಲಿಸ್ ಸಾರ್ವಕಾಲಿಕ ಶ್ರೇಷ್ಠ ಕ್ರಿಕೆಟಿಗ ಎಂದು ಭಾವಿಸುತ್ತೇನೆ. ಸಾರ್ವಕಾಲಿಕ ಶ್ರೇಷ್ಠ ಬ್ಯಾಟ್ಸ್‌ಮನ್ ಬಹುಶಃ ಸಚಿನ್ ತೆಂಡೂಲ್ಕರ್ ಆಗಿರಬಹುದು ಎಂದರು. ಈ ಮೂಲಕ ಸಾರ್ವಕಾಲಿಕ ಶ್ರೇಷ್ಠ ಕ್ರಿಕೆಟರ್ ಜಾಕ್ಸ್ ಕಾಲಿಸ್ ಹಾಗೂ ಸಾರ್ವಕಾಲಿಕ ಶ್ರೇಷ್ಠ ಬ್ಯಾಟರ್ ಸಚಿನ್ ತೆಂಡೂಲ್ಕರ್ ಎಂಬ ಅಭಿಪ್ರಾಯವನ್ನು ಮುಂದಿಟ್ಟರು.

ಇಲ್ಲಿ ಜಾಕ್ಸ್ ಕಾಲಿಸ್ ಅವರನ್ನು ಶ್ರೇಷ್ಠ ಕ್ರಿಕೆಟಿಗ ಎಂದೇಳು ಮುಖ್ಯ ಕಾರಣ ಅವರ ಆಲ್‌ರೌಂಡರ್ ಪ್ರದರ್ಶನ.,1995 ರಿಂದ 2014 ರವರೆಗೆ ಸೌತ್ ಆಫ್ರಿಕಾ ಪರ 19 ವರ್ಷಗಳ ಕಾಲ ಕಣಕ್ಕಿಳಿದಿದ್ದ ಜಾಕ್ಸ್ ಕಾಲಿಸ್ ಒಟ್ಟು 519 ಪಂದ್ಯಗಳನ್ನು ಆಡಿದ್ದಾರೆ.

ಈ ವೇಳೆ ಅವರು ಬರೋಬ್ಬರಿ 577 ವಿಕೆಟ್‌ಗಳನ್ನು ಕಬಳಿಸಿದ್ದಾರೆ. ಇದರ ಜೊತೆಗೆ 25,534 ರನ್‌ಗಳನ್ನು ಗಳಿಸಿದ್ದಾರೆ. ದಕ್ಷಿಣ ಆಫ್ರಿಕಾದ ಮಾಜಿ ಆಲ್‌ರೌಂಡರ್ ಟೆಸ್ಟ್ ಮತ್ತು ಏಕದಿನ ಎರಡೂ ಸ್ವರೂಪಗಳಲ್ಲಿ 10,000 ಕ್ಕೂ ಹೆಚ್ಚು ರನ್‌ಗಳನ್ನು ಗಳಿಸಿದ್ದಾರೆ ಮತ್ತು ಎರಡರಲ್ಲೂ 250 ಕ್ಕೂ ಹೆಚ್ಚು ವಿಕೆಟ್‌ಗಳನ್ನು ಪಡೆದಿದ್ದಾರೆ. ಹಾಗೆಯೇ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ 664 ಪಂದ್ಯಗಳಲ್ಲಿ ಕಣಕ್ಕಿಳಿದಿರುವ ಸಚಿನ್ ತೆಂಡೂಲ್ಕರ್ 100 ಶತಕಗಳೊಂದಿಗೆ ಒಟ್ಟು 34357 ರನ್ ಕಲೆಹಾಕಿದ್ದಾರೆ. ಈ ಮೂಲಕ ಇಂಟರ್‌ನ್ಯಾಷನಲ್ ಕ್ರಿಕೆಟ್‌ನಲ್ಲಿ ಅತ್ಯಧಿಕ ರನ್ ಕಲೆಹಾಕಿದ ಬ್ಯಾಟರ್ ಎನಿಸಿಕೊಂಡಿದ್ದಾರೆ.

# ಸಂಜು ಸ್ಯಾಮ್ಸನ್ ಮೇಲೆ ಕಣ್ಣು

ಕೊಲ್ಕತ್ತಾ ನೈಟ್ ರೈಡರ್ಸ್ ಫ್ರಾಂಚೈಸಿಯು ಮುಂದಿನ ಸೀಸನ್‌ಗಾಗಿ ಹೊಸ ನಾಯಕ ಹಾಗೂ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಅನ್ನು ಎದುರು ನೋಡುತ್ತಿದೆ. ಇತ್ತ ರಾಜಸ್ಥಾನ್ ರಾಯಲ್ಸ್ ತಂಡದ ವಿಕೆಟ್ ಕೀಪರ್ ಬ್ಯಾಟರ್ ಸಂಜು ಸ್ಯಾಮ್ಸನ್ ಆರ್‌ಆರ್ ಬಳಗದಿಂದ ಹೊರಬರಲು ಬಯಸಿದ್ದಾರೆ. ಹೀಗಾಗಿಯೇ ಇದೀಗ ಸ್ಯಾಮ್ಸನ್ ಮೇಲೆ ಕೆಕೆಆರ್ ಕಣ್ಣಿಟ್ಟಿದೆ. ಇಂಡಿಯನ್ ಪ್ರೀಮಿಯರ್ ಲೀಗ್ ಸೀಸನ್-19 ರಲ್ಲಿ ಸಂಜು ಸ್ಯಾಮ್ಸನ್ ಯಾವ ತಂಡದ ಪರ ಕಣಕ್ಕಿಳಿಯಲಿದ್ದಾರೆ ಎಂಬುದೇ ಈಗ ಕುತೂಹಲ. ಏಕೆಂದರೆ ರಾಜಸ್ಥಾನ್ ರಾಯಲ್ಸ್ ತಂಡದಿಂದ ಹೊರಬರಲು ಸಂಜು ನಿರ್ಧರಿಸಿದ್ದಾರೆ. ಈ ನಿರ್ಧಾರದ ಬೆನ್ನಲ್ಲೇ ಆರ್‌ಆರ್ ತಂಡದ ನಾಯಕನನ್ನು ಖರೀದಿಸಲು ಸಿಎಸ್‌ಕೆ ಫ್ರಾಂಚೈಸಿ ಮುಂದಾಗಿತ್ತು. ಆದರೆ ಸಂಜು ಸ್ಯಾಮ್ಸನ್ ಟ್ರೇಡ್‌ಗಾಗಿ ರಾಜಸ್ಥಾನ್ ರಾಯಲ್ಸ್ ಸ್ಟಾರ್ ಆಟಗಾರರ ಬೇಡಿಕೆಯನ್ನು ಮುಂದಿಟ್ಟಿದ್ದಾರೆ. ಅಂದರೆ ಸಿಎಸ್‌ಕೆ ತಂಡದಲ್ಲಿರುವ ರವೀಂದ್ರ ಜಡೇಜಾ, ರುತುರಾಜ್ ಗಾಯಕ್ವಾಡ್ ಮತ್ತು ಶಿವಂ ದುಬೆ, ಈ ಮೂವರಲ್ಲಿ ಒಬ್ಬರನ್ನು ನೀಡಿದರೆ ಸಂಜು ಸ್ಯಾಮ್ಸನ್ ಅವರನ್ನು ನೀಡುವುದಾಗಿ ಸಿಎಸ್‌ಕೆಗೆ ರಾಜಸ್ಥಾನ್ ರಾಯಲ್ಸ್ ಫ್ರಾಂಚೈಸಿ ತಿಳಿಸಿದೆ.

ಟ್ರೇಡ್ ಮಾಡಿಕೊಳ್ಳಲು ಕೆಕೆಆರ್ ಆಸಕ್ತಿ

ಆದರೆ ಇತ್ತ ಸಿಎಸ್‌ಕೆ ಫ್ರಾಂಚೈಸಿ ಸ್ಟಾರ್ ಆಟಗಾರರನ್ನು ಕಳೆದುಕೊಳ್ಳಲು ಬಯಸುತ್ತಿಲ್ಲ. ಹೀಗಾಗಿಯೇ ಚೆನ್ನೈ ಸೂಪರ್ ಕಿಂಗ್ಸ್ ಹಾಗೂ ರಾಜಸ್ಥಾನ್ ರಾಯಲ್ಸ್ ಫ್ರಾಂಚೈಸಿ ನಡುವಣ ಟ್ರೇಡ್ ಪ್ರಕ್ರಿಯೆಯು ವಿಫಲವಾಗಿದೆ ಎಂದು ವರದಿಯಾಗಿದೆ. ಇದರ ಬೆನ್ನಲ್ಲೇ ಕೊಲ್ಕತ್ತಾ ನೈಟ್ ರೈಡರ್ಸ್ ಫ್ರಾಂಚೈಸಿಯು ರಂಗಕ್ಕೆ ಇಳಿದಿದೆ.



ಕೊಲ್ಕತ್ತಾ ನೈಟ್ ರೈಡರ್ಸ್ ಫ್ರಾಂಚೈಸಿಯು ಸಂಜು ಸ್ಯಾಮ್ಸನ್‌ಗಾಗಿ ಇಬ್ಬರು ಆಟಗಾರರನ್ನು ನೀಡಲು ಮುಂದಾಗಿದೆ. ಆ ಇಬ್ಬರು ಆಟಗಾರರೆಂದು ರಮಣ್‌ದೀಪ್ ಸಿಂಗ್ ಹಾಗೂ ಅಂಗ್‌ಕ್ರಿಶ್ ರಘುವಂಶಿ. ಕಳೆದ ಕೆಲ ವರ್ಷಗಳಿಂದ ಕೆಕೆಆರ್ ತಂಡದ ಭಾಗವಾಗಿರುವ ರಮಣ್‌ದೀಪ್ ಹಾಗೂ ಅಂಗ್‌ಕ್ರಿಶ್ ಅವರನ್ನು ನೀಡುವ ಮೂಲಕ ಸ್ಯಾಮ್ಸನ್ ಅವರನ್ನು ಟ್ರೇಡ್ ಮಾಡಿಕೊಳ್ಳಲು ಕೆಕೆಆರ್ ಆಸಕ್ತಿ ತೋರಿದೆ. ಕೆಕೆಆರ್ ನೀಡಿದ ಈ ಆಫರ್ ಅನ್ನು ರಾಜಸ್ಥಾನ್ ರಾಯಲ್ಸ್ ಫ್ರಾಂಚೈಸಿ ಇನ್ನೂ ಸಹ ತಿರಸ್ಕರಿಸಿಲ್ಲ. ಹೀಗಾಗಿ ಇಬ್ಬರು ಆಟಗಾರರೊಂದಿಗೆ ಕೊಲ್ಕತ್ತಾ ನೈಟ್ ರೈಡರ್ಸ್ ಹಾಗೂ ರಾಜಸ್ಥಾನ್ ರಾಯಲ್ಸ್ ನಡುವೆ ಟ್ರೇಡ್ ಕುದುರಿಕೊಳ್ಳುವ ಸಾಧ್ಯತೆಯಿದೆ. ಹೀಗೆ ಟ್ರೇಡ್ ಪ್ರಕ್ರಿಯೆ ಯಶಸ್ವಿಯಾದರೆ ಸಂಜು ಸ್ಯಾಮ್ಸನ್ ಮುಂದಿನ ಸೀಸನ್‌ನಲ್ಲಿ ಕೆಕೆಆರ್ ಪರ ಕಣಕ್ಕಿಳಿಯುವುದನ್ನು ಎದುರು ನೋಡಬಹುದು.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966